ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಸಂಪುಟ 3 ಸಂಚಿಕೆ 9

ರೂ. 5/-

ಮಾರ್ಚ್ 01, 2009

ಕನ್ನಡ ವಾರಪತ್ರಿಕೆ





ಯುಪಿಎ ಸರ್ಕಾರದ ವಿಶ್ವಾಸದ್ರೋಹಕ್ಕೆ ಕಳಸವಿಟ್ಟ ಬಜೆಟ್



ಬಜೆಟ್ಟೇ ಅಲ್ಲದ ಕರ್ನಾಟಕದ ಎಡಬಿಡಂಗಿ ಬಜೆಟ್



ಹಿಂದುತ್ವ ತಾಲಿಬಾನಿಗೆ ಮತ್ತೊಂದು ಬಲಿ ಅಶ್ವಿನಿ

ಕರ್ನಾಟಕದಲ್ಲಿ ಆರ್ಥಿಕ ಬಿಕ್ಕಟ್ಟಿನ ಕರಿಛಾಯೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಮಾರ್ಚ್ 01, 200

ಎರಡು

ನೋಟ



ಡಾ. ಜಿ. ಭಾಸ್ಕರ ಮಯ್ಯ

ಮತಾಂತರ

ಎಂಬ ದುರ್ಗಮ ಅರಣ್ಯದಲ್ಲಿ ಒಂದು ಪಯಣ

ದಲಿತರು ಮತ್ತು ಅವರ್ಣೀಯರು ಸಂಘಟಿತರಾಗದೇ ಬರಿದೇ 'ಮನುವಾದ' 'ಬ್ರಾಹ್ಮಣವಾದ' ಎಂದು ಹೇಳಿದ್ದನ್ನೇ ಹೇಳುತ್ತಿದ್ದರೆ ಏನು ಪ್ರಯೋಜನ? ಪೇಜಾವರ ಸ್ವಾಮಿ ದಲಿತರ ಜೊತೆಗೆ ಊಟ ಮಾಡಿದ ಕೂಡಲೇ ದಲಿತರ ಬದುಕು ಸುಧಾರಿಸಿ ಬಿಡುತ್ತದೆಯೇ? ಅಥವಾ ಒಬ್ಬ ದಲಿತನು ಪೇಜಾವರ ಶಿಷ್ಯನಾದರೆ ಉಳಿದ ದಲಿತರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಪರಿವರ್ತನೆಯಾಗುತ್ತದೆಯೇ? ಇಷ್ಟಕ್ಕೂ ಪೇಜಾವರ ಸ್ವಾಮಿ ಇದನ್ನೆಲ್ಲಾ ಒಪ್ಪಿಕೊಂಡರೆ ಪೇಜಾವರ ಸ್ವಾಮಿಯನ್ನು ಉಡುಪಿ ಮಾಧ್ವರು ಗಟಾರಕ್ಕೆಸೆಯದೆಯೇ ಬಿಡುತ್ತಾರೆಯೇ?.

ಆತ ಸ್ವಾಮಿಯಾಗಿಯಂತೂ ಉಳಿಯುವುದು ಖಂಡಿತವಾಗಿಯೂ ಅಸಾಧ್ಯ; ಜೀವಂತವಾಗಿರುವುದೂ ಪ್ರಾಯಃ ಕಷ್ಟ ಸಾಧ್ಯ. ಇಷ್ಟಕ್ಕೂ ಪೇಜಾವರ ಸ್ವಾಮಿಯಿಂದ ಇಂತದ್ದನ್ನೆಲ್ಲಾ ನಿರೀಕ್ಷಿಸುವುದಾದರೂ ಏತಕ್ಕೆ? ಹಿಂದೂ ಧರ್ಮದ ಯಜಮಾನಿಕೆಯನ್ನು ಅವರಿಗೆ ಕೊಟ್ಟವರು ಯಾರು? ಅವರು ಓರ್ವ ಧಾರ್ಮಿಕ ಮುಖಂಡ ಕೂಡಾ ಅಲ್ಲ. ಬಾಬರಿ ಮಸೀದಿ ಧ್ವಂಸ, ರಾಮನಿಗೆ ಪೂಜೆ ಸಲ್ಲಿಸಿದ ಸಂಘ ಪರಿವಾರದ ನಾಯಕ, ಕಪಟ, ವಂಚನೆ, ಸುಳ್ಳು, ಸಮಯಕ್ಕೊಂದು ನಡೆ, ಗಳಿಗೆಗೊಂದು ಮಾತು - ಸಂಘಪರಿವಾರದಿಂದ ಅವರು ಮೈಗೂಡಿಸಿಕೊಂಡ 'ಸನ್ನಡತೆ'ಗಳು. ಹೋಗಿ ಹೋಗಿ ಇಂಥ ಪೇಜಾವರರಿಗೆ ಸವಾಲೊಡ್ಡುವುದೆಂದರೆ ಬರೇ ಗಾಳಿ ಗುದ್ದಾಟ. ಸಂಘಪರಿವಾರ ದಲಿತರಿಗೆ ಕೊಡಮಾಡಿದ ಸಂವಿಧಾನದ ಸವಲತ್ತುಗಳನ್ನೇ ನುಂಗಿ ನುಂಗಿ ಹಾಕುತ್ತಿದೆ. ಸಂವಿಧಾನದ ದಸ್ತಾವೇಜಿನ ವಿರುದ್ಧವೇ ಅವರ ಹೋರಾಟವಿದೆ ಎಂಬುದನ್ನು ದಲಿತರು ಗಂಭೀರವಾಗಿ ತೆಗೆದುಕೊಂಡ ಹಾಗೆ ಕಾಣಿಸುತ್ತಿಲ್ಲ. NDA ಅಧಿಕಾರದಲ್ಲಿದ್ದಾಗ ಅವರು ಸಂವಿಧಾನವನ್ನು ಬದಲಾಯಿಸಲು ಮಾಡಿದ ಒಳಸಂಚನ್ನು ನೆನಪಿಸಿಕೊಳ್ಳಬಹುದು.

ಅರ್ಧಾಂಶ ಬಿಡುವುದು

ಇನ್ನು ಒಂದು ವಿಚಾರವಿದೆ. ವರ್ಣ ಜಾತಿ ವ್ಯವಸ್ಥೆಯ ಇತಿಹಾಸವನ್ನು ನೋಡಿದರೆ ಅದಕ್ಕೆ ಸಂಕಟ ಬಂದಾಗಲೆಲ್ಲಾ ಅದು ಉದಾರವಾಗಿ ಬಿಡುತ್ತದೆ. "ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತ:" (ಸಂಪೂರ್ಣ ನಾಶವಾಗುವ ಸಂಭವವಿದ್ದಾಗ ಅರ್ಧಾಂಶವನ್ನು ಪಂಡಿತ ಬಿಟ್ಟು ಬಿಡುತ್ತಾನೆ) ಎಂಬಂತೆ ಆಗ ಅದು ಶೂದ್ರರಿಗೆ ರಾಜ್ಯಾಧಿಕಾರವನ್ನು ವಹಿಸಬಿಡುತ್ತದೆ. ಅವರು ಅಲ್ಪಕಾಲೀನ ಉದ್ದೇಶಗಳಿಂದ ಸಂತೃಪ್ತರಾಗಿ ಬಿಡುತ್ತಾರೆ. ಆದರೆ 'ಜಾತಿವ್ಯವಸ್ಥೆ'ಗೆ ದೀರ್ಘಕಾಲೀನ ಅಜೆಂಡಾ ಇದೆ. ಇಂದು ಸಂಘಪರಿವಾರದಲ್ಲಿ ಅತಿದೊಡ್ಡ ಪ್ರಮಾಣದಲ್ಲಿ ಕೆಳಜಾತಿಯವರು ಹಾಗೂ ದಲಿತರು ತುಂಬಿಕೊಂಡಿರುವುದು 'ಜಾತಿ ವಿರೋಧಿ' ಹೋರಾಟ ಕೊನೆಯುಸಿರು ಎಳೆಯುತ್ತಿರುವುದರ ಸಂಕೇತ. ನಾವೆಲ್ಲಾ ಹಿಂದೂ; ನಾವೆಲ್ಲಾ ಒಂದು; ಆದರೆ ನಮ್ಮ ಜಾತಿ ಮಾತ್ರ ಬೇರೆ ಬೇರೆ!

ಐತಿಹಾಸಿಕ ಸತ್ಯ

ಪೇಜಾವರರು ದಲಿತರಿಗೆ ಬೌದ್ಧ ಧರ್ಮಕ್ಕೆ ಸೇರುವುದಕ್ಕಿಂತ ಆರ್ಯ ಸಮಾಜಕ್ಕೆ ಸೇರುವುದು ಒಳ್ಳೆಯದು ಎಂದು ಸಲಹೆ ಕೊಟ್ಟರು. ಅದೂ ವಿವಾದಕ್ಕೆಡೆಯಾದಾಗ ಬೌದ್ಧ ಧರ್ಮವೂ 'ಹಿಂದೂ ಧರ್ಮವೇ' ಬುದ್ಧನನ್ನು ನಮ್ಮ ಅವತಾರಗಳಲ್ಲೇ ಸೇರಿಕೊಂಡು ಬಿಟ್ಟಿದ್ದೇವೆ ಎಂದು ಅವರೆಂದರು. ಅದಕ್ಕೆ ಕೆಲವು ದಲಿತ ಮುಖಂಡರು ನಮ್ಮನ್ನು ಮಾಧ್ವರನ್ನಾಗಿ ಸ್ವೀಕರಿಸುವ ಎದೆಗಾರಿಕೆ ಇದೆಯೆ? ಎಂದು ಪ್ರಶ್ನಿಸಿದರು. ಸದ್ಯದ ಸ್ಥಿತಿಯಲ್ಲಿ ಮಾಧ್ವರು ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ತಿಳಿದು ತಿರಸ್ಕರಿಸಿದರೂ ವಾದಿರಾಜಸ್ವಾಮಿಗಳು 16ನೆಯ ಶತಮಾನದಲ್ಲಿ ಬಂಟರು ಜೈನರು ಮತ್ತು ಮೊಗವೀರನ್ನು ಮಾಧ್ವ ಬ್ರಾಹ್ಮಣರನ್ನಾಗಿ ಪರಿವರ್ತನೆ ಮಾಡಿದ್ದು ಐತಿಹಾಸಿಕ ಸತ್ಯ. (ಬಿ.ಎ. ಸಾಲೆತ್ತೂರ್: ಹಿಸ್ಟರಿ ಆಫ್ ಸ್ಥಾನಿಕಾಸ್)

'ರಜಪೂತ'ರಾಗಿದ್ದು

ಬೌದ್ಧ-ಬ್ರಾಹ್ಮಣ ಸಂಘರ್ಷಕ್ಕೆ ಬಹಳ ದೊಡ್ಡ ಇತಿಹಾಸವಿದೆ. ಎರಡೂ ಮತಗಳು ಪ್ರಭುತ್ವದ ಸಹಾಯವನ್ನು ಬಯಸುತ್ತಿದ್ದುವು. ಕ್ಷತ್ರಿಯ ರಾಜರು ಬೌದ್ಧರಾಗಿ ಬಿಟ್ಟರೆ ಬ್ರಾಹ್ಮಣರು ಕಂಗಾಲಾಗುತ್ತಿದ್ದರು. ಒಂದಲ್ಲ ಒಂದು ಒಳಸಂಚು ಮಾಡುತ್ತಿದ್ದರು. ವಿದೇಶಿಯರಾದ ಸೀಥಿಯನರು, ಶಕರು ಭಾರತದಲ್ಲಿ ಪ್ರಭುತ್ವ ಪಡೆಯಲು ಧಾಳಿ ಮಾಡುತ್ತಿದ್ದರು. ಆಗ ಬ್ರಾಹ್ಮಣರು ಹೊಸ ಉಪಾಯವೊಂದನ್ನು ಕಂಡುಕೊಂಡರು. ರಾಜಸ್ತಾನದ 'ಅಬೂ' ಪರ್ವತದಲ್ಲಿ ಆ ವಿದೇಶಿಯರಿಂದ ಯಜ್ಞ ಮಾಡಿಸಿ ಅವರನ್ನು 'ರಜಪೂತ'ರನ್ನಾಗಿ ಪರಿವರ್ತಿಸಿದರು. ಮಹಾನ್ ವೀರರೆಂದು ಪ್ರಖ್ಯಾತರಾದ ರಜಪೂತ ಕ್ಷತ್ರಿಯರೆಲ್ಲಾ ವಿದೇಶಿಯರು. ಶೂದ್ರ ಶಿವಾಜಿಯೂ ಕೂಡಾ ಬ್ರಾಹ್ಮಣರಿಗೆ ಅಪಾರ ಧನಸಂಪತ್ತು ನೀಡಿ ಕ್ಷತ್ರಿಯನಾದ!

ಇನ್ನೊಂದೆಡೆ ಈ ಇಪ್ಪತ್ತನೆಯ ಶತಮಾನದಲ್ಲೂ ದಲಿತರ ಬ್ರಾಹ್ಮಣೀಕರಣ ನಡೆಯುತ್ತಿದೆ. ಬಿಹಾರದ ಸಂತಾಲರಲ್ಲಿ, ಮಧ್ಯಪ್ರದೇಶದ ಬಸ್ತಾರ್‌ನಲ್ಲಿ ಮತ್ತು ಕೇರಳದಲ್ಲಿ ದಲಿತರ 'ಬ್ರಾಹ್ಮಣೀಕರಣ'ದ ಹೊಸ ಪ್ರಯೋಗ ನಡೆದಿದೆ. ಒಂದಿಷ್ಟು ದುಡ್ಡು ಖರ್ಚು ಮಾಡಿಸಿ, ಯಜ್ಞಾನುಷ್ಠಾನ ಮಾಡಿಸಿ ದಲಿತರನ್ನು ಬ್ರಾಹ್ಮಣರನ್ನಾಗಿ ಮಾಡಿ ಬಿಡುತ್ತಾರೆ. ಕೇರಳದ ತ್ರಿಶೂರ್, ಎರ್ನಾಕುಲಂ, ಮಲಪ್ಪುರಂ ಮತ್ತು ಕೊಟ್ಟಾಯಂ ಜಿಲ್ಲೆಗಳಲ್ಲಿ ಹಿಂದುಳಿದ ಜಾತಿಗಳ ಜನರಿಂದ 500 ರೂಪಾಯಿ ದಕ್ಷಿಣೆ ಪಡೆದು, ಯಜ್ಞಾನುಷ್ಠಾನ ಮಾಡಿಸಿ ಕೆಲವೇ ಗಂಟೆಗಳಲ್ಲಿ ಅವರನ್ನು ಮೇಲ್ ಜಾತಿಗೆ ಪರಿವರ್ತಿಸಿ ಬಿಡುತ್ತಾರೆ. ಈ ಪರಿವರ್ತನೆಯ ಪದ್ಧತಿಯನ್ನು ಹತ್ತು ವರ್ಷಗಳ ಹಿಂದೆ ಎರ್ನಾಕುಲ ಸಮೀಪದ 'ಪಾಲೀಯಂ'ನಲ್ಲಿ ಹಿಂದೂ ಸಂಘಟನೆಗಳು ಘೋಷಿಸಿದ್ದುವು. ಈ ಸಮ್ಮೇಳನದಲ್ಲಿ ಸುಪ್ರಸಿದ್ಧ ವೇದಜ್ಞ ನಂಬೂದರಿಗಳು ಪಾಲುಗೊಂಡಿದ್ದರು. ತಿರುವಾಂಕೂರು ದೇವಸ್ವಂ ಬೋರ್ಡ್ ಕೆಳಜಾತಿಯ ಜನರಿಗೆ ಒಂದು ವಿಶೇಷ ಪಠ್ಯಕ್ರಮವನ್ನು ತಯಾರಿಸಿ ಅದನ್ನು ಪಾಸುಮಾಡಿದವರಿಗೆ ದೇವಸ್ಥಾನದಲ್ಲಿ ಅರ್ಚಕ ಹುದ್ದೆಗೆ ನೇಮಕಾತಿ ನೀಡುತ್ತಿತ್ತು. ಈ ಬೋರ್ಡಿನ ಅಧೀನದಲ್ಲಿ ಸಾವಿರಾರು ದೇವಸ್ಥಾನಗಳಿವೆ. ಈ 'ಪರಿವರ್ತನೆ'ಯ ಪದ್ಧತಿ ಕಳೆದ ಕೆಲವು ವರ್ಷಗಳಲ್ಲಿ ದೇವಸ್ಥಾನಗಳಲ್ಲಿ ನೌಕರಿ ಪಡೆಯುವುದಕ್ಕೆ ಮಾತ್ರ ಸೀಮಿತವಾಗಿಬಿಟ್ಟಿದೆ ಆದರೆ, ಇನ್ನೊಂದೆಡೆ ಸವರ್ಣೀಯರಿಂದ ಇದಕ್ಕೆ ತೀವ್ರ ಪ್ರತಿಭಟನೆ ವ್ಯಕ್ತವಾಗಿದೆ. ಸವರ್ಣೀಯರು ಸದ್ರೀ ಮಂದಿರಗಳಿಗೆ ಹೋಗುವುದನ್ನೇ ನಿಲ್ಲಿಸಿ ಬಿಟ್ಟರು. ಈಗ ನವ ಪುರೋಹಿತರಿಗೂ ಪರಂಪರಾಗತ ಪುರೋಹಿತರಿಗೂ ಯುದ್ಧ ಆರಂಭವಾಗಿದೆ. ಜಾತಿವ್ಯವಸ್ಥೆ ಎಲ್ಲಿತ್ತೊ ಅಲ್ಲೇ ಗಟ್ಟಿಯಾಗಿ ಕುಳಿತು ನಗುತ್ತಾ ಇತ್ತು!

ಮೀನಾಕ್ಷಿಪುರಂನಲ್ಲಿ ದಲಿತರು ಮತಾಂತರಗೊಂಡು ಇಸ್ಲಾಮ್‌ಮತವನ್ನು ಸ್ವೀಕರಿಸಿದರು. ಅವರನ್ನು ಪುನಃ ಹಿಂದೂ ಮತಕ್ಕೆ ಹಿಂತುರಿಗಿಸಲಾಯಿತು. ಆದರೆ, ವಾಪಾಸು ಹಿಂದುಗಳಾದವರು ಯಾವ ಜಾತಿಗೆ ಸೇರಿದರು? ಅದೇ ಹೀನಾಯ ಬದುಕಿನ 'ಅಸ್ಪೃಶ್ಯ ಬದುಕಿಗೆ' ಮರಳಿದರು!

ಈ ಹಿಂದೆ ಗೋವರ್ಧನ ಪೀಠದ ಶಂಕರಾಚಾರ್ಯ ಸ್ವಾಮಿನಿಶ್ಚಲಾನಂದ ಸರಸ್ವತಿ ಒರಿಸ್ಸಾದಲ್ಲಿ 72 ಕ್ರೈಸ್ತ ಆದಿವಾಸಿಗಳನ್ನು ಹಿಂದೂ ಧರ್ಮದ ತೆಕ್ಕೆಗೆ ತಂದರು. ಅವರಿಗಾಗಿ ಪ್ರತ್ಯೇಕ 'ಸ್ವಸ್ತಿಕ್' ಮಂದಿರದ ವ್ಯವಸ್ಥೆ ಮಾಡಿದರು! ಏಕೆಂದರೆ ಬೇರೆ ದೇವಸ್ಥಾನಗಳಿಗೆ ಅವರು ಪ್ರವೇಶಿಸುವಂತಿಲ್ಲ! ಆ ಸ್ವಾಮಿ ಅದಕ್ಕೆ ಹೀಗೆ ಸಮರ್ಥನೆ ಕೊಡುತ್ತಾರೆ - "ಪ್ರತಿಯೊಂದು ದೇವಸ್ಥಾನಕ್ಕೂ ಅದರದ್ದೇ ಆದ ವಿಧಿವಿಧಾನಗಳಿವೆ. ಎಲ್ಲರೂ ಎಲ್ಲಾ ಮಂದಿರಗಳೊಳಗೆ ನುಗ್ಗುವುದು ಸಾಧ್ಯವಿಲ್ಲ!" ಇತ್ತೀಚೆಗೆ ಗೌರಿ ಲಂಕೇಶ್ ಪತ್ರಿಕೆಯಲ್ಲಿ (ಮೇ 12, 2008) ಶ್ರೀ ರಾಮ ದಿವಾಣ ಅವರು "ಮೈ ಹೋಮ್ ಹೆಸರಿನಲ್ಲಿ ಹಿಂದೂ ಉಗ್ರರ ಮತಾಂತರ" ಲೇಖನ ಪ್ರಕಟವಾಗಿದೆ, ಅದರಲ್ಲಿ ಮೇಘಾಲಯದ 1600 ಆದಿವಾಸಿ ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಕದ್ದು ತಂದು ಕರ್ನಾಟಕದ ಬೇರೆ ಬೇರೆ ಶಾಲೆಗಳಲ್ಲಿ ಸೇರಿಸಿದ ಬಗ್ಗೆ ಮತ್ತು ಅವರನ್ನು ಹಿಂದೂ ಪಡೆಗೆ ಮತಾಂತರಿಸುವ ಹುನ್ನಾರದ ಬಗೆಗೆ ವಿಸ್ತೃತ ವರದಿಯಿದೆ.

ಯುದ್ದೋಪಾದಿ ಮರು ಮತಾಂತರ

ಇತ್ತೀಚಿಗಿನ ಎರಡು ದಶಕಗಳಲ್ಲಿ ಹಿಂದೂ ಮತಕ್ಕೆ ಮರುಮತಾಂತರ ಮಾಡುವ ಕೆಲಸವನ್ನು ಹಿಂದೂ ಕೋಮುವಾದಿ ಸಂಘಟನೆಗಳು ಯುದ್ದೋಪಾದಿಯಲ್ಲಿ ಮಾಡುತ್ತಿವೆ. ಈಶಾನ್ಯ ಭಾರತದಲ್ಲಿ ಸಂಘ ಪರಿವಾರದ ನೂರಾರು ಶಾಲೆಗಳು ಇದೇ ಮತಾಂತರ ಕಾರ್ಯದಲ್ಲಿ ನಿರತವಾಗಿವೆ. ಇವರ ಕಾರ್ಯ ಎರಡು ಬಗೆಯದು: ಒಂದು ಪ್ರಕೃತಿ ಆರಾಧಕ ಆದಿವಾಸಿಗಳನ್ನು ಹಿಂದುತ್ವಕ್ಕೆ ಮತಾಂತರಿಸುವುದು. ಇನ್ನೊಂದು ಕ್ರೈಸ್ತ ಆದಿವಾಸಿ ಹಾಗೂ ದಲಿತರನ್ನು ಮತ್ತೆ ಹಿಂದುತ್ವಕ್ಕೆ ಮತಾಂತರಿಸುವುದು. ಒರಿಸ್ಸಾದಲ್ಲಿ ಲಕ್ಷಣಾನಂದ ಸರಸ್ವತಿ ಅತಿದೊಡ್ಡ ಮಟ್ಟದಲ್ಲಿ ಈ ಮತಾಂತರ ಹಾಗೂ 'ಶುದ್ಧೀಕರಣ' ಕ್ರಿಯೆ (!) ನಡೆಸಿದ್ದಾನೆ. ಕಂದಮಾಲ್‌ನಲ್ಲಿ 'ಪಾನಾ' ಜಾತಿಯ ಕ್ರಿಶ್ಚಿಯನ್ನರಾದ ಆದಿವಾಸಿಗಳಿದ್ದಾರೆ. ಇತ್ತೀಚೆಗೆ ಅವರ ಮೇಲೆ ಭಯಾನಕ ದೌರ್ಜನ್ಯ ಎಸೆಯಲಾಗಿದೆ. 2371 ಕಡೆ ಬೆಂಕಿಯಿಡಲಾಯಿತು. ಚರ್ಚ್‌ಗಳನ್ನು ಸುಟ್ಟಿದ್ದಾರೆ, ಪಾದ್ರಿಗಳನ್ನು ಕೊಂದಿದ್ದಾರೆ. ಸಿಸ್ಟರ್‌ಗಳ ಮೇಲೆ ಅತ್ಯಾಚಾರವೆಸಗಿದ್ದಾರೆ. 'ಅಪೇಕ್ಷಾ' ಎಂಬ ಪತ್ರಿಕೆಯಲ್ಲಿ ಓರ್ವ ಕ್ರೈಸ್ತನ ಈ ಹೇಳಿಕೆಯಿದೆ- "ಭಜರಂಗದಳ ಮತ್ತು ವಿ.ಹಿಂ.ಪ. ನಮ್ಮನ್ನು ಹಿಂದುಗಳಾಗಲು ಬೆದರಿಕೆ ಹಾಕುತ್ತಿದ್ದಾರೆ. ನಾವು 'ಪಾನಾ'ಗಳು ಎಷ್ಟೋ ವರ್ಷಗಳ ಹಿಂದೆ ಕ್ರೈಸ್ತರಾದವರು. ಹಿಂದುಗಳಾಗಲು ನಮಗೆ ಇಷ್ಟವಿಲ್ಲ". ಹಿಂದೂ ಕೋಮುವಾದಿ ಸಂಘಟನೆಗಳು ಸ್ವತಃ ಮತಾಂತರ ಮಾಡುತ್ತಾ, ಕ್ರೈಸ್ತರ ಮೇಲಿನ ಧಾಳಿಯನ್ನು ಸಮರ್ಥಿಸಿಕೊಳ್ಳಲು ಅವರ ಮೇಲೆ 'ಮತಾಂತರ'ದ ಆರೋಪ ಹೊರಿಸುತ್ತಾರೆ. ಇದು ಅವರ ಲಾಗಾಯ್ತಿನ ಪರಂಪರೆ. ಗ್ರಾಹಂ ಸ್ಟೇನ್ ಮತ್ತವನ ಮಕ್ಕಳನ್ನು ಜೀವಂತ ಸುಟ್ಟಾಗ ವಾಜಪೇಯಿಯವರೇ ಈ ಆರೋಪ ಹೊರಿಸಿದ್ದರು!

'ಮನು'ಮೂರ್ತಿ ಒಳಗೆ ಅಂಬೇಡ್ಕರ್ ಹೊರಗೆ

ಈ ದೇಶದ ದುರಂತ ನೋಡಿ: ರಾಜಸ್ತಾನದ ಉಚ್ಚ ನ್ಯಾಯಾಲಯದ ಪರಿಸರದಲ್ಲಿ ಸ್ಥಾಪಿಸಲಾದ 'ಮನು'ವಿನ ಮೂರ್ತಿಯನ್ನು ತೆಗೆದು ಹಾಕಲು ಹೋರಾಟ ನಡೆಯುತ್ತಿದೆ. ವಿಡಂಬನೆಯ ಸಂಗತಿಯೆಂದರೆ ಸಂವಿಧಾನ ಶಿಲ್ಪಿ ಡಾ. ಭೀಮರಾವ್ ಅಂಬೇಡ್ಕರ್ ಅವರ ಮೂರ್ತಿ ರಾಜಸ್ತಾನದ ಉಚ್ಚ ನ್ಯಾಯಾಲಯದ ಹೊರಗಿದ್ದರೆ, ಹಿಂದೂ ಜಾತಿ ವ್ಯವಸ್ಥೆಯ ಸಂಹಿತಾಕಾರ ಮನುವಿನ ಮೂರ್ತಿ ಪರಿಸರದ ಒಳಗೆ ಸ್ಥಾಪಿಸಲ್ಪಟ್ಟಿದೆ!

ಮೊದಲ ಬಾರಿಗೆ ನಾಗಪುರದಲ್ಲಿ ದಲಿತ ಬಂಗಾರು ಲಕ್ಷ್ಮಣ್ ಅವರನ್ನು ಭಾಜಪದ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ಆ ಸಭೆಯಲ್ಲಿ ಆರ್‌ಎಸ್‌ಎಸ್ ನ ಸುದರ್ಶನ್ ಕೂಡಾ ಇದ್ದರು. ಬಂಗಾರು ಲಕ್ಷ್ಮಣ್, 'ಭಾಜಪದಲ್ಲಿ ಮುಸ್ಲಿಂ ಮತ್ತು ದಲಿತರನ್ನು ಸೇರಿಸಿಕೊಳ್ಳುವ ಕೆಲಸವಾಗಬೇಕು' ಎಂದು ಹೇಳಿಕೆ ಕೊಟ್ಟರು. ಎಂದೂ ಅಂಬೇಡ್ಕರ್ ಪ್ರತಿಮೆಯನ್ನು ಕಣ್ಣೆತ್ತಿ ನೋಡದ ಸಂಘ ಪ್ರಮುಖ ಸುದರ್ಶನ್ ಅಂದು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಬಂದರು.


(ಮುಂದುವರಿಯುವುದು)

ಸ್ವಾದಕ್ಕೀಯ

ಚಿವ ರಾಮಚಂದ್ರಗೌಡರ 'ಚೆಡ್ಡಿ' ಅನಾವರಣವೂ ಮತ್ತು ಕಲಾವಿದರ ಮೌನಾಭರಣವೂ

"ನಾನು ನಿಮ್ಮವನೇ, ನಿಮ್ಮಂತೆ ಯೋಚಿಸುವವನೇ, ಕಾರ್ಮಿಕವರ್ಗದ ಖಂಡನಾಗಿ ಕೆಲಸ ಮಾಡಿದವನೇ. ಅಂತಹವ ಇಂದು ಮಂತ್ರಿಯಾಗಿದ್ದೇನೆ. ್ಮ ಕೇಳಿಕೆಗಳೂ ನ್ಯಾಯಬದ್ಧ, ಈಡೇರಿಸಬೇಕಾಗವುಗಳೇ.... ಅದಕ್ಕೆ ಕ್ರಮ ಸುವೇ..."

ಇದು ಫೆಬ್ರವರಿ 5 ರಂದು ಬೆಂಗಳೂರಿನ ವಿಧಾನಸೌಧ ಚಲೋದಲ್ಲಿ ಐತಿಹಾಸಿಕ ಂಘಟಿತ ಕಾರ್ಮಿಕರ ರ್‍ಯಾಲಿ ಉದ್ದೇಶಿಸಿ ವೈದ್ಯಕೀಯ ಶಿಕ್ಷಣ ಸಚಿವ ಮಚಂದ್ರೇಗೌಡರು ಆಡಿದ ಮಾತು. ಇಲ್ಲಿಗೆ ಬರಬೇಕಾದದ್ದು ಖ್ಯಮಂತ್ರಿಗಳು, ಇಲ್ಲ ಕೊನೆಗೆ ಕಾರ್ಮಿಕ ಸಚಿವ ಬಚ್ಚೇಗೌಡ. ಆದರೆ ಾವುದಕ್ಕೂ ಸಂಬಂಧಪಡದ ಈ ಸಚಿವ ಇಲ್ಲಿಗೇಕೆ ಎಂದು ಯಾರೂ ಬಹುದಾದ ಪ್ರಶ್ನೆ ಸಹಜವೇ! ಇದು ಯಡಿಯೂರಪ್ಪನವರ ಬಿಜೆಪಿಯ ಸರ್ಕಾರ ಾರು ಬೇಕಾದರೂ ಎಲ್ಲಿ ಬೇಕಾದರೂ ಏನು ಬೇಕಾದರೂ ಮಾತನಾಡಬಹುದಾದ ವೀಣರ ಸರ್ಕಾರ. ವಾಣಿಜ್ಯೋದ್ಯಮಿ, ಕೈಗಾರಿಕಾ ಮಾಲೀಕರು ಕರೆದ ಎಂತಹುದೇ ವೇಶ, ಸಮಾರಂಭಕ್ಕೆ ಎದ್ದುಬಿದ್ದು ಓಡುವ ಮುಖ್ಯಮಂತ್ರಿ, ಕಾರ್ಮಿಕ ತ್ರಿಗಳು ಈ ಅಸಂಘಟಿತ ಕಾರ್ಮಿಕರ ರ್‍ಯಾಲಿಗೆ ಬರಲು ಅಸಡ್ಡೆ, ಸಹ್ಯವೇ? ಅಂದರೆ ದುಡಿಯುವ ಜನ ಎಂದರೆ ಎಂತಹ.ಕಡು ತಿರಸ್ಕಾರ. ವ್ವರಿಂದಲೇ ಬಂದ ಭೂಪನಿಂದ ಚಪ್ಪಾಳೆ ತಟ್ಟಿಸಿಕೊಳ್ಳಲು ಎಷ್ಟು ಬೇಕೋ ಅಷ್ಟು



ಚಮತ್ಕಾರದ ಭಾಷಣ! ಹಲವು ಸಭೆಗಳಲ್ಲಿ ರಾಮಚಂದ್ರೇಗೌಡ, ಸಿ.ಟಿ.ರವಿ, ಇತ್ಯಾದಿಗಳ ಮಾತು ಕೇಳಿದ್ದವರಿಗೆ ಗೌಡರು ಇಷ್ಟು ಬದಲಾದರೇ ಎಂಬ ಒಂದು ಸಣ್ಣ ಅನುಮಾನ... ಆದರೆ ಚಪ್ಪಾಳೆ ಡೆದಿದ್ದ ಕಾರ್ಮಿಕರೇ ಬರೀ ಬಣ್ಣದ ಮಾತುಗಳನ್ನು ಅರಿತು ಕಪಾಳದಲ್ಲಿ ನೀರು ೋರುವಂತೆ ಬಿಸಿಯಾಗಿದ್ದರು. ಗೌಡರು 'ಸೂಕ್ತ' ಬಂದೋಬಸ್ತಿನಲ್ಲಿ ಬೆನ್ನು ರುಗಿಸಿ ರೈಟ್ ಹೇಳಿದ್ದರು.

ಆದರೆ ಈ ಗೌಡರು ನಿಜಕ್ಕೂ ಬದಲಾಗಿಲ್ಲ. ಅವರು ಇನ್ನೂ ಹಲವಾರು ಮುಖ್ಯ ೋಣೆ ಇರುವ ನಾಗರಿಕ ಸರ್ಕಾರದ ಮಂತ್ರಿ ಎಂಬ ಅರಿವೂ ಇದ್ದಂತಿಲ್ಲ ಂಬುದನ್ನು ಮೊನ್ನೆ ಸಮಾರಂಭವೊಂದರಲ್ಲಿ ರಾಮಚಂದ್ರೇಗೌಡರು ಆಡಿದ ಮಾತುಗಳು-ಕೃತಿಯ ಮೂಲಕ ತೋರಿಸಿಬಿಟ್ಟರು! ಥೇಟ್ ಭಜರಂಗದಳ ಪುಂಡರ ಾಯಕನಂತೆ!

ಮೊನ್ನೆ 17ರಂದು ಗುರುನಾನಕ ಭವನದಲ್ಲಿ ಎರಡು ಸಮಾರಂಭಗಳು. ಒಂದು ಕಲಾವಿದರ ಗ್ಯಾಲರಿ (ಕಲಾಪ್ರದರ್ಶನಕ್ಕೆ) ಯ ಉದ್ಘಾಟನಾ ಸಮಾರಂಭ. ಕೇಂದ್ರ ಚಿವೆ ಅಂಬಿಕಾ ಸೋನಿ, ಖರ್ಗೆ, ಇತರರ ಜೊತೆಗೆ ಸಚಿವ ರಾಮಚಂದ್ರೇಗೌಡ! ಲ್ಲಿ ಬಹುತೇಕ ಎಲ್ಲಾ ಪ್ರಮುಖ ಕಲಾವಿದರಿದ್ದರು. ಆಹ್ವಾನದ ಉಸ್ತುವಾರಿ ವಹಿಸಿಕೊಂಡಿದ್ದ ರಾಜ್ಯ ಸರ್ಕಾರ ಕಲಾ ಅಕಾಡೆಮಿಯ ಹಿಂದಿನ ಅಧ್ಯಕ್ಷರಾಗಿದ್ದ ಿ.ಜಿ.ಅಂದಾನಿ, ಚಂದ್ರಶೇಖರ್ ಮುಂತಾದವರಿಗೆ ಆಹ್ವಾನ ಪತ್ರಗಳನ್ನೇ ಕಳಿಸಲಿಲ್ಲ. ಆದಾಗ್ಯೂ ಇದು ನಮ್ಮದು ಎಂಬ ಕಾರಣಕ್ಕೆ ಅವರೆಲ್ಲಾ ಹಾಜರಿದ್ದರು. ಕೇಂದ್ರ ಚಿವರು ಇತ್ಯಾದಿಗಳ ಮಾತುಗಳ ಬಳಿಕ ರಾಮಚಂದ್ರೇಗೌಡರರು ಬೇಕೆಂದೇ

ಪುಟ 15ಕ್ಕೆ

ಬೆಂಗಳೂರು : ಜಿಲ್ಲಾಧಿಕಾರಿ ಕಛೇರಿ ಮುತ್ತಿಗೆ, ಬಡವರಿಗೆ ನಿವೇಶನ, ರೇಷನ್‌ಗೆ ಆಗ್ರಹ

ಅಲ್ಲಿ ಕಳೆದ 30 ದಿನಗಳಿಂದ ನಿರಂತರ ಧರಣಿ ನಡೆದಿತ್ತು. ಸಿಪಿಐ(ಎಂ) ನೇತೃತ್ವದಲ್ಲಿ ಬೆಂಗಳೂರಿನ ನಿವೇಶನವಿಲ್ಲದ ಬಡವರು, ಕಾರ್ಮಿಕರು ಧರಣಿ ಕುಳಿತಿದ್ದರು. ಬಿಜೆಪಿ ಸರ್ಕಾರ ಜನತೆಗೆ ಚುನಾವಣೆ ಪ್ರಣಾಳಿಕೆಯಲ್ಲಿ ಭರವಸೆ



ಕೊಟ್ಟಂತೆ 2 ರೂ.ಗೆ ಕೆ.ಜಿ. ಅಕ್ಕಿಯನ್ನು ಪಡಿತರ ಆಹಾರವಾಗಿ ನೀಡಬೇಕು, ನಿವೇಶನರಹಿತರಿಗೆ ನಿವೇಶನ ಕೊಡಬೇಕು, ಎ.ಟಿ.ರಾಮಸ್ವಾಮಿ ಸಮಿತಿ ಪತ್ತೆ ಹಚ್ಚಿದ - ಭೂಗಳ್ಳರಿಂದ ಕಬಳಿಕೆಗೆ ತುತ್ತಾಗಿದ್ದ ಭೂಮಿಯನ್ನು ಶ್ರೀಮಂತರಿಗೆ ಹರಾಜು ಹಾಕದೆ ಬಡವರಿಗೆ ನಿವೇಶನವಾಗಿ ನೀಡಬೇಕು. ಹಾಗೂ ಸಾರ್ವಜನಿಕ ಉದ್ದೇಶಕ್ಕೆ ಬಳಸಬೇಕು ಇತ್ಯಾದಿ ಬೇಡಿಕೆಗಳಿದ್ದವು. ಬಾಡಿಗೆ ನಿಯಂತ್ರಣ, ಕಾರ್ಮಿಕ ನೌಕರರ ಮನೆ ಬಾಡಿಗೆ ಭತ್ಯೆ ಹೆಚ್ಚಳ ಇತ್ಯಾದಿ ಬೇಡಿಕೆಗಳೂ ಇದ್ದವು.

ಊಹುಂ, ಮುಖ್ಯಮಂತ್ರಿ ಬಿಡಿ ಯಾವ ಮಂತ್ರಿ ಮಹೋದಯರಿಗೂ ಅಲ್ಲಿಗೆ ಬರಲು ಮನಸ್ಸಾಗಲಿಲ್ಲ.

ಮುತ್ತಿಗೆ

ಸರಿ, ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಕಛೇರಿಯ ಮುತ್ತಿಗೆಗೆ ಹೊರಟರು. ಫೆಬ್ರವರಿ 19, 2009. ರಣ ಬಿಸಿಲು, ಪ್ರತಿಭಟನಾಕಾರರ ಉತ್ಸಾಹವನ್ನೇನು ಕುಗ್ಗಿಸಲಿಲ್ಲ. ಮಹಿಳೆಯರು, ಪುರುಷರು ಕೆಂಬಾವುಟ ಹಿಡಿದು ನಡೆದರು. ಪೋಲೀಸರು ಬ್ಯಾರಿಕೇಡ್ ಹಾಕಿದ್ದರೇನು? ಜನ ನಗರ ಜಿಲ್ಲಾಧಿಕಾರಿ ಕಛೇರಿ ಮುತ್ತಿದರು. ದ್ವಾರದ ಸುತ್ತಲು ಪ್ರತಿಭಟಿಸಿ ಕುಳಿತರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆಯವರ ಸ್ಫೂರ್ತಿಯ ಮಾತು, ಪ್ರಸನ್ನಕುಮಾರ್‌ರವರ ಮಾರ್ಗದರ್ಶನ - ಹೋರಾಟಕ್ಕೆ ಮತ್ತಷ್ಟು ಕಳೆ ಬಂತು. ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗೌರಮ್ಮ, ಕೆ.ಎನ್.ಉಮೇಶ್, ಗೋಪಾಲ ಕೃಷ್ಣ ಅರಳಹಳ್ಳಿ, ವೆಂಕಟಾಚಲಯ್ಯ, ಮುಂತಾದವರು ನೇತೃತ್ವದ ವಹಿಸಿದ್ದರು.

ಪ್ರತಿಭಟನೆಯ ಸ್ಥಳಕ್ಕೆ ಆಹಾರ ಮಂತ್ರಿ ಹಾಲಪ್ಪನವರು ಬಂದು ಭರವಸೆ ನೀಡುವವರೆಗೆ ಪ್ರತಿಭಟನಾಕಾರರು ಪಟ್ಟು ಸಡಲಿಸಲಿಲ್ಲ. ಕೆಲವು ಭರವಸೆ ಸಿಕ್ಕಿವೆ. ಹೋರಾಟ ಮುಂದುವರಿಯಲಿದೆ.





ಚಿಕ್ಕಬಳ್ಳಾಪುರ: ಕೋಮುವಾದ-ಭಯೋತ್ಪಾದನಾ ವಿರೋಧಿ ಸಮಾವೇ

ಚಿಕ್ಕಬಳ್ಳಾಪುರದಲ್ಲಿ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಜನವರಿ 30ರಂದು ಬೃಹತ್ ಕೋಮುವಾದ ವಿರೋಧಿ - ಭಯೋತ್ಪಾದನಾ ವಿರೋಧಿ ರ್‍ಯಾಲಿ ನಡೆಯಿತು. ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಸುಭಾಷಿಣಿ ಅಲಿ, ಸಿಪಿಐ(ಎಂ) ರಾಜ್ಯ ಮುಖಂಡರು ಪಾಲ್ಗೊಂಡ ಈ ರ್‍ಯಾಲಿಯು ಅತ್ಯಂತ ಉತ್ಸಾಹಭರಿತ ವಾತಾವರಣದಲ್ಲಿ ನಡೆದು ಯಶಸ್ವಿಯಾಯಿತು.

ಅಂದು ಸಾವಿರಾರು ಜನ ಸಿಪಿಐ(ಎಂ) ಕಾರ್ಯಕರ್ತರು ಚಿಕ್ಕಬಳ್ಳಾಪುರದಲ್ಲಿ ಬೃಹತ್ ಮೆರವಣಿಗೆ ನಡೆಸಿದರು. ಪ್ರಮುಖ ಬೀದಿಗಳಲ್ಲೆಲ್ಲಾ ಸುತ್ತಿದ ಮೆರವಣಿಗೆಯು ಗ್ರಂಥಾಲಯ ಮೈದಾನದಲ್ಲಿ ನೆರೆದು ಬಹಿರಂಗ ಸಭೆಯಾಯಿತು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ವೆಂಕಟಸ್ವಾಮಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯದರ್ಶಿಗಳೂ ಆದ ಮಾಜಿ ಶಾಸಕರ ಜಿ.ವಿ.ಶ್ರೀರಾಮರೆಡ್ಡಿಯವರು, ಕೆ.ಎಸ್.ವಿಮಲ ಮುಂತಾದವರು ಬಹಿರಂಗ ಸಭೆಯಲ್ಲಿ ಮಾತನಾಡಿದರು. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾದ ಸುಭಾಷಿಣಿ ಅಲಿಯವರು ರ್‍ಯಾಲಿಯನ್ನು ಉದ್ಘಾಟಿಸಿ ಮಾತನಾಡಿದರು.



ಅವರ ಭಾಷಣದ ಪ್ರಮುಖ ತುಣುಕುಗಳು ಹೀಗಿವೆ -

"ಸಿ.ಪಿ.ಐ(ಎಂ) ಪಕ್ಷವು ಜನವರಿ 30 ರಂದು ಕೋಮುವಾದ - ಭಯೋತ್ಪಾದನಾ ವಿರೋಧಿ ಸಮಾವೇಶ ಹಮ್ಮಿಕೊಂಡಿದೆ. ಜನವರಿ 30 ರಾಷ್ಟ್ರಪಿತ ಗಾಂಧೀಜಿಯನ್ನು ಕೊಂದಿದ ದಿನ. ಭಯೋತ್ಪಾದನಾ ಸಿದ್ಧಾಂತವನ್ನು ಹೊಂದಿದ್ದ ಯುವಕ ಯಾರೆಂದರೆ ಅವನ ಹೆಸರು ಶೇಕ್ ಅಹಮ್ಮದ್ ಷರೀಫ್. ಅಲ್ಲ ಬದಲಿಗೆ ಗೂಡ್ಸೆ. ಆರ್.ಎಸ್.ಎಸ್. ನ ಕಾರ್ಯಕರ್ತ. ಗಾಂಧೀಜಿಯನ್ನು ಕೊಂದಿದ್ದು ಒಬ್ಬ ಹಿಂದೂ ಭಯೋತ್ಪಾದಕ.

ನಮಗೆ ಗೊತ್ತಿದೆ ಗಾಂಧೀಜಿಯವರು ಕೊನೆಯುಸಿರು ಹೋಗುವಾಗ 'ಹೇ ರಾಮ್' ಎಂದು ಹೇಳಿದ್ದು. ಆದರೆ ಕರ್ನಾಟಕ ರಾಜ್ಯದಲ್ಲಿ ಶ್ರೀ ರಾಮ ಸೇನೆ ಸಂಘ ಪರಿವಾರದ ಸಂಘಟನೆ ಗಾಂಧಿ ತತ್ವವಾದ ಜಾತ್ಯಾತೀತತೆಯ ವಿರುದ್ಧ ದಾಳಿ ನಡೆಸುತ್ತಿದೆ.

ಎರಡು ತಿಂಗಳ ಹಿಂದೆ ಮುಂಬೈ ದಾಳಿಯಲ್ಲಿ ಉಗ್ರರು 73 ಗಂಟೆಗಳ ಸತತವಾಗಿ ಕಾರ್ಯಾಚರಣೆ ನಡೆಸಿ 183ಕ್ಕೂ ಹೆಚ್ಚು ಮುಗ್ದರನ್ನು ಬಲಿ ತೆಗೆದುಕೊಂಡಿದ್ದಾರೆ. ಇವರಲ್ಲಿ ಕರ್ಕರೆ ಮುಂತಾದ ಪೋಲೀಸ್ ಹಾಗೂ ಸೈನಿಕರು ಸಾವನ್ನಿಪ್ಪಿದ್ದಾರೆ. ಆದರೆ ಕರ್ಕರೆಯಿಂದ ನಾವು ಕಲಿಯಬೇಕಾದುದು ಏನೆಂದರೆ ಕರ್ಕರೆ ಮುಸ್ಲಿಂ ಭಯೋತ್ಪಾದನೆಗೂ ಮತ್ತು ಹಿಂದೂ ಭಯೋತ್ಪಾದನೆಯ ವಿರುದ್ಧ ಹೋರಾಡಿದ ಅಧಿಕಾರಿ. ಮಲಗಾಂವ್ ಸ್ಫೋಟದ ಬಗ್ಗೆ ತನಿಖೆ ನಿಜವಾದ ಅಪರಾಧಿಗಳನ್ನು ಸೆರೆಹಿಡಿದ ಪ್ರಾಮಾಣಿಕ ಅಧಿಕಾರಿ ಸಾಧ್ವಿ ಪ್ರಜ್ಞಾಸಿಂಗ್ ಟಾಗೂರ್‌ರವರನ್ನು ಸೆರೆ ಹಿಡಿದರು. ಆದರೆ ಹೇಮಂತ್ ಕರ್ಕರೆ ಬಗ್ಗೆ ಸಂಘ ಪರಿವಾರ ಹಾಗೂ ಬಿ.ಜೆ.ಪಿ ಶಿವಸೇನೆಗಳು ಹೇಳಿದ್ದೇನು ?

ನವಂಬರ್ 26 ಬೆಳಿಗ್ಗೆ ಶಿವಸೇನೆಯ ಮುಖ್ಯಸ್ಥ ಬಾಳಾ ಠಾಕ್ರೆ ತಮ್ಮ ಪತ್ರಿಕೆಯಾದ ಸಾಮ್ನಾದಲ್ಲಿ ಹೇಳುತ್ತಾರೆ 'ಹೇಮಂತ್ ಕರ್ಕರೆ ಒಬ್ಬ ಭ್ರಷ್ಟ ಅಧಿಕಾರಿ, ಕುಡುಕ. ಆತ ಸಾಧ್ವಿ ಪ್ರಗ್ಯಾಸಿಂಗ್ ಠಾಕೂರ್ ಮತ್ತು ಸಹಚರರನ್ನು ಸುಮ್ಮನೆ ಕಿರುಕುಳ ನೀಡುತ್ತಿದ್ದಾನೆ' ಎಂದು ಹೇಳಿದೆ. ಪ್ರಾಮಾಣಿಕ ಸನ್ಯಾಸಿಗೆ ಹಿಂಸೆ ನೂಡುತ್ತಿರುವ ಹೇಮಂತ್ ಕರ್ಕರೆ ವಿರುದ್ಧ ಡಿಸೆಂಬರ್ 1 ರಂದು ದೇಶದಾದ್ಯಂತ ಬಂದ್ ನಡೆಸುತ್ತೇವೆ'. ಆದರೆ ನವಂಬರ್ 26 ರ ರಾತ್ರಿ ಮುಂಬೈ ಉಗ್ರರ ಕೈಯಲ್ಲಿ ಸತ್ತ ಕರ್ಕರೆ ಬಗ್ಗೆ ನಂತರ ನವಂಬರ್ 27 ಬೆಳಿಗ್ಗೆ ಇದೇ ಸಾಮ್ನಾ ಪತ್ರಿಕೆ, ಶಿವಸೇನೆ, ಬಿ.ಜೆ.ಪಿ. ಹೇಮಂತ್ ಕರ್ಕರೆ ಹುತಾತ್ಮ ಎಂದೂ ಹಾಗೂ ವಿವಿಧ ರೀತಿಯಲ್ಲಿ ಹೊಗಳಿದ್ದಾರೆ. ಇದು ವಿಪರ್ಯಾಸ.

ಮುಗ್ದ ಜನತೆಯನ್ನು ಮಹಿಳೆ, ಬಡವರನ್ನು ಕೊಲ್ಲುತ್ತಿರುವ ಭಯೋತ್ಪಾದಕರು ಯಾರೇ ಆಗಲಿ ಹಿಂದೂ ಅಥವಾ ಮುಸ್ಲಿಂ ಮತ್ತು ಸಿಖ್ ಆಗಿರಲಿ ಅವರನ್ನು ಬಂಧಿಸಿ ಶಿಕ್ಷೆಗೆ ಒಳಪಡಿಸಬೇಕು. ಆದರೆ ಬಿ.ಜೆ.ಪಿ. ಏನು ಹೇಳುತ್ತಿದೆ? ಭಯೋತ್ಪಾದಕ ಮುಸ್ಲಿಂ ಆದರೆ ಅವನನ್ನು ಗಲ್ಲಿಗೇರಿಸಿ ಎಂದು ಹೇಳುತ್ತಾರೆ ಮತ್ತು ಭಯೋತ್ಪಾದಕ ಹಿಂದೂ ಆದರೆ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಬೇಕೆನ್ನುತ್ತಾರೆ. ಅವರನ್ನು ಶಿವಾಜಿ, ಝಾನ್ಸಿರಾಣಿ ಲಕ್ಷ್ಮಿಬಾಯಿಗೆ ಹೋಲಿಸಿ ಮಾತನಾಡುತ್ತಾರೆ.

ಕರ್ನಾಟಕದಲ್ಲಿ ಬಿ.ಜೆಪಿ. ಸರ್ಕಾರ ಬಂದಿದ್ದು ಹೇಗೆ ಎಂದರೆ ಬಿ.ಜೆ.ಪಿ.ಯು ರಾಜ್ಯದಲ್ಲಿರುವ ಭೂ ಮಾಫಿಯಾ, ಲಿಕ್ಕರ್ ಮಾಫಿಯಾ ಗಣಿ ಮಾಫಿಯಾ ಮತ್ತು ಕ್ರಿಮಿನಲ್‌ಗಳಿಂದ ಹಣ ಪಡೆದು ಆ ಮೂಲಕ ಅಧಿಕಾರವನ್ನು ಹಿಡಿದಿದ್ದಾರೆ.

ಯಡಿಯೂರಪ್ಪ ಲಿಕ್ಕರ್ ಮಾಫಿಯಾದಿಂದ ಹಣ ಪಡೆದು ಬಾರ್‌ಗಳಿಗೆ ಅವಕಾಶ ನೇಡುತ್ತಿದ್ದಾರೆ. ದೆಹಲಿಗೆ ಬಂದರೆ ಬಾರ್‌ಗೆ ಅನುಮತಿ ಇಲ್ಲ, ಪಬ್‌ಗೆ ಇಲ್ಲ ಎಂದು ಹೇಳುತ್ತಾರೆ. ಆದರೆ ಕರ್ನಾಟಕದಲ್ಲಿ ಅವುಗಳ ಸ್ಥಾಪನೆಗೆ ಅನುಮತಿ ನೀಡುತ್ತಾರೆ. ದೆಹಲಿಯಲ್ಲಿ ಯಡಿಯೂರಪ್ಪನವರು ಶ್ರೀರಾಮಸೇನೆ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಕರ್ನಾಟಕ್ಕೆ ಬಂದರೆ ಮುತಾಲಿಕ್ ಒಳ್ಳೆಯವನು ಎನ್ನುತ್ತಾರೆ.

ಮಹಿಳೆಯರನ್ನು ಹೊಡೆಯುವುದು, ಚರ್ಚ್‌ಗಳನ್ನು ಧ್ವಂಸ ಮಾಡುವುದು, 64 ಜನರನ್ನು ಬಲಿ ತೆಗೆದುಕೊಂಡ ಮಲಗಾಂವ್ ಸ್ಫೋಟದಲ್ಲಿ ಮುತಾಲಿಕ್‌ನ ಕೈವಾಡವಿದೆ ಹುಬ್ಬಳ್ಳಿ ಕೋರ್ಟ್ ಸ್ಫೋಟ ಪ್ರಕರಣದಲ್ಲಿ ಶ್ರೀರಾಮಸೇನೆ ಕಾರ್ಯಕರ್ತರನ್ನು ಬಂಧಿಸಲಾಗಿದೆ ಇಂತಹವರ ವಿರುದ್ಧ ರಾಜ್ಯದ ಬಿ.ಜೆ.ಪಿ. ಸರ್ಕಾರ ಕ್ರಮಕೈಗೊಳ್ಳುವ ಬದಲು ಸರ್ಕಾರ ಅವರನ್ನು ರಕ್ಷಿಸುವಲ್ಲಿ ಮುಂದಾಗುತ್ತಿದೆ. ಸಂಘಪರಿವಾರದ ಸಂಘಟನೆಗಳ ಮೂಲಕ ಬಿ.ಜೆ.ಪಿ. ತನ್ನ ಸರ್ಕಾರಿ ಯಂತ್ರಾಂಗವನ್ನು ಉಪಯೋಗಿಸಿ ತನ್ನ ಧರ್ಮಾಂದತೆಯನ್ನು ಬಿತ್ತಲು ಪ್ರಯತ್ನಿಸುತ್ತಿದೆ.

2004 ರಲ್ಲಿ ಸಿಪಿಐ(ಎಂ) ನೇತೃತ್ವದ ಎಡಪಕ್ಷಗಳು ಯುಪಿಎಗೆ 4 ವರ್ಷಗಳ ಬೆಂಬಲ ನೀಡಿತ್ತು ಇದರ ಪರಿಣಾಮ ರಾಷ್ಟ್ರೀಯ ಖಾತರಿ ಯೋಜ ಯೋಜನೆ ಭಾಗವಾಗಿ ಪ್ರತಿ ಕುಟುಂಬದ 100 ದಿನದ ಉದ್ಯೋಗ ಖಾತರಿಗೆ ನೀಡಬೇ ಆದರೆ ಇದು ಕರ್ನಾಟಕದಲ್ಲಿ ಸಮರ್ಪ ಜಾರಿಯಾಗುತ್ತಿಲ್ಲ ಅವರಿಗೆ ಜಾಬ್ ಕಾಡ ಸರಿಯಾಗಿ ನೀಡುತ್ತಿಲ್ಲ. ಸಿಪಿಐ(ಎಂ) 100 ಉದ್ಯೋಗ ಖಾತರಿಯನ್ನು 368 ದಿನಗಳ ಏರಿಸಬೇಕು ಎಂದು ಒತ್ತಾಯಿಸುತ್ತದೆ.

4 ವರ್ಷಗಳ ಯುಪಿಎ ಸರ್ಕಾರಕ್ಕೆ ಫಲವಾಗಿ ಜನತೆಗೆ ರಕ್ಷಣೆ, ಬ್ಯಾಂಕ್‌ಗಳ ಜೀವ ವಿಮಾ ನಿಗಮ, ಯುವಜನತೆಗೆ ಉ ಮುಂತಾದವುಗಳು ಜಾರಿಯಾಗಲು ಸಾಧ್ಯ ಆದರೆ ಯುಪಿಎ ಸರ್ಕಾರ ನಮ್ಮ ದೇಶದ ವಿದೇಶಾಂಗ ನೀತಿಯನ್ನು ಬಿಟ್ಟು ಅಮೇ ಮಿತ್ರನಾಗಲು ಹೋದಾಗ ಸಿಪಿಐ(ಎಂ) ವಿರೋಧಿಸಿ ಎಡಪಕ್ಷಗಳು ಬೆಂಬಲ ಹಿಂ

ವಿಜೆಕೆ ನಾಯರ್‌ರವರು ಮಾತನಾಡಿ ಕನಿಷ್ಟ ಕೂಲಿ, ಉದ್ಯೋಗ ಸೃಷ್ಟಿ, ಇತ್ಯಾದಿ ಸಮಸ್ಯೆಗಳ ತಲೆ ಕೆಡಿಸಿಕೊಳ್ಳದ ಬಿಜೆಪಿ ಸರ್ಕಾ ಕೋಮುವಾದವನ್ನು ಬಿತ್ತಲು ಹೊರಟಿರು ಖಂಡಿಸಿದರು. ಸಿಪಿಐ(ಎಂ) ಆರಂಭಿಸಿ ಕೋಮುವಾದ - ಭಯೋತ್ಪಾದನಾ ವಿ ಆಂದೋಲನವನ್ನು ತೀವ್ರಗೊಳಿಸು ಹೇಳಿದರು. ಶ್ರೀರಾಮರೆಡ್ಡಿಯವರು ಮಾ ಕರ್ನಾಟಕದ ಸೌಹಾರ್ದ ಪರಂಪರೆ ಕಾಪಾಡಬೇಕಾದ ಅಗತ್ಯತೆ ಇದೆ ಎಂದರು. ಕೆ ವಿಮಲರವರು ಮಂಗಳೂರಿನಲ್ಲಿ ಮಹಿಳೆಯರ ನಡೆದ ಶ್ರೀರಾಮಸೇನೆಯ ದಾಳಿ ಖಂಡಿಸಿ ಮುನಿವೆಂಕಟಪ್ಪ ಸ್ವಾಗತಿಸಿದರು. ಮು ಲೋಕಸಭಾ ಚುನಾವಣೆಯಲ್ಲಿ ಚಿಕ್ಕಬಳ್ಳಾ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿಯನ್ನು ಶ್ರಮಿಸುವ ತೀರ್ಮಾನದೊಂದಿಗೆ ಬಹಿರಂ ಮುಕ್ತಾಯವಾಯಿತು.

'ಸ್ತ್ರೀ ಶಕ್ತಿ' - ಪ್ರದರ್ಶನ ಫೆ.-27

ಸ್ತ್ರೀ ಶಕ್ತಿ ಸಂಘಗಳೆಂದರೆ ತಮ್ಮ ರಾಜಕೀಯ ಸಭೆ, ಸಮಾರಂಭ, ರ್‍ಯಾಲಿಗಳಿಗೆ ಜನರನ್ನು (ಮಹಿಳೆಯರನ್ನು) ಅಣಿನೆರೆಸಲು ಇರುವ ಒಂದು ಸಾಧನ ಎಂದು ಆಳುವ ಜನರು ಭಾವಿಸಿದ್ದಾರೆ. ಮಹಿಳೆಯರಲ್ಲಿ ಎಚ್ಚರಗೊಳ್ಳುತ್ತಿರುವ ಪ್ರಜಾಸತ್ತಾತ್ಮಕ ಪ್ರಜ್ಞೆಯನ್ನು ಮಸುಕುಗೊಳಿಸಲು ಏನೇನೋ ತಂತ್ರಗಳು ಹೊಸೆಯಲ್ಪಡುತ್ತವೆ. ಆದರೆ ಅವರ ನೈಜ ಸಮಸ್ಯೆಗಳು, ಬೇಡಿಕೆಗಳ ಬಗೆಗೆ ಮಾತ್ರ ದಿವ್ಯನಿರ್ಲಕ್ಷ್ಯ ಈ ಜನಗಳದ್ದು. ಇಂತಹ ಆಳುವ ಜನರ ನೀತಿಯನ್ನು ಪ್ರತಿಭಟಿಸಿ ಸ್ತ್ರೀಶಕ್ತಿ ಸಂಘಗಳ ಮಹಿಳೆಯರ ಬೇಡಿಕೆಗ ಈಡೇರಿಕೆಗಾಗಿ ಒತ್ತಾಯಿಸಿ, ಶೇ. 3 ರ ಬಡ್ಡಿ ಸುಲಭ ಸಾಲ, ಈ ಮಹಿಳೆಯರು ಉತ್ಪಾದಿಸು ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ ಮಾಡಬೇಕೆಂದು, ಸ್ತ್ರೀಶಕ್ತಿ - ಸ್ವಸಹಾಯ ಗುಂಪುಗಳಿಗೆ ಸುತ್ತುನಿಧಿ, ಸಬ್ಸಿಡಿ ಸಾಲ ಹಾಗ ತರಬೇತಿ, ಮಹಿಳಾ ಭವನಕ್ಕೆ ಹೆಚ್ಚಿನ ಅನುದಾ ಇತ್ಯಾದಿಗಳಿಗಾಗಿ ಒತ್ತಾಯಿಸಿ ಫೆಬ್ರವರಿ 27 2009 ರಂದು ರಾಜ್ಯಮಟ್ಟದ ಬೃಹ ರ್‍ಯಾಲಿಯನ್ನು ನಡೆಸಲಾಗುತ್ತಿದೆ.

...ಜೆಟ್ ಅಲ್ಲದ ಕರ್ನಾಟಕದ ಎಡಬಿಡಂಗಿ ಬಜೆಟ್

ಜನರಿಗೆ ಈಗ ಸದ್ಯಕ್ಕೆ ತೆರಿಗೆ ಹೇರದಂತಿರಬೇಕು, ಚುನಾವಣೆ ಮೇಲೆ ಕಣ್ಣಿಟ್ಟು ವಿವಿಧ ಮಠ, ಜಾತಿ, ಪಂಗಡಗಳಿಗೆ ಆಮಿಷ ಒಡ್ಡುವುದು ಸಾಧ್ಯವಾಗಬೇಕು. ಸಂಘ ಪರಿವಾರಕ್ಕೆ ಯಥೇಚ್ಛ ಹಣ ಹರಿಸಲು ಆಗಬೇಕು. ಇದು ರಾಜ್ಯ ಸರ್ಕಾರದ ಲೇಖಾನುದಾನ ಎಂಬ ಬಜೆಟ್‌ನ ಕುತಂತ್ರ

ಜಿ.ಎನ್.ನಾಗರಾಜ್

...ಸರ್ಕಾರದ ಪ್ರಕಾರವೇ ಅವರು ಈ ...ವುದು ಬಜೆಟ್ ಅಲ್ಲ ಲೇಖಾನುದಾನ. ...ನಾಲ್ಕು ತಿಂಗಳ ಕಾಲ ಸರ್ಕಾರದ ಸಂಬಳ ...ನ್ನು ನೀಡಲು ಬೇಕಾಗುವ ಹಣಕ್ಕೆ ...ಂಡಲದ ಒಪ್ಪಿಗೆಯನ್ನು ಪಡೆಯುವುದಕ್ಕೆ ...ದಾನ ಎನ್ನುತ್ತಾರೆ. ಈ ಲೇಖಾನುದಾನದಲ್ಲಿ ಹೊಸ ಕಾರ್ಯಕ್ರಮ, ಯೋಜನೆ, ಆರ್ಥಿಕ ...ದಲಾವಣೆಯ ಪ್ರಶ್ನೆ ಇರುವುದಿಲ್ಲ. ಆದರೆ ...ೂರಪ್ಪನವರು ಈಗ ಮಂಡಿಸಿರುವುದು ...ದಾನ ಎನ್ನುತ್ತಲೇ ಹಲವಾರು ಹೊಸ ...ಗಳನ್ನು ಕೊಡುಗೆಗಳನ್ನು ಘೋಷಿಸಿದ್ದಾರೆ. ...ವರ್ಷದ ಯೋಜನೆಯ ಗಾತ್ರವನ್ನು 4000 ...ಂತಲೂ ಮಿಗಿಲು ಹೆಚ್ಚಿಸಿರುವುದನ್ನು ...ಸಿದ್ದಾರೆ. ಹಾಗೆ ಪೂರ್ಣ ವರ್ಷದ ...ನೆಯನ್ನು ಅದರ ಭಾಗವಾಗಿ ವಿವಿಧ ...ಗೆ ಹಣ ವಿಂಗಡಣೆಯನ್ನು ಹೆಚ್ಚು ...ದ್ದರೆ, ಕೊಡುಗೆಗಳನ್ನು ಘೋಷಿಸುವ ...ವರು ಲೇಖಾನುದಾನಕ್ಕೆ ಬದಲು ಪೂರ್ಣ ...ಅನ್ನೇ ಮಂಡಿಸಬಹುದಾಗಿತ್ತು. ಕೇಂದ್ರ ...ಾದರೆ ಅದರ ಅವಧಿ ನಾಲ್ಕು ತಿಂಗಳಲ್ಲಿ ...ಹೊಗುತ್ತದೆ ಎನ್ನುವ ಪರಿಸ್ಥಿತಿ ಇತ್ತು. ...ವಾಗಿ ಅವರು ಅನಿವಾರ್ಯವಾಗಿ ...ುದಾನವನ್ನು ಮಂಡಿಸಿದರು. ಆದರೆ ...ೂರಪ್ಪನವರಿಗೆ ಆ ಅಡ್ಡಿಯೇನೂ ಇರಲಿಲ್ಲ. ...ಅವರು ಪೂರ್ಣ ಬಜೆಟ್ ಮಂಡಿಸುವುದಕ್ಕೆ ...ಲೇಖಾನುದಾನಕ್ಕೆ ಏಕೆ ಮೊರೆ ಹೋದರು ...ಒಂದು ಪ್ರಶ್ನೆಯಾದರೆ ಲೇಖಾನುದಾನ ...ಸರಿನಲ್ಲಿ ಕೇವಲ ನಾಲ್ಕು ತಿಂಗಳ ವೆಚ್ಚಕ್ಕೆ ...ೂಳಿಸದೆ ಪೂರ್ಣ ವರ್ಷದ ಬಜೆಟ್ ...ಂಬಿಸುವ ನಾಟಕವನ್ನೇಕೆ ಆಡಿದರು? ಇದು ...ರ್ಭದ ಯಕ್ಷ ಪ್ರಶ್ನೆ. ಇದರ ಹಿಂದೆ ಒಂದು ಗೂಢವಾದ ಕುತಂತ್ರ ಅಡಗಿದೆ.

ಗೂಢವಾದ ಕುತಂತ್ರ

ಲೇಖಾಣುದಾನವಾದ 4 ತಿಂಗಳ ಲೆಕ್ಕವನ್ನು ಮಾತ್ರ ಮಂಡಿಸಿದ್ದಾರೆ. ಲೋಕಸಭಾ ಚುನಾವಣೆಗೆ ಮೊದಲು ವಿವಿಧ ಜಾತಿ, ಜನಸಮುದಾಯಗಳನ್ನು ಒಲಿಸಿಕೊಳ್ಳುವ ಸಲುವಾಗಿ ಕೊಡುಗೆಗಳನ್ನು ಘೋಷಿಸಲಾಗುವುದಿಲ್ಲ. ಆದ್ದರಿಂದ ಪೂರ್ಣ ಬಜೆಜ್‌ನ್ನು ಮಂಡಿಸಲಾಗಿದೆ. ಹಾಗಾದರೆ ಪೂರ್ಣ ಬಜೆಟ್‌ಅನ್ನೇ ಚರ್ಚೆಗೆ ತರದೆ ಲೇಖಾನುದಾನ ಪಡೆಯುವ ತಂತ್ರ ಏಕೆ? ಪೂರ್ಣ ಬಜೆಟ್‌ಗೆ ಒಪ್ಪಿಗೆಯನ್ನು ಪಡೆದರೆ ಈ ಕೊಡುಗೆಗಳನ್ನು ನೀಡಲು ಸಂಪನ್ಮೂಲಗಳ ಸಂಗ್ರಹವನ್ನು ಈಗಲೇ ಮಾಡಬೇಕಾಗುತ್ತದೆ. ಅಂದರೆ ತೆರಿಗೆಗಳನ್ನು ವಿಪರೀತವಾಗಿ ಏರಿಸಬೇಕಾಗುತ್ತದೆ. ಈಗ ತೆರಿಗೆಗಳನ್ನು ಏರಿಸುವುದರಿಂದ ಜನತೆಯಲ್ಲಿ ಅತೃಪ್ತಿ ವಿಪರೀತವಾಗಿ ಹೆಚ್ಚಿ ಲೋಕಸಭಾ ಚುನಾವಣೆಗಳನ್ನು ಎದುರಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಲೋಕಸಭಾ ಚುನಾವಣೆಗಳ ನಂತರ ತೆರಿಗೆಗಳನ್ನು ಹೇರುವ ಅವಕಾಶವನ್ನು ಬಳಸಿಕೊಳ್ಳಬೇಕು. ಹೀಗೆ ಕೊಡುಗೆಗಳನ್ನು ಎಡಗೈ ಬಲಗೈಯಲ್ಲೆಲ್ಲೂ ಹೇಗೆಂದರೆ ಹಾಗೆ ಎರಚಬೇಕು. ಆದರೆ ಅದಕ್ಕಾಗಿ ತೆರಿಗೆಯನ್ನು ಏರಿಸಿ ಜನರ ಅತೃಪ್ತಿಯನ್ನು ಗಳಿಸುವುದನ್ನು ಲೋಕಸಭಾ ಚುನಾವಣೆಗಳ ನಂತರದ ದಿನಗಳಿಗೆ ಮುಂದೂಡಬೇಕು. ಇದೇ ಕುತಂತ್ರ. ಹೀಗಾಗಿ ಲೋಕಸಭಾ ಚುನಾವಣೆಗಳ ನಂತರ ಜನತೆ ಹೆಚ್ಚು ತೆರಿಗೆಗಳನ್ನು ತೆರವುದಕ್ಕೆ ಸಿದ್ಧವಾಗಬೇಕು. ಇಲ್ಲದಿದ್ದರೆ ಈ ಕೊಡಗೈ ದೊರೆಯ ಕೊಡುಗೆಗಳು ಕನ್ನಡಿಯ ಗಂಟಾಗುವ ನಿರಾಶೆಯನ್ನು ಸಹಿಸಿಕೊಳ್ಳಬೇಕು.



ಸುಳ್ಳು ಬಜೆಟ್‌ನ ಸುಳ್ಳು ಆದಾಯ

ಆದರೂ ಬಜೆಟ್ ಎಂದರೆ ಆಯ ಮತ್ತು ವ್ಯಯವನ್ನು ಸರಿತೂಗಿಸಲೇಬೇಕಲ್ಲ. ಮುಂದೆ ಮತ್ತೊಂದು ಬಜೆಟ್ ಮಂಡಿಸುವವರೆಗೂ ಈ ಸುಳ್ಳು ಬಜೆಟ್‌ನಲ್ಲಿ ಸುಳ್ಳು ಆದಾಯವನ್ನು ತೋರಿಸಬೇಕಲ್ಲ.



ಅದಕ್ಕಾಗಿ ಯಡಿಯೂರಪ್ಪನವರು ಅನುಸರಿಸಿರುವ ತಂತ್ರಗಳು ಎರಡು, ಎರಡು ಒಂದಕ್ಕೊಂದು ವಿರುದ್ಧವಾದವು.

ಬಜೆಟ್ ಭಾಷಣದಲ್ಲಿ ಯಡಿಯೂರಪ್ಪನವರು ನೇರವಾಗಿ ಒಪ್ಪಿಕೊಳ್ಳುತ್ತಾರೆ. ಹಿಂದಿನ ವರ್ಷ 2008-09ರ ಬಜೆಟ್‌ನಲ್ಲಿ ಯಡಿಯೂರಪ್ಪನವರು ನಿರೀಕ್ಷಿಸಿದುದಕ್ಕಿಂತ ತೆರಿಗೆ ಮತ್ತಿತರ ಆದಾಯ 3111 ಕೋಟಿ ರೂ. ನಷ್ಟು ಕಡಿಮೆಯಾಗಿದೆ. ಅವುಗಳ ಜೊತೆಗೆ ಬೆಂಗಳೂರಿನ ಸರ್ಕಾರಿ ಭೂ ಹರಾಜಿನಿಂದ ದೊಡ್ಡ ಪ್ರಮಾಣದ ಹಣ ಸಂಗ್ರಹಿಸಬಹುದೆಂದು ನಿರೀಕ್ಷಿಸಲಾಗಿತ್ತು. ಅದೆಲ್ಲವೂ ಠುಸ್ಸೆಂದು ಹೋಯಿತು. ಹೀಗೆ ಹಿಂದಿನ ವರ್ಷ ಬಜೆಟ್‌ನಲ್ಲಿ ತೋರಿಸಿದ ಯೋಜನೆಗಳಿಗೆ ಹಣ ಬಿಡುಗಡೆ ಮಾಡಿದ ಫೆಬ್ರವರಿಯವರೆಗೆ ಶೇ.50 ರಷ್ಟು ಕೂಡ ಖರ್ಚಾಗಿಲ್ಲ.

ಪುಟ 15ಕ್ಕೆ

...ಡಿಯುವ ವರ್ಗಕ್ಕೆ ಪಂಗನಾಮ

...ಗತಿಕ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ...ಯೂರಪ್ಪನವರಿಗೆ ಮತ್ತು ಅವರ ಅಧಿಕಾರಿ... ಅರಿವೇ ಇಲ್ಲವೋ? ಅಥವಾ ಅಜ್ಞಾನ ...ಯಿಂದ ಜನರನ್ನೂ ಭ್ರಮೆಯಲ್ಲಿ ಮುಳುಗಿಸುವ ...ಯೇ ಪರಿ ಅಥವಾ ಎರಡೂ ಇರಬಹುದೇ? ...ಅನ್ನು ನೋಡಿದರೆ ಈ ಅನುಮಾನಗಳು ...ವಾಗಿಯೇ ಹುಟ್ಟುತ್ತವೆ. ಬೆಲೆ ಏರಿಕೆಯಿಂದ ...ುತ್ತಿರುವ ದುಡಿಯುವ ವರ್ಗಕ್ಕೆ ಏನೂ ...ರವಿಲ್ಲ. ಬಿಕ್ಕಟ್ಟಿನಿಂದಾಗಿ ಉದ್ಯೋಗ ...ುಕೊಂಡಿರುವ, ಕಳೆದುಕೊಳ್ಳುವ ...ವಿರುವ, ಗಣಿ, ಕಟ್ಟಡ, ಗಾರ್ಮೆಂಟ್ಸ್, ..., ಇಂಜನಿಯರಿಂಗ್, ವಾಹನ ...ಾಗಗಳು ತಯಾರಕರು, ಹೋಟೆಲ್ ...ಸೋದ್ಯಮ, ಇತ್ಯಾದಿಗಳ ಅವರಿಗೆ ...ದರೂ ಪರಿಹಾರ ಒದಗಿಸುವುದು ಹೇಗೆ ...್ಯೋಗಗಳನ್ನು ದೊಡ್ಡ ಪ್ರಮಾಣದಲ್ಲಿ ...ಸುವುದು ಹೇಗೆ ಎಂಬ ಬಗ್ಗೆ ಯಾವ ...ಷೂವೂ ಬಜೆಟ್‌ನಲ್ಲಿಲ್ಲ. ...ಷಿ ಕೂಲಿಕಾರರೆಂಬ ಒಂದು ವರ್ಗವಿದೆ ...ನೆನಪೂ ಯಡಿಯೂರಪ್ಪನವರಿಗಿಲ್ಲ.

ಕೈಗಾರಿಕೆಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಬಂಡವಾಳ ಹೂಡಿಕೆ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಕೈಗಾರಿಕೆ ಮತ್ತು ಖನಿಜ ಕ್ಷೇತ್ರಕ್ಕೆ ಮೀಸಲಿಟ್ಟಿದ್ದು ಕೇವಲ ಶೇ 3 ರಷ್ಟು. ಕೈಗಾರಿಕಾ ವಲಯಗಳಲ್ಲಿ ಐಟಿ ಕಂಪೆನಿಗಳಲ್ಲದೆ ಹಲವಾರು ಸಾವಿರ ಸಣ್ಣ ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ. ಅವುಗಳ ಪುನರುಜ್ಜೀವನ ಅಥವಾ ಸಂರಕ್ಷಣೆಗೆ ಕ್ರಮ ಸಾಲದು.

ದಲಿತರ ಏಳಿಗೆಗೆ ಹಣ ಸಾಲದು : ಎಸ್.ಸಿ/ಎಸ್.ಟಿ.ಜನಸಂಖ್ಯೆ ಒಟ್ಟು ಜನಸಂಖ್ಯೆಯಲ್ಲಿ ಶೇ 23 ರಷ್ಟಿದ್ದಾರೆ. ಈ ವಿಭಾಗದ ಅಭಿವೃದ್ಧಿ ಸಾಧಿಸಬೇಕಾದರೆ ಬಜೆಟ್‌ನ ಕನಿಷ್ಟ ಶೇ 23ರಷ್ಟು ಹಣ ಈ ವಿಭಾಗದ ಅಭಿವೃದ್ಧಿಗೆ ಬಳಕೆಯಾಗಬೇಕು. ಎಸ್.ಸಿ/ಎಸ್.ಟಿ. ವಿಭಾಗದ ಅಭಿವೃದ್ಧಿಗೆ ಪ್ರತ್ಯೇಕ ಘಟಕ ಸ್ಥಾಪಿಸುವ ಯಾವುದೇ ಪ್ರಸ್ತಾಪ ಬಜೆಟ್‌ನಲ್ಲಿ ಇಲ್ಲ.

ಕೃಷಿ ಕ್ಷೇತ್ರ : ಕೃಷಿ ಬಿಕ್ಕಟ್ಟಿನಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರಿಗೆ ಪರಿಣಾಮಕಾರಿ ಕ್ರಮಗಳು ಬಜೆಟ್‌ನಲ್ಲಿ ನಮೂದಿಸಿಲ್ಲ. ಆತ್ಮಹತ್ಯೆಗೆ ಒಳಗಾಗುತ್ತಿರುವ ಬಹುತೇಕ ರೈತರು ಖಾಸಗಿ ವಲಯದಿಂದ ಹೆಚ್ಚಿನ ದರದ ಬಡ್ಡಿಯಲ್ಲಿ ಸಾಲ ಪಡೆದು ನರಳುತ್ತಿದ್ದಾರೆ. ಒಟ್ಟು 79 ಲಕ್ಷ ರೈತ ಕುಟುಂಬಗಳಲ್ಲಿ 54 ಲಕ್ಷ ರೈತರು ಖಾಸಗಿ ಲೇವಾದೇವಿಗಾರರ ಹಿಡಿತದಲ್ಲಿದ್ದಾರೆ ಎಂಬುದನ್ನು ಗಮನಿಸಬೇಕು. ಕೃಷಿ ಉತ್ಪನ್ನ ಕುಸಿದಿದೆ ಎಂದು ಬಜೆಟ್ ಭಾಷಣದಲ್ಲಿ ಒಪ್ಪಿಕೊಂಡಿರುವಾಗ ಸಣ್ಣ ಮತ್ತು ಅತೀ ಸಣ್ಣ ರೈತರನ್ನು ಸಂಕಷ್ಟಗಳಿಂದ ಪಾರುಮಾಡುವ, ಖಾಸಗಿ ಲೇವಾದೇವಿಗಾರರಿಂದ ಮುಕ್ತಿಪಡೆಯುವ ಕ್ರಮಗಳು ಸಾಲದು. ಕೃಷಿ ಕ್ಷೇತ್ರಕ್ಕೆ ನೀಡಿದ ಒಟ್ಟು ಹಣ ಶೇ 9.6ರಿಂದ ಶೇ 7.19ಕ್ಕೆ ಇಳಿದಿದೆ. 600 ಕೋಟಿ ರೂಪಾಯಿ ಹಣ ಕಡಿತವಾಗಿದೆ.

ಚುನಾವಣೆ ಘೋಷಣೆ ಜ್ಯಾರಿಗೆ ಇಲ್ಲ : ಅಧಿಕಾರಕ್ಕೆ ಬಂದ ನಂತರ 2ನೇ ಬಜೆಟ್‌ನ್ನು ನೀಡುತ್ತಿರುವ ಬಿಜೆಪಿ ಸರ್ಕಾರ ತನ್ನದೆ ಚುನಾವಣಾ ಘೋಷಣೆಯಾದ 2 ರೂ.ಗೆ ಒಂದು ಕೆ.ಜಿ.ಅಕ್ಕಿ, ಬಿಪಿಎಲ್ ಕಾರ್ಡುದಾರರ ಆದಾಯ ಮಿತಿ ರೂ. 30,000ಕ್ಕೆ ಏರಿಕೆ, ಯೂನಿಟ್ ಪದ್ಧತಿಯ ರದ್ದತಿಗೆ, ಯಾವುದೇ ಸೊಲ್ಲನ್ನು ಎತ್ತಿಲ್ಲ.

ಶಿಕ್ಷಣ ರಂಗಕ್ಕೆ ಹೆಚ್ಚು ಧನ ವಿನಿಯೋಗ ಮಾಡಲಾಗುವುದೆಂದು ಹೇಳಿದ ಬಿಜೆಪಿ ಸರ್ಕಾರ ಆ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ನೀಡಿದ ಹಣ ಶೇ.8.47 ರಿಂದ ಶೇ 7.79 ಕ್ಕೆ ಇಳಿದಿದೆ.

ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯಾಗಬೇಕಾದಲ್ಲಿ ಬಡಜನರ ಅಭಿವೃದ್ಧಿಯಾಗಬೇಕಾಗಿದೆ. ಇದು ಕೇವಲ ಮೂಲಸೌಕರ್ಯಗಳ ಅಭಿವೃದ್ಧಿಯಿಂದ ಮಾತ್ರ ಸಾಧ್ಯವಿಲ್ಲ. ಹಿಂದುಳಿದ ಪ್ರದೇಶಗಳ ಬಡಜನರ ಅಭಿವೃದ್ಧಿಗೆ ಬಜೆಟ್‌ನಲ್ಲಿ ಯಾವುದೇ ಸ್ಪಷ್ಟನೇ ಇಲ್ಲ.

ಕಾರ್ಮಿಕ ವಿರೋಧಿ : ತೀವ್ರ ಒತ್ತಾಯದ ನಂತರ ಅಸಂಘಟಿತ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ಆರಂಭಿಸಿರುವುದು ಸ್ವಾಗತಾರ್ಹ. ಆದರೆ 1.5 ಕೋಟಿಯಷ್ಟಿರುವ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಗೆ ಕೇವಲ 10 ಕೋಟಿ ರೂ. ನಿಧಿ ಸ್ಥಾಪನೆಯಿಂದ ಯಾವುದೇ ಮಹತ್ತರವಾದ ಬೆಳವಣಿಗೆ ಆಗುವುದಿಲ್ಲ.

ಒಟ್ಟಾರೆಯಾಗಿ ಹೇಳಬೇಕೆಂದರೆ ಸರ್ಕಾರದ ಹಣವನ್ನು ಉತ್ಪಾದನಾ ಚಟುವಟಿಕೆಗಳಿಗೆ ಬಳಸದೆ ರಾಜ ಮಹಾರಾಜರ ರೀತಿಯಲ್ಲಿ ಉಂಬಳಿ ನೀಡುವುದಕ್ಕೆ ಬಳಸುವುದರಿಂದ ಕರ್ನಾಟಕ ರಾಜ್ಯದ ಆಮೂಲಾಗ್ರ ಅಭಿವೃದ್ಧಿಗೆ ಬಜೆಟ್ ಮಾರಕವಾಗುತ್ತದೆ. ಆದಾಯದ ಮೂಲವನ್ನು ಸ್ಪಷ್ಟ ಪಡಿಸದ ಬಜೆಟ್ ಚುನಾವಣಾ ತಯಾರಿಯ ಘೋಷಣ ಪತ್ರವಾಗಿದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಈ ಬಜೆಟ್‌ನ್ನು ಜನವಿರೋಧಿ ಬಜೆಟ್ ಎಂದು ಖಂಡಿಸಿದೆ.

ಭಜರಂಗಿಗಳ ತಾಲಿಬಾನ್‌ಗಿರಿಗೆ ಮಂಗಳೂರಿನಲ್ಲಿ ಮತ್ತೊಂದು ಅಮಾಯಕ ಜೀವ ಬಲಿಯಾಗಿದೆ. ಮೂಡಬಿದ್ರೆಯಂತಹ ಗ್ರಾಮೀಣ ಪ್ರದೇಶದ 9ನೇ ತರಗತಿಯ ಹಿಂದುಳಿದ ವರ್ಗದ ಅಮಾಯಕ ಹುಡುಗಿ ಅಶ್ವಿನಿ ಪ್ರಪಂಚವನ್ನು ಅರಿಯುವ ಮೊದಲೇ ಬಿಜೆಪಿಗರ ಮತೀಯತೆಯ ರಾಜಕೀಯದ ಬಲಿಪಶುವಾಗಿ ಧಾರುಣ ಸಾವನ್ನಪ್ಪಿದ್ದಾಳೆ. ಇಲ್ಲಿನ ಜನರು ಧಾರುಣ ಅಂತ್ಯಕ್ಕೆ ಯಾವ ರೀತಿ ಪ್ರತಿಕ್ರಿಯಿಸುವುದೆಂದು ತಿಳಿಯದೆ ತೊಳಲಾಡುತ್ತಿದ್ದಾರೆ. ಇಷ್ಟಕ್ಕೂ ಹೈಸ್ಕೂಲ್ ದಾಟುವ ಮೊದಲೇ ಧಾರುಣವಾಗಿ ಸಾಯಲು ಅಶ್ವಿನಿ ಮಾಡಿದ ತಪ್ಪಾದರೂ ಎಂತಾಹುದು?

ಅಮಾಯಕ ಹುಡುಗಿಯನ್ನು ಬಲಿಪಡೆದ ಹಿಂದುತ್ವದ ತಾಲಿಬಾನ್‌ಗಳು

ಸಂಜಯ

ಮಂಗಳೂರು ತಾಲ್ಲೂಕಿನ ತೀರಾ ಗ್ರಾಮೀಣ ಪ್ರದೇಶದ ಕಿನ್ನಿಗೋಳಿಯ ಪೊಂಪೈ ಹೈಸ್ಕೂಲಿನ 9ನೇ ತರಗತಿಯ ವಿದ್ಯಾರ್ಥಿನಿಯಾದ ಅಶ್ವಿನಿ ಸಂಕೋಚದ ಹುಡುಗಿ. ಮನೆಯಿಂದ ಶಾಲೆಗೆ ದಿನಾ ತನ್ನ ಗೆಳತಿ ಮಾದೇವಿಯೊಂದಿಗೆ ಅಭಿಮಾನ ಬಸ್ಸಿನಲ್ಲಿ ಸಂಚರಿಸುವ ಅಶ್ವಿನಿಗೆ ಬಸ್ ಮಾಲೀಕರ ಮಗ ಅದೇ ಬಸ್ಸಿನ ನಿರ್ವಾಹಕ ಸಲೀಂ ಪರಿಚಯವಾಗಿದೆ. ಹದಿಹರಿಯದ ಹುಡುಗಿಯರು ಯುವಕ ಸಲೀಂನೊಂದಿಗೆ ಸಲುಗೆಯನ್ನು ಹೊಂದಿದ್ದಾರೆ. ನಿತ್ಯ ಪರಿಚರಿಸುವ ಬಸ್ಸಿನ ನಿರ್ವಾಹಕನಾದ ಕಾರಣ ಇವರ ಮಧ್ಯೆ ಆತ್ಮೀಯತೆ ಬೆಳೆದಿದೆ. ಮೊನ್ನೆ ಘಟನೆ ನಡೆದ ದಿವಸ ಸಲೀಂ ಬಸ್ಸಿನಲ್ಲಿ ಮಾದೇವಿ ಹಾಗೂ ಅಶ್ವಿನಿ ಬೆಳ್ತಂಗಡಿಯವರಿಗೆ ಪ್ರಯಾಣ ಬೆಳೆಸಿದ್ದಾರೆ. ಬಸ್ ಕಂಡಕ್ಟರ್ ಸಲೀಂನೊಂದಿಗೆ ಆತ್ಮೀಯತೆಯಿಂದ ಮಾತನಾಡುತ್ತಾ ಸಾಗಿದ್ದಾರೆ. ಬೆಳ್ತಂಗಡಿ ತಲುಪಿದ ಬಸ್ ಮತ್ತೆ ತಿರುಗಿ ಮೂಡಬಿದ್ರೆಯತ್ತ ಪ್ರಯಾಣ ಬೆಳೆಸಿದೆ. ಅಶ್ವಿನಿ ಮತ್ತಾಕೆಯ ಸ್ನೇಹಿತೆ ಅದೇ ಬಸ್ ಮತ್ತೆ ತಿರುಗಿ ಮೂಡಬಿದ್ರೆಯತ್ತ ಪ್ರಯಾಣ ಬೆಳೆಸಿದೆ. ಅಶ್ವಿನಿ ಮತ್ತಾಕೆಯ ಸ್ನೇಹಿತೆ ಅದೇ ಬಸ್‌ನಲ್ಲಿ ವಾಪಸ್ಸು ಬಂದಿದ್ದಾರೆ. ಬಾಲಕಿಯರು ಮುಸ್ಲಿಮರಿಗೆ ಸೇರಿದ ಬಸ್ಸಿನಲ್ಲಿ ಬೆಳ್ತಂಗಡಿ ಪ್ರಯಾಣಿಸಿ ಅದೇ ಬಸ್ಸಿನಲ್ಲಿ ವಾಪಸ್ಸು ಬರುತ್ತಿರುವುದು ಕಂಡಕ್ಟರ್ ಸಲೀಂನೊಂದಿಗೆ ಸತತವಾಗಿ ಮಾತನಾಡುತ್ತಿರುವುದು ಸ್ಥಳೀಯ ಬಜರಂಗಿಗಳ ದೃಷ್ಟಿಗೆ ಬಿದ್ದಿದೆ. ತಕ್ಷಣ ಎಚ್ಚೆತ್ತ ಹಿಂದೂ ಸಂಸ್ಕೃತಿ ರಕ್ಷಕರಾದ ಭಜರಂಗ ಒಂದು ಜೀಪು ಮತ್ತು ಆಟೋರಿಕ್ಷಾದಲ್ಲಿ ಬಸ್ಸನ್ನು ಬೆನ್ನತ್ತಿದ್ದಾರೆ. ಮಾರೂರು ಎಂಬಲ್ಲಿ ಬಸ್ಸನ್ನು ಅಡ್ಡಗಟ್ಟಿದ 15 ಜನರ ಭಜರಂಗಿ ತಂಡ ಬಸ್ಸಿನೊಳಗೆ ನುಗ್ಗಿ ಮಾರ್ಗ ಮಧ್ಯೆಯದಲ್ಲಿಯೇ ಸಲೀಂ, ಅಶ್ವಿನಿ, ಮಾದೇವಿಯನ್ನು ಹಾಗೂ ಬಸ್ಸಿನ ಏಜೆಂಟ್ ರಫೀಕನಿಗೆ ಮನಸೋ ಇಚ್ಛೇ ಥಳಿಸಿದೆ. ಅಷ್ಟಕ್ಕೆ ಸುಮ್ಮನಾಗದೆ ಈ ನಾಲ್ವರನ್ನೂ ತಮ್ಮ ಜೀಪಿನಲ್ಲಿ ಬಲವಂತವಾಗಿ ಅಪಹರಿಸಿದೆ.

ಭಜರಂಗಿ ಹಲ್ಲೆಕೋರರೊಂದಿಗೆ ಟೀ ಕುಡಿದ ಪೋಲಿಸರು

ಅನಂತರ ತಮ್ಮ ವಿಚಾರಣೆಯನ್ನೆಲ್ಲಾ ಮುಗಿಸಿ ಎಂದಿನಂತೆ ನಾಲ್ವರನ್ನೂ ಮೂಡಬಿದ್ರೆ ಪೋಲಿಸರಿಗೆ ಒಪ್ಪಿಸಿದೆ. ಅನಂತರ ಎಲ್ಲವೂ ಇಂತಹ ಪ್ರಕರಣದಲ್ಲಿ ನಡೆಯುವಂತೆಯೇ ಸುಸೂತ್ರವಾಗಿ ನಡೆಯುತ್ತದೆ. ಠಾಣೆಯಲ್ಲಿ ಭಜರಂಗಿಗಳ ಎದುರೇ ಪೋಲಿಸರು ಸಲೀಮನಿಗೆ ಥಳಿಸುತ್ತಾರೆ. ಅಶ್ವಿನಿ ಮತ್ತು ಮಾದೇವಿಯ ಹೆತ್ತವರಿಗೆ ಬುಲಾವ್ ಹೋಗುತ್ತದೆ. ಅವರ ಹೆತ್ತವರು ಆತಂಕದಿಂದಲೇ ಪೋಲೀಸ್ ಠಾಣೆಗೆ ದೌಡಾಯಿಸುತ್ತಾರೆ. ಪೋಲೀಸರ ಎದುರೇ ಭಜರಂಗಿಗಳು ಹುಡುಗಿಯ ಹೆತ್ತರವರಿಗೆ ನೈತಿಕತೆಯ ಪಾಠವನ್ನು ಹೇಳಿಕೊಡುತ್ತಾರೆ. ಹೆಣ್ಣು ಮಕ್ಕಳನ್ನು ಹೇಗೆ ಸಾಕಬೇಕು, ಮುಸ್ಲಿಮರ ಸಂಪರ್ಕಕ್ಕೆ ಬರದಂತೆ ಹೇಗೆ ನೋಡಿಕೊಳ್ಳಬೇಕು ಎಂದು ಪಾಠ ಮಾಡಲಾಗುತ್ತದೆ. ಮನೆಯ ಮರ್ಯಾದೆ ಬೀದಿಯಲ್ಲಿ ಹೋದ ಅಸಹಾಯಕತೆಯಲ್ಲಿ ಹೆತ್ತವರು ಮೂಕರೋದನೆಯಲ್ಲಿ ತೊಡಗುತ್ತಾರೆ. ಹತಾಶೆಯಿಂದ ಮಾದೇವಿ ಹಾಗೂ ಅಶ್ವಿನಿಗೆ ಅಲ್ಲೇ ಬಡಿಯುತ್ತಾರೆ. ಹುಡುಗಿಯರಿಗೆ ಎಚ್ಚರಿಕೆ ಕೊಟ್ಟು ಹೆತ್ತವರೊಂದಿಗೆ ಮನೆಗೆ ಕಳುಹಿಸಲಾಗುತ್ತದೆ. ಸಲೀಂ ಹಾಗೂ ರಫೀಕನಿಗೆ ಪೋಲೀಸರ ಅತಿಥ್ಯ ಮುಂದುವರೆಯುತ್ತದೆ. ಕೊನೆಗೆ ಸಲೀಂನ ಕಡೆಯವರು ಬಂದು ಬಜರಂಗಿಗಳ ಬಳಿ ತಪ್ಪೊಪ್ಪಿಕೊಂಡು ಮುಚ್ಚಳಿಕೆ ಬರೆಸಿಕೊಟ್ಟು ಹೋಗುತ್ತಾರೆ. ಸಂಸ್ಕೃತಿ ರಕ್ಷಕರಾದ ಭಜರಂಗಿಗಳು ತಮ್ಮ ಅಜ್ಞಾರಾಧಕರಾದ ಪೋಲೀಸರೊಂದಿಗೆ ಟೀ ಕುಡಿದು ಹೆಣ್ಣಿನ ಮಾನಕಾಪಾಡಿದ ಗೆಟಪ್‌ನಲ್ಲಿ ವಿಜಯೋತ್ಸವದ ನಗೆಯೊಂದಿಗೆ ನಿರ್ಗಮಿಸುತ್ತಾರೆ.

ಗುಲ್ಲು -ವಿದಾಯ:

ಇತ್ತ ಗಂಭೀರ ಏಟಿನಿಂದ ಕ್ಲೀನರ್ ರಫೀಕ್



ಬಲಿಯಾದ ಅಶ್ವಿನಿ

ಮೂಡಬಿದ್ರೆ ಸರ್ಕಾರಿ ಆಸ್ಪತ್ರೆಗೆ ದಾಖಲಾಗುತ್ತಾನೆ. ಅಶ್ವಿನಿ ಹಾಗೂ ಮಾದೇವಿಯವರ ಬಗ್ಗೆ ರಂಗು ರಂಗಿನ ಕಥೆಗಳು ಊರಿಡಿ ಹಬ್ಬ ತೊಡಗುತ್ತವೆ. ಆ ಹುಡುಗಿಯರ ಹೆತ್ತವರು ಅವಮಾನದಿಂದ ಕುಗ್ಗಿಹೋಗುತ್ತಾರೆ. ತಮ್ಮ ಅಸಹಾಯಕತೆ ಹತಾಶೆಯಿಂದ ಅಶ್ವಿನಿಗೆ ಮನೆಯಲ್ಲೂ ಹೆತ್ತವರು ಹಲ್ಲೆ ನಡೆಸುತ್ತಾರೆ. ರಾತ್ರಿ ಇಡೀ ನಿದ್ರೆ ಇಲ್ಲದೆ ಕಳೆಯುವ ಅಶ್ವಿನಿಗೆ ಇನ್ನೂ ಬದುಕೇ ಅರ್ಥಹೀನ ಎಂಬ ಭಾವನೆ ಬೆಳೆದಿದೆ. ಅದಕ್ಕೆ ತಕ್ಕಂತೆ ಇಲ್ಲಿನ ಒಂದೆರಡು ಪತ್ರಿಕೆಗಳ ಸ್ವಯಂ ಸೇವಕ ಪತ್ರಕರ್ತರು 'ಗುಡ್ಡದಲ್ಲಿ ಹುಡುಗಿಯರೊಂದಿಗೆ ಚಕ್ಕಂದ'... ಭಜರಂಗಿಗಳ ಕಾರ್ಯಾಚರಣೆ ಮುಸ್ಲಿಂ ಯುವಕನಿಗೆ ಗೂಸ' ಎಂಬ ಟೈಟಲ್‌ನೊಂದಿಗೆ ಸುದ್ದಿ ಪ್ರಕಟಿಸಿದ್ದಾರೆ. ಇದೆಲ್ಲಕ್ಕೂ ಪ್ರತಿಕ್ರಿಯಿಸಲಾಗದ ಬಾಲಕಿ ಅಶ್ವಿನಿ ತನ್ನ ಬದುಕನ್ನೇ ಕೊನೆಗಾಣಿಸಲು ತೀರ್ಮಾನಿಸಿ ಮಾರನೇ ದಿವಸ ಬೆಳಿಗ್ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ಮುಖಾಂತರ ಈ ದುಷ್ಟ ಸಮಾಜಕ್ಕೆ ವಿದಾಯ ಹೇಳಿದ್ದಾಳೆ.

ಶವ ಪರೀಕ್ಷೆ ವರದಿ ಬರುವ ಮುಂಚೆಯೇ...

ಅನಂತರ ನಡೆದಿದ್ದು ಬಿಜೆಪಿಗರ ಮಹಾಡ್ರಾಮ. ತಾವೇ ಹಚ್ಚಿದ ಅಶ್ವಿನಿಯ ಚಿತೆಯ ಬೆಂಕಿಯಲ್ಲಿ ಚಳಿ ಕಾಯಿಸತೊಡಗಿದ ಚಡ್ಡಿಗಳು ಹೊಸ ಕಥೆ ಹೊಸೆಯ-ತೊಡಗಿದರು. ಅಶ್ವಿನಿಯ ಮೇಲೆ ಸಲೀಂ ಅತ್ಯಾಚಾರವೆಸಗಿದ್ದ. ಅದನ್ನು ಸಾಯುವ ಹಿಂದಿನ ರಾತ್ರಿ ಅಶ್ವಿನಿ ಅವಳ ತಾಯಿಯೊಂದಿಗೆ ಹೇಳಿದ್ದಳು. ಅತ್ಯಾಚಾರದಿಂದ ಆದ ಅವಮಾನದಿಂದ ಅಶ್ವಿನಿ ಆತ್ಮಹತ್ಯೆಗೈದಿದ್ದಾಳೆ ಎಂಬ ದೂರನ್ನು ಅಶ್ವಿನಿಯ ಹೆತ್ತವರ ಮೇಲೆ ಒತ್ತಡ ಹಾಕಿ ಮೂಲ್ಕಿ ಠಾಣೆಯಲ್ಲಿ ಕೊಡಿಸಲಾಗುತ್ತದೆ. ಇತ್ತ ಮಾಧ್ಯಮಗಳಿಗೆ ಪೋಲೀಸರು-ಭಜರಂಗಿಗಳು ಸೇರಿಯೇ ಕಥೆಯನ್ನು ವಿವರಿಸತೊಡಗುತ್ತಾರೆ. ಅಶ್ವಿನಿ ಮತ್ತು ಮಾದೇವಿಯನ್ನು ಸಲೀಂ ಪುಸಲಾಯಿಸಿ ಮಾರೂರು ಬಳಿಯ ಕಾಡಿಗೆ ಕರೆದೊಯ್ದಿದ್ದ. ಅಲ್ಲಿ ಇಬ್ಬರು ಬಾಲಕಿಯರೊಂದಿಗೆ ಆತ ಲೈಂಗಿಕತೆಯಲ್ಲಿ ತೊಡಗಿದ್ದಾನೆ. ಆ ಸಂದರ್ಭದಲ್ಲಿ ಸಾರ್ವಜನಿಕರು ಪತ್ತೆ ಹಚ್ಚಿ ಪೋಲೀಸರಿಗೆ ಒಪ್ಪಿಸಿದ್ದಾರೆ. ಹುಡುಗಿಯರ ಮತ್ತು ಅವರ ಮನೆಯವರ ಮಾನ ಬೀದಿಯಲ್ಲಿ ಹೋಗುವುದು ಬೇಡ ಎಂಬ ಮಾನವೀಯತೆಯಿಂದ ನಾವು ಕೇಸ್ ದಾಖಲಿಸದೆ ಎಚ್ಚರಿಕೆ ಕೊಟ್ಟು ಕಳುಹಿಸಿದ್ದೆವು, ಈಗ ಹುಡುಗಿ ಆತ್ಮಹತ್ಯೆ ಗೈದಿದ್ದಾಳೆ. ಅಶ್ವಿನಿಯ ಸಾವಿಗೆ ಮುಸಲ್ಮಾನ ಸಲೀಂನೇ ಕಾರಣ. ಮುಸ್ಲಿಮರು ಹೇಗೆ ನಿರಂತರವಾಗಿ ಹಿಂದೂ ಹುಡುಗಿಯರನ್ನು ಬಲಿ ಪಡೆಯುತ್ತಲೇ ಇದ್ದಾರೆ. ಈಗ ಸಲೀಂನ ಮೇಲೆ ಅಶ್ವಿನಿಯ ಹೆತ್ತವರು ಅತ್ಯಾಚಾರ, ಆತ್ಮಹತ್ಯೆಗೆ ಪ್ರೇರಣೆ ದೂರು ದಾಖಲಿಸಿದ್ದಾರೆ. ಸಲೀಂನನ್ನು ಬಂಧಿಸಲಾಗಿದೆ. ಇನ್ನಾದರೂ ಹಿಂದೂ ಹುಡುಗಿಯರು ಹಾಗೂ ಅವರು ಹೆತ್ತವರು ಎಚ್ಚರಿಕೆ ವಹಿಸಬೇಕು ಎಂದು ಹೇಳಲಾಗುತ್ತದೆ. ಪರಮಸತ್ಯ ಎಂಬಂತೆ ಮಾಧ್ಯಮ ಪ್ರಕಟಿಸತೊಡಗುತ್ತವೆ. ಪೋಸ್ಟ್ ಮ ರಿಪೋರ್ಟ್ ಬರುವ ಮುಂಚೆಯೇ ಎಲ್ಲಾ ತನ್ನೊಳಗೆ ಬಿಚ್ಚಿಟ್ಟುಕೊಂಡಿದ್ದ ಅಶ್ವಿನಿ ಮಾತ್ರ ಬೂದಿಯಾಗಿ ಹೋಗುತ್ತಾಳೆ.



ಹಲ್ಲೆಗೊಳಗಾದ ರಫೀಕ್

ಅಶ್ವಿನಿ ಕುಟುಂಬ ಅಡಗಿಕೊಂಡಿರುವುದ

ಈ ರೀತಿಯ ಸರಣಿ ಕಥೆಗಳು ಕರಾವ ಸಂಘ ಪರಿವಾರ ಬೋರ್ ಹೊಡೆಸುವಷ್ಟು ದಶಕಗಳಿಂದಲೂ ದಿನನಿತ್ಯ ಹೇಳುತ್ತಾ ಬಂ ಮತ್ತೆ ಈ ಬಾರಿ ಅದೇ ಹಳಸಲು ಕಥ ಮಾಧ್ಯಮಗಳು ಪ್ರಕಟಿಸಿವೆ. ಪೋಸ್ಟ್ ಮ ವರದಿ ಬರುವ ಮುಂಚೆಯೇ ಅತ್ಯಾಚಾರ ಎಂದು ಪೋಲೀಸರ ತೀರ್ಮಾನಿಸಿದ್ದು, ಅತ ನಡೆದಿದ್ದರೆ ಕೇಸ್ ದಾಖಲಿಸದೆ ಸಲೀ ಪೋಲೀಸರು ಬಿಡುಗಡೆ ಮಾಡಿದ್ದು ಯಾಕೆ? ನಿರ್ವಾಹಕ ಬಸ್ಸಿನಲ್ಲಿ ಕರ್ತವ್ಯದಲ್ಲಿರುವ ಅತ್ಯಾಚಾರವೆಸಗುವುದು ಹೇಗೆ? ಸಲುಗೆಯಿಂದ ಇದ್ದ ಮಾತ್ರಕ್ಕೆ 9ನೇ ತರ ಬಾಲಕಿಯರ ಮೇಲೆ ಹುಡುಗಿಯರಿಗೆ ಯಾ ರೀತಿಯಲ್ಲಿ ಸಂಬಂಧಿಕರಲ್ಲದ, ಅಪರಿಚಿ ಭಜರಂಗಿದಳದ ಕಾರ್ಯಕರ್ತರು ಬಹಿರಂ ಹಲ್ಲೆ ನಡೆಸಿ ಅಪಹರಿಸಿ ಪೋಲೀಸ್ ಬಲವಂತವಾಗಿ ಕೊಂಡೊಯ ತಪ್ಪಲ್ಲವೇ? ಬಾಲಕಿಯರ ಮನೆಯ ಠಾಣೆಗೆ ಕರೆಯಿಸಿ ಮಾಧ್ಯಮದ ಚಕ್ಕಂದದ ಕಥೆ ಹೇಳಿ ಸಾರ್ವಜನಿ ಅಪಮಾನಗೊಳಿಸಿದ್ದು ತಪ್ಪಲ್ಲವೇ ರೀತಿಯ ಅಪಮಾನವನ್ನು ಯಾವುದೇ ಗ್ರಾ ಪ್ರದೇಶದ ಹಿಂದುಳಿದ, ಬಡ ಕುಟುಂಬ ಸಹಿಸಲು ಸಾಧ್ಯವೇ? ಇನ್ನೂ ಯಾವತ್ತಾ ಇಂತಹ ಕುಟುಂಬ ಸಮಾಜದಲ್ಲಿ ತಲೆ ಎತ್ತಿ ತಿ ಸಾಧ್ಯವುಂಟಾ? ಕಾನೂನನ್ನು ಕೈಗೆತ್ತಿಕೊಂಡು ಅಮಾನುಷ ದುರಂತಮಯ ಪರಿಸ್ಥಿತಿಗೆ ಅಶ್ವಿ ಹಾಗೂ ಕುಟುಂಬವನ್ನು ದೂಡಿದ ಸಂಸ್ಕೃತಿ ರ ಯಾಕೆ ಪೋಲೀಸರು ಕನಿಷ್ಠ ವಿಚಾ ಗುರಿಪಡಿಸುತ್ತಿಲ್ಲ. ಅಶ್ವಿನಿಯ ಸ್ನೇಹಿತೆ ಮಾದೇ ಕುಟುಂಬ ನಿಗೂಢವಾದ ಸ್ಥಳದಲ್ಲಿ ಅ ಕೂರುವುದರ ಹಿಂದೆ ಯಾರಿದ್ದಾರೆ? ಆಕೆಯನ್ನು ಬಹಿರಂಗಪಡಿಸುತ್ತಿಲ್ಲ ಎಂಬ ಪ್ರಶ್ನೆಯನ್ನು ಒಂದೆರಡು ಮಾಧ್ಯಮ ಬಿಟ್ಟು ಬೇರೆ ಯ ಕೇಳುತ್ತಿಲ್ಲ. ಎ ಅತ್ಯಾಚಾರದ ಆರೋ ಶಿಕ್ಷೆಯಾಗುವ ಹುಡುಗಿಯರ ತಪ್ಪುತ್ತಿರುವ ಮುಸ್ಲಿಮ್ ಯು ಕೀಟಳೆಗಳ ಚರ್ಚಿಸುತ್ತಿದ ದುರಂತವೆಂದರೆ ಇಷ್ಟೆಲ್ಲಾ ನಡೆದ ನಂತ ಅಶ್ವಿನಿಯ ಕುಟುಂಬ ಅಶ್ವಿನಿಯ ಸಾವಿಗೆ ಬ ಕಾರಣವಾದ ಬಿಜೆಪಿಗಳ ಮನೆಗೆ ಆಗಮಿ ಪ್ರಕರಣವನ್ನು ಸಿಓಡಿಗೆ ವಹಿಸಿದ್ದಾರೆ.

ಗುಜರಾತ್ ಹತ್ಯಾಕಾಂಡ : ತೆರೆದುಕೊಳ್ಳುತ್ತಿರುವ ಇನ್ನಷ್ಟು ಪುಟಗಳು

ಸುಪ್ರಿಂ ಕೋರ್ಟ್ ವಹಿಸಿಕೊಟ್ಟ ಒಂದು ಕೇಸಿನಲ್ಲಿ ಎಸ್‌ಐಟಿ ಈಗ ಮಾಡಿರುವ ಬಂಧನಗಳು ಗುಜರಾತ್ ರಾಜ್ಯ ಪೋಲೀಸ್ ಮತ್ತು ಆಡಳಿತ ಅಲ್ಲಿ ನಡೆದ ಮಾರಣ ಹೋಮದಲ್ಲಿ ಶಾಮೀಲಾಗಿವೆ ಎಂಬ ಅನುಮಾನಗಳನ್ನು ದೃಢಪಡಿಸಿವೆ. ಸಂಘ ಪರಿವಾರದ 'ಮಾದರಿ ಮುಖ್ಯ ಮಂತ್ರಿ'ಯದ್ದು ಈ ಬಗ್ಗೆ ದಿವ್ಯ ಮೌನ!

ಸಾವಿರಾರು ಜೀವಗಳನ್ನು ಬಲಿ ತೆಗೆದುಕೊಂಡ ಗುಜರಾತ್ ಹತ್ಯಾಕಾಂಡ ನಡೆದು ಏಳು ವರ್ಷಗಳಾಗಿವೆ. ಕಳೆದ ವಾರ ವಿಶೇಷ ತನಿಖಾ ತಂಡ(ಎಸ್‌ಐಟಿ) ಒಬ್ಬ ಪೋಲೀಸ್ ಅಧಿಕಾರಿಯನ್ನು ಬಂಧಿಸಿದ ಸುದ್ದಿ ಬಂದಿದೆ. ಈ ಸರಕಾರೀ ಪ್ರಾಯೋಜಿತ ಹಕ್ಯಾಕಾಂಡದ ಸಂದರ್ಭದಲ್ಲಿ ಬಂಧಿತನಾಗಿರುವ ಮೊದಲ ಪೋಲೀಸ್ ಅಧಿಕಾರಿ ಈತ.

ನಾಲ್ಕು ವರ್ಷಗಳ ಹಿಂದೆ ದೇಶದ ಸರ್ವೋಚ್ಚ ನ್ಯಾಯಾಲಯ ಗುಜರಾತಿನಲ್ಲಿ ಸಂತ್ರಸ್ತರಿಗೆ ಉದ್ದೇಶಪೂರ್ವಕವಾಗಿಯೇ ನ್ಯಾಯ ಸಿಗದಂತೆ ಮಾಡಲಾಗುತ್ತಿದೆ ಎಂದು ಗಮನಿಸಿ ಸಾಕಷ್ಟು ಸಾಕ್ಷ್ಯಗಳಿಲ್ಲವೆಂದು ರಾಜ್ಯ ಪೋಲೀಸು ಮುಚ್ಚಿಬಿಟ್ಟ 2000 ಕ್ಕೂ ಹೆಚ್ಚು ಗಲಭೆ ಮೊಕದ್ದಮೆಗಳನ್ನು ಪುನಃ ತೆರೆಯಿತು. ಅವುಗಳಲ್ಲಿ 10 ಅತ್ಯಂತ ಭೀಕರ ಘಟನೆಗಳನ್ನು ಅದು ವಿಶೇಷ ತನಿಖಾ ತಂಡಕ್ಕೆ ವಹಿಸಿ ಕೊಟ್ಟಿತು.


ಈಗ ಬಂಧಿತನಾಗಿರುವ ಪೋಲೀಸ್ ಅಧಿಕಾರಿ, ಕಿರಿಸಿತ್‌ಸಿನ್ ಎರ್ದಾ ಗುಲ್ಬೆರ್ಗ್ ಸೊಸೈಟಿ ಅಗ್ನಿಕಾಂಡ ನಡೆದ ಪ್ರದೇಶದ ಪೋಲೀಸ್ ಸ್ಟೇಶನ್ನಿನ ಉಸ್ತುವಾರಿ ನಡೆಸುತ್ತಿದ್ದ ಪೋಲೀಸ್ ಇನ್ಸ್‌ಪೆಕ್ಟರ್ ಆಗಿದ್ದ. ಈ ಅಗ್ನಿಕಾಂಡದಲ್ಲಿ ಮಾಜಿ ಕಾಂಗ್ರೆಸ್ ಸಂಸತ್ ಸದಸ್ಯ, 74 ವರ್ಷದ ಎಹಸಾನ್ ಜಾಫ್ರಿ ಸೇರಿದಂತೆ 43 ಜನರನ್ನು ಜೀವಂತ ಸುಡಲಾಗಿತ್ತು. ಆ ಕಟ್ಟಡದಲ್ಲಿದ್ದ 31 ಜನ ಪತ್ತೆಯಾಗಿಲ್ಲ ಎಂದೂ ಆಗ ವರದಿಯಾಗಿತ್ತು. ಈ ದಾಳಿ ನಡೆಯಲಿದೆ ಎಂದು ಪೋಲೀಸರಿಗೆ ಮಾಹಿತಿ ನೀಡಿದರೂ ಪೋಲೀಸರು ಬರಲೇ ಇಲ್ಲ ಎಂಬ ಹಲವಾರು ದೂರುಗಳು ಈ ಘಟನೆಯ ಬಗ್ಗೆ ಕೇಳಬಂದಿದ್ದವು. ಇವುಗಳ ತನಿಖೆಯ ಆಧಾರದಲ್ಲಿ ಈ ಎರ್ದಾನನ್ನು ಈಗ ಬಂಧಿಸಲಾಗಿದೆ.

ಇನ್ನೂ ಐವರ ಮೇಲೆ ನಿಗಾ

ಈತನ ಮೇಲೆ ಈಗಿರುವ ಆಪಾದನೆ ಆತ ಕರ್ತವ್ಯಚ್ಯುತಿ ಎಸಗಿದ್ದಾನೆ ಮಾತ್ರವಲ್ಲ, ಈ ಹತ್ಯಾಕಾಂಡದಲ್ಲಿ ಅಪಾದಿತರಾದವರನ್ನು ಉಳಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸುವಲ್ಲಿ ಶಾಮೀಲಾಗಿದ್ದಾನೆ ಎಂಬ ಆಪಾದನೆಯೂ ಇದೆ. ತಮಾಷೆಯೆಂದರೆ, ಗುಲ್ಬೆರ್ಗ್ ಸೊಸೈಟಿ ಮೊಕದ್ದಮೆಯ ಎಫ್‌ಐಆರ್‌ನಲ್ಲಿ ಈ ಎರ್ದಾನೇ ದೂರು ನೀಡಿದವರಲ್ಲಿ ಪ್ರಮುಖ. ಈ ದೂರಿನ ಆಧಾರದಲ್ಲಿ 22 ಜನರನ್ನು ಬಂಧಿಸಲಾಗಿತ್ತು. ಆದರೆ ಇವರೆಲ್ಲರನ್ನೂ ನ್ಯಾಯಾಲಯ ಅವರ ವಿರುದ್ಧ ಸಾಕ್ಷ್ಯಗಳು ದುರ್ಬಲವಾಗಿವೆ ಎಂದು ಬಿಡುಗಡೆ ಮಾಡಿತ್ತು. 'ಆತನ ವಿರುದ್ಧ ಸಾಕಷ್ಟು ಸಾಕ್ಷ್ಯಗಳಿವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಬಂಧನಗಳಾಗಬಹುದು' ಎಂದು ಎಸ್‌ಐಟಿ ಮುಖ್ಯಸ್ಥ ಆರ್. ಕೆ. ರಾಘವನ್ ಹೇಳಿದ್ದಾರೆ.

ಈಗಾಗಲೇ ಈ ಒಂದು ಕೇಸಿನಲ್ಲೇ 54 ಆಪಾದಿತರನ್ನು ಬಂಧಿಸಲಾಗಿದೆ. ಕೆಲವು ವರದಿಗಳ ಪ್ರಕಾರ, ಇನ್ನೂ 5 ಹಿರಿಯ ಪೋಲೀಸ್ ಅಧಿಕಾರಿಗಳ ಮೇಲೆ ಕಣ್ಣಿಡಲಾಗಿದೆ. ಇವರಲ್ಲಿ ಒಬ್ಬ ಹೆಚ್ಚುವರಿ ಡಿಜಿಪಿ, ಒಬ್ಬ ಡಿಸಿಪಿ, ಒಬ್ಬ ಎಸಿಪಿ ಮತ್ತು ಇಬ್ಬರು ಡಿಎಸ್‌ಪಿಗಳು.

ಇಂತಹ ಗಟ್ಟಿ ಸಾಕ್ಷ್ಯವಿದ್ದರೂ ಆ ರಾಜ್ಯದ ಮುಖ್ಯ ಮಂತ್ರಿ ಪಶ್ಚಾತ್ತಾಪ ವ್ಯಕ್ತಪಡಿಸುತ್ತಾರೆ ಎಂಬ ನಿರೀಕ್ಷೆಯೇನೂ ಇರಲಿಲ್ಲ. ಆದರೆ ಮೌನವಾಗಿರುವುದೇ ಲೇಸು ಎಂದು ಆತ ಬಗೆದಂತಿತ್ತು. ಆದರೆ ಇನ್ನೂ ಹೊಲಸೆಂದರೆ, ಕೋಮು ಧ್ರುವೀಕರಣದಿಂದ ರಾಜಕೀಯ, ಚುನಾವಣಾ ಲಾಭ ಗಿಟ್ಟಿಸುವ ಉದ್ದೇಶದಿಂದ ಆತ ಮುಂಬೈ ಭಯೋತ್ಪಾದಕ ದಾಳಿ ಸ್ಥಳೀಯರ ಬೆಂಬಲವಿಲ್ಲದೆ ಸಾಧ್ಯವಿರಲಿಲ್ಲ ಎಂದು ಹೇಳಿ ಪಾಕಿಸ್ತಾನ ಸಾಕ್ಷ್ಯಗಳ ವಿರುದ್ಧ ನಡೆಸಿರುವ ಪ್ರಚಾರಕ್ಕೆ ತುಪ್ಪ ಸುರಿದಿದ್ದಾರೆ. ಹೀಗಿದೆ ಭಯೋತ್ಪಾದನೆಯ ವಿರುದ್ಧ ಬಿಜೆಪಿಯ ಹೋರಾಟದ ಪರಿ!



ಇನ್ನಷ್ಟು ವಿಳಂಬ ಬೇಡ

ನ್ಯಾಯದಲ್ಲಿ ವಿಳಂಬ ಎಂದರೆ ನ್ಯಾಯವನ್ನು ನಿರಾಕರಿಸಿದಂತೆಯೇ ಎಂಬುದೊಂದು ಸಾರ್ವತ್ರಿಕವಾದ ಮಾತು. ಆದರೆ ಏಳು ವರ್ಷಗಳ ನೋವು, ಸಂಕಟಗಳ ನಂತರವಾದರೂ ಈ ನಿಸ್ಸಹಾಯಕರಿಗೆ ನ್ಯಾಯ ದೊರೆಯುತ್ತಿದೆ ಎಂಬುದು ಸ್ವಲ್ಪ ಸಮಾಧಾನದ ಸಂಗತಿ. ಇದು ಈ ವ್ಯವಸ್ಥೆಯ ಬಗ್ಗೆ ಸ್ವಲ್ಪ ಮಟ್ಟಿನ ವಿಶ್ವಾಸವನ್ನು ಮತ್ತೆ ತಂದಿದೆ.

ಈ ಹತ್ಯಾಕಾಂಡ ನಡೆದಾಗ ಎಲ್ಲಾ ಸಂವಿಧಾನಿಕ ಸಂಸ್ಥೆಗಳು, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಕೂಡಾ ರಾಜ್ಯ ಸರಕಾರದ ಮೇಲೆ ನಿರ್ಲಕ್ಷ್ಯದ ಮಾತ್ರವಲ್ಲ, ಅಪರಾಧಕ್ಕೆ ಕುಮ್ಮಕ್ಕು ನೀಡಲಾಗುತ್ತಿದೆ ಎಂಬ ಆರೋಪ ಮಾಡಿದ್ದವು. ನ್ಯಾಯಾಂಗ ಸ್ವಲ್ಪವಾದರೂ ನ್ಯಾಯ ಒದಗಿಸುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ನ್ಯಾಯಾಂಗ ಸ್ಥಳೀಯ ಪೋಲೀಸರು ಸಿದ್ಧಪಡಿಸಿದ ಕೇಸಿನ ಆಧಾರದಲ್ಲಿಯೇ ತಾನೇ ತೀರ್ಪು ನೀಡಲು ಸಾಧ್ಯ? ಇಲ್ಲಿಯೇ ಎಸ್‌ಐಟಿ ಈಗ ಮಾಡಿರುವ ಬಂಧನಗಳು ಗುಜರಾತ್ ರಾಜ್ಯ ಪೋಲೀಸ್ ಮತ್ತು ಆಡಳಿತ ಇದರಲ್ಲಿ ಶಾಮೀಲಾಗಿವೆ ಎಂಬ ಅನುಮಾನಗಳನ್ನು ದೃಢಪಡಿಸಿರುವುದು. ಜಾತ್ಯಾತೀತ ಪ್ರಜಾಸತ್ತಾತ್ಮಕ ಆಧುನಿಕ ಭಾರತ ನ್ಯಾಯ ನೀಡಿಕೆಯಲ್ಲಿ ಇನ್ನಷ್ಟು ವಿಳಂಬವನ್ನು ಸಹಿಸಲಾರದು. ದೇಶದ ಸರ್ವೋಚ್ಚ ನ್ಯಾಯಾಲಯ ಎಸ್‌ಐಟಿ ಸಲ್ಲಿಸುವ ವರದಿಯ ಮೇಲೆ ತ್ವರಿತವಾಗಿ ಕ್ರಮ ಕೈಗೊಳ್ಳುತ್ತದೆ, ನ್ಯಾಯ ನೀಡಿಕೆಯ ವ್ಯವಸ್ಥೆಯಲ್ಲಿ ನಂಬಿಕೆಯೆಂಬುದನ್ನು ಮತ್ತೆ ತರುತ್ತದೆ ಎಂಬ ನಿರೀಕ್ಷೆ ಪ್ರಜಾಪ್ರಭುತ್ವವಾದಿಗಳದ್ದು. ಆಧುನಿಕ ಭಾರತೀಯ ಗಣತಂತ್ರದ ಬುನಾದಿಯನ್ನು ಭದ್ರಗೊಳಿಸಲು ಇದು ಅಗತ್ಯ.

ಹಿಂದುತ್ವದ ತಾಲಿಬಾನ್‌ಗಳು.....


ಪುಟ 6 ರಿಂದ

...ನಿಖೆಯ ಭರವಸೆ ನೀಡಿದ್ದಾರೆ. ಪದ್ಮಪ್ರಿಯ ಪ್ರಕರಣದಲ್ಲಿ ಸಿಓಡಿ ತನಿಖೆಯ ವಿಧಾನವನ್ನು ...ಡಿರುವ ಯಾರಿಗೂ ಈ ಪ್ರಕರಣದಲ್ಲಿ ಕನಿಷ್ಠ ...ನ್ಯಾಯ ದೊರಕುವ ಭರವಸೆ ಇಲ್ಲ. ಎಲ್ಲವನ್ನೂ ...ಣ್ಣ ಘಟನೆಯೆಂದು ತೇಲಿಸಿಬಿಡುವ ಗೃಹಸಚಿವ ...ಚಾರ್ಯನ ಕಣ್ಣಿಗೆ ಈ ಕೇಸ್ ಇನ್ನೂ ಬಿದ್ದೇ ಇಲ್ಲ.

...ಾಲಿಬಾನ್' ಅಲ್ಲವಂತೆ

ಇತ್ತ ಕರಾವಳಿಯಲ್ಲಿ ತಾಲೀಬಾನೀಕರಣ ...ಡೆಯುತ್ತದೆ ಎಂದು ಹೇಳಿಕೆ ನೀಡಿದ ಸಚಿವೆ ರೇಣುಕಾ ...ಧರಿಯ ಮೇಲೆ ಕೇಸ್ ದಾಖಲಿಸುವ ಬೆದರಿಕೆ ...ಡ್ಡಿರುವ ಚಡ್ಡಿಗಳು ರೇಣುಕಾ ಚೌಧರಿಯಿಂದ ...ಂಗಳೂರಿನ ಮಾನ ಹಾಡುಹಗಲೇ ಹರಾಜಾಗಿದೆ ...ಂದು ಸಾರ್ವಜನಿಕವಾಗಿ ಕಣ್ಣೀರು ಸುರಿಸುತ್ತಿದ್ದಾರೆ. ...ಜರಂಗಿ ವಕೀಲ ಪಿ.ಪಿ.ಹೆಗ್ಡೆ, ನಾಲಾಯಕ್ ಮೇಯರ್ ಗಣೇಶ್ ಹೊಸಬೆಟ್ಟು ರೇಣುಕಾಚೌಧರಿಗೆ ನೋಟಿಸ್ ನೀಡುವ ಕಾರ್ಯಕ್ರಮವನ್ನು ಪತ್ರಕರ್ತರ ಸಮ್ಮುಖದಲ್ಲೇ ಮಾಡಿದ್ದಾರೆ. ಮಾನವ ಹಕ್ಕು ಆಯೋಗದ ಅಧ್ಯಕ್ಷರಾದ ನ್ಯಾಯವಾದಿ ನಾಯಕ್‌ರವರು ಮಂಗಳೂರನ್ನು ನಟೋರಿಯಸ್ ಜಿಲ್ಲೆ ಎಂದು ಕರೆದಿದ್ದಾರೆ.

ಪಬ್ ಮೇಲಿನ ದಾಳಿ ಆರೋಪಿಗಳು, ಶೃತಿ ಅಪಹರಣ ಪ್ರಕರಣದ ಆರೋಪಿಗಳು ಬಿಡುಗಡೆ ಹೊಂದಿ ರಾಜಾರೋಷವಾಗಿ ಮಂಗಳೂರಿನ ಬೀದಿಗಳಲ್ಲಿ ತಿರುಗಾಡುತ್ತಿದ್ದಾರೆ. ಇದೆಲ್ಲದಕ್ಕೂ ಮಿಗಿಲಾಗಿ ಕಳೆದ ತಿಂಗಳು ನಡೆದ ವಿದ್ಯಾರ್ಥಿ ತಂಜೀಮ್ ಕೊಲೆ ಪ್ರಕರಣದಲ್ಲಿ ಬಿಜೆಪಿಗರು ದಿನಗೂಲಿ ನಿಗದಿಪಡಿಸಿ ಹಾಜರುಪಡಿಸಿದ್ದ ಮೂರು ಜನ ಕೊಲೆ ಆರೋಪಿಗಳು ಪ್ರಕರಣಕ್ಕೆ ತಿಂಗಳು ತುಂಬುವ ಮೊದಲೇ ಬಿಡುಗಡೆಗೊಂಡು ಅಚ್ಚರಿ ಹುಟ್ಟಿಸಿದ್ದಾರೆ. ತಂಜೀಮ್‌ನ ಧಾರುಣ ಸಾವು ಕಂಡು ಬಿಜೆಪಿಗಳ ಅಂಗಡಿಗಳಿಗೆ ಕಲ್ಲು ಬಿಸಾಡಿದ್ದ ತಂಜಮ್‌ನ ಊರಾದ ಕಾಟಿಪಳ್ಳದ 80ಕ್ಕೂ ಹೆಚ್ಚು ಹುಡುಗರು ತಮ್ಮ ಮೇಲೆ ಪೋಲೀಸರು ಹೂಡಿರುವ ಕಠಿಣ ಕಾಯ್ದೆಗಳನ್ನು ಕಂಡು ಜೈಲಿಗೆ ಹೋದರೆ ತಿಂಗಳು ಗಟ್ಟಲೆ ಜಾಮೀನು ಸಿಗಲು ಸಾಧ್ಯವಿಲ್ಲ ಎಂದು ಹೆದರಿ ತಲೆತಪ್ಪಿಸಿ ತಿರುಗಾಡುತ್ತಿದ್ದಾರೆ. ಇಲ್ಲಿನ ಆರಾಜಕತೆಗೆ ಯಾರದ್ದಾದರೂ ತಲೆಬಲಿಕೊಡಲೇ ಬೇಕಾದ ಒತ್ತಡದಲ್ಲಿದ್ದ ಬಿಜೆಪಿ ಸರ್ಕಾರ ತಮ್ಮ ನೆಚ್ಚಿನ ಪೋಲೀಸರನ್ನು ರಕ್ಷಿಸಲು ಅಪರೂಪಕ್ಕೊಮ್ಮೆ ತಮ್ಮ ಆದೇಶವನ್ನು ಧಿಕ್ಕರಿಸುತ್ತಿದ್ದ ಸೋಮಾರಿ ಐಜಿಪಿ ಎ.ಎಂ.ಪ್ರಸಾದ್‌ರನ್ನು ವರ್ಗಾಯಿಸಿದೆ. ಮಂಗಳೂರಿನ ಜನತೆ ನಿಟ್ಟುಸಿರು ಬಿಡುತ್ತಿದ್ದರೆ, ಎಡಪಂಥೀಯ ಯುವಜನ ವಿದ್ಯಾರ್ಥಿಗಳು ಬೀದಿಗಿಳಿದು ಹೋರಾಟ ನಡೆಸುತ್ತಿದ್ದರೆ ಕಾಂಗ್ರೆಸಿಗರು ತಮಗೂ ಈ ಎಲ್ಲಾ ಘಟನೆಗಳಿಗೂ ಸಂಬಂಧವೇ ಇಲ್ಲ ಎಂಬಂತೆ ಮುಂದಿನ ಲೋಕಸಭಾ ಚುನಾವಣೆಯ ಅಭ್ಯರ್ಥಿಆಯ್ಕೆಯ ಕಾಲೆಳೆದಾಟದಲ್ಲಿ ಬ್ಯುಸಿಯಾಗಿದ್ದಾರೆ. ಕಾಂಗ್ರೆಸ್ಸಿನ ವಿದ್ಯಾರ್ಥಿ ವಿಭಾಗವಾದ ಎನ್‌ಎಸ್‌ಯುಐ ಪ್ರೇಮಿಗಳ ದಿನದಂದು ಕೃಷ್ಣ ಪೂಜೆಯನ್ನು ಹಮ್ಮಿಕೊಂಡಿತ್ತು. ನಾಲ್ಕು ಜನ ಶಾಸಕರನ್ನು ಹೊಂದಿರುವ ಲೋಕಸಭಾ ಚುನಾವಣೆಯನ್ನು ಗೆಲ್ಲುವ ಕನಸಿನಲ್ಲಿರುವ ಕಾಂಗ್ರೆಸ್ಸಿನ ಪರಿಸ್ಥಿತಿ ಹೀಗಿರುವಾಗ ಜನತೆ ಈ ಕಾಂಗ್ರೆಸ್ಸಿಗರಿಂದ ಬಿಜೆಪಿಯ ಮತೀಯವಾದ ವಿರುದ್ಧ ಹೋರಾಟವನ್ನು ನಿರೀಕ್ಷಿಸಲು ಸಾಧ್ಯವೇ? ದಿನನಿತ್ಯ ಭಜರಂಗಿಗಳ ವಿರುದ್ಧ ಬೀದಿಗಿಳಿದು ಹೋರಾಟ ನಡೆಸುತ್ತಿರುವ ಎಡಪಂಥೀಯ ವಿದ್ಯಾರ್ಥಿ ಯುವಜನ ಚಳುವಳಿ ಕಾರ್ಮಿಕ ಚಳುವಳಿ ನೈಜ ಪರ್ಯಾಯವಾಗುವತ್ತ ಗಂಭೀರ ಚಿಂತನೆ ನಡೆಸಬೇಕಾಗಿದೆ. ಅದು ಮಾತ್ರ ಕರಾವಳಿಗೆ ಬಡಿದಿರುವ ಹಿಂದುತ್ವದ ತಾಲೀಬಾನಿಗಳ ಸೈತಾನನ ಹೊಡೆತದಿಂದ ಬಿಡುಗಡೆಗೊಳಿಸೀತು. ಆ ನಿಟ್ಟಿನಲ್ಲಿ ಇಲ್ಲಿಯ ಜನರ ಚಳುವಳಿ ಮುನ್ನಡೆಯಬೇಕಾಗಿದೆ.



ದೇಶದ ಆರ್ಥಿಕ ರಂಗದಲ್ಲಿ ತೀವ್ರಗೊಳ್ಳುತ್ತಾ ನಡೆದಿರುವ ಗಂಭೀರ ಆರ್ಥಿಕ ಬಿಕ್ಕಟ್ಟು, ಉದ್ದಿಮೆಗಳು ಕುಸಿದು, ಕೈಗಾರಿಕೆಗಳು ಮುಚ್ಚಿ, ನಿರುದ್ಯೋಗ ಹೆಚ್ಚುತ್ತಿರುವ ಬಗ್ಗೆ, ಸಂಕಷ್ಟಕ್ಕೆ ಗುರಿಯಾಗಿರುವ ರೈತರು-ಕೂಲಿಕಾರರು ಬಡವರ ಕಡೆಗೆ ಈ ಸರ್ಕಾರಕ್ಕೆ ಲಕ್ಷ್ಯವೇ ಇಲ್ಲ ಎಂಬುದು ಬಜೆಟ್‌ನಿಂದ ಸಾಬೀತಾಗಿದೆ.

ಯುಪಿಎ ಸರ್ಕಾರದ ವಿಶ್ವಾಸದ್ರೋಹಕ್ಕೆ ಕಳಸವಿಟ್ಟ ಬಜೆಟ್

ಕೇಂದ್ರ ಯುಪಿಎ ಸರ್ಕಾರವು ಮಧ್ಯಂತರ ಬಜೆಟ್‌ನ್ನು ಮಂಡಿಸಿದೆ. ದೇಶಕ್ಕೆ ಆರ್ಥಿಕ ನೀತಿಗಳಲ್ಲಿ ಪರ್ಯಾಯ ಧೋರಣೆಯ ಪಥವೊಂದನ್ನು ತುರ್ತಾಗಿ ರೂಪಿಸಬೇಕಾದರೆ ತುರ್ತು ಇದೆ ಎಂಬುದು ಇದರಿಂದಾಗಿ ಮತ್ತೊಮ್ಮೆ ಎದ್ದು ಕಾಣುತ್ತಿದೆ. ಸನ್ನಿವೇಶದ ಚಾರಿತ್ರಿಕ ಅಗತ್ಯಗಳಿಗೆ, ಜನರ ಆಶೋತ್ತರಗಳ ಕಡೆಗೆ ಬೆನ್ನು ತಿರುಗಿಸಿ ನಿಲ್ಲುವ ಇಂತಹ ರಾಜಕೀಯದ ಬದಲಿಗೆ ಪರ್ಯಾಯ ರಾಜಕೀಯವನ್ನು ರೂಪಿಸುವ ಹೊಣೆಗಾರಿಕೆಯು ಜನತೆಯ ಮೇಲಿದೆ. ಮುಂದಿನ ಸಾರ್ವತ್ರಿಕ ಚುನಾವಣೆಗಳ ಕೇಂದ್ರ ಪ್ರಶ್ನೆ ಕೂಡ ಇದೇ ಅಂಶವೇ ಆಗಿದೆ.

ಸಂದರ್ಭದ ಅಗತ್ಯ ಜನತೆಯ ಆಶೋತ್ತರ ಬೇರೆಯೇ ಇತ್ತು

ದೇಶದ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಆರ್ಥಿಕತೆ ಸಾವಕಾಶವಾಗಿ ಒಂದು ಆಳವಾದ ಪ್ರಪಾತದ ಕಡೆಗೆ ಜರುಗುತ್ತಿದೆಯೇನೋ ಅನಿಸುತ್ತಿದೆ. ಅಮೇರಿಕಾದಲ್ಲಿ ಆರಂಭವಾಗಿ ಜಗತ್ತನ್ನು ವ್ಯಾಪಿಸುತ್ತಿರುವ ಮಹಾ ಆರ್ಥಿಕ ಬಿಕ್ಕಟ್ಟಿನ ಕರಿ ನೆರಳು ಭಾರತದ ಮೇಲೂ ಗಂಭೀರ ಪರಿಣಾಮ ಬೀರುತ್ತಿದೆ. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಜನತೆಗೆ ದೇಶದ ದುಡಿಯುವ ಜನತೆ ಈ ಬಜೆಟ್ ಏನು ಕೊಟ್ಟಿದೆ ಎಂದು ಪ್ರಶ್ನಿಸಬೇಕಾದ ಅಗತ್ಯತೆ ಇದೆ. ಇಂತಹ ಗಂಭೀರ ಪ್ರಶ್ನೆಯನ್ನು ಬಜೆಟ್ ಒಂದು ಪರಿಗಣಿಸಬೇಕಾದ ಪ್ರಶ್ನೆ ಎಂದೇ ಭಾವಿಸಿಲ್ಲ ಎಂದು ಒಂದು ದುರಂತ.

ವಿಶ್ವಾಸ ದ್ರೋಹಕ್ಕೆ ಕಳಸ

ಸುಮಾರು 5 ವರ್ಷಗಳ ಹಿಂದೆ ರಚನೆಯಾದ ಯುಪಿಎ ಸರ್ಕಾರಕ್ಕೆ ಆಧಾರವಾದ ನೀತಿಗಳೇನು? ಎಡಪಕ್ಷಗಳ ಬೆಂಬಲಕ್ಕೆ ಆಧಾರವಾದದ್ದೇನು? ಅದರ ಸಮಾನ ಕನಿಷ್ಠ ಕಾರ್ಯಕ್ರಮವಲ್ಲವೇ? ಅವನ್ನು ಈಡೇರಿಸಲು ಯುಪಿಎ ಸರ್ಕಾರಕ್ಕಿದ್ದ ಕೊನೆಯ ಅವಕಾಶವಾಗಿತ್ತು ಈ ಬಜೆಟ್. ಶಿಕ್ಷಣಕ್ಕೆ ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ.6 ರಷ್ಟು ಅನುದಾನ, ಆರೋಗ್ಯಕ್ಕೆ ಶೇ.2-3ರಷ್ಟು ಅನುದಾನ, ಪಡಿತರ ವ್ಯವಸ್ಥೆಯ ಸಾರ್ವತ್ರೀಕರಣ, ಸುಪ್ರೀಂಕೋರ್ಟ್‌ನ ತೀರ್ಪಿನಂತೆ ಐಸಿಡಿಎಸ್ ಯೋಜನೆಯ (ಅಂಗನವಾಡಿ) ವಿಸ್ತರಣೆ, ಸಾರ್ವತ್ರೀಕರಣ ಮುಂತಾದ ನಿರೀಕ್ಷೆಗಳಿಗೆ ಬಜೆಟ್ ತಣ್ಣೀರೆರಚಿದೆ.

ಇನ್ನು ಕೃಷಿ ಬಿಕ್ಕಟ್ಟು ನಿವಾರಣೆ, ಬೆಲೆ ಏರಿಕೆ ನಿಯಂತ್ರಣ ಕ್ರಮಗಳು. ನಿರುದ್ಯೋಗ ನಿವಾರಣೆ ನೀತಿಗಳಲ್ಲಿ 5 ವರ್ಷಗಳ ತಾತ್ಸಾರದ ಧೋರಣೆಯೇ ಮಧ್ಯಂತರ ಬಜೆಟ್‌ನಲ್ಲಿ ಮುಂದುವರಿದಿದೆ.

ಎರಡು ಆಯ್ಕೆ

ಇದು ಮಧ್ಯಂತರ ಬಜೆಟ್ ಎಂಬ ಸಂವಿಧಾನಿಕ ಮಿತಿಗಳಿದ್ದಾಗಲೂ ಕೂಡ ಯುಪಿಎ ಸರ್ಕಾರದ ಮುಂದೆ ಎರಡು ಅವಕಾಶಗಳಿದ್ದವು. ಒಂದು ಈ ಮಧ್ಯಂತರ ಬಜೆಟ್ ಮೂಲಕ ಗಂಭೀರಗೊಳ್ಳುತ್ತಿರುವ ಆರ್ಥಿಕ ಬಿಕ್ಕಟ್ಟಿನ ದುಷ್ಪರಿಣಾಮಗಳನ್ನು ತಡೆಯಲು, ಬೃಹತ್ ಸಾರ್ವಜನಿಕ ಹೂಡಿಕೆ, ಸಾಮಾಜಿಕ ಹೂಡಿಕೆಯ ಮೂಲಕ ಯಾವ ರೀತಿ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಲಾಗುವುದು ಎಂಬುದನ್ನು ಪ್ರಕಟಿಸುವುದು. ಮತ್ತೊಂದು, ಜನತೆಯ ಸಮಸ್ಯೆಯ ಗಂಭೀರತೆಯನ್ನೇನೂ ಪ್ರತಿಫಲಿಸದ - ಯುಪಿಎ ಸರ್ಕಾರದ 5 ವರ್ಷದ 'ಸಾಧನೆಗಳ' ಕರಪತ್ರವೆಂಬಂತಹ ಮಧ್ಯಂತರ ಬಜೆಟ್ ಮಂಡಿಸುವುದು. ದುರದೃಷ್ಟವಶಾತ್ ಯುಪಿಎ ಸರ್ಕಾರವು ಎರಡನೇಯದನ್ನೇ ಆಯ್ಕೆ ಮಾಡಿಕೊಂಡಿದೆ.

ಆರ್ಥಿಕ ಬಿಕ್ಕಟ್ಟನ್ನು ಎದುರಿಸುವ ಮಾರ್ಗವೆಂದರೆ ಬೃಹತ್ ಸಾರ್ವಜನಿಕ ಹೂಡಿಕೆ ಮೂಲಕವೇ ಎಂಬುದನ್ನು ಈಗ ಜಾಗತಿಕವಾಗಿ ಗುರುತಿಸಲಾಗಿದೆ. ಇದಕ್ಕೆ ಕೊರತೆ ಬೀಳುವ ಹಣಕಾಸನ್ನು ನೋಟುಗಳ ಮುದ್ರಣದ ಮೂಲಕ ಅಥವಾ ತೆರಿಗೆ ಸಂಗ್ರಹದ ಮೂಲಕ ಹೊಂದಿಸಿಕೊಳ್ಳಬೇಕಾಗುತ್ತದೆ.

ಬಿಕ್ಕಟ್ಟಿನಲ್ಲಿರುವ ಟೆಕ್ಸ್‌ಟೈಲ್ ರಂಗಕ್ಕೆ ಏನಿಲ್ಲ!





ಕಷ್ಟಕ್ಕೆ ಸಿಲುಕುತ್ತಿರುವ ಆಟೋಮೊಬೈಲ್ ಉದ್ದಿಮೆ ಕಾರ್ಮಿಕರು

ಭೀಕರ ವಾಸ್ತವ

ಆರ್ಥಿಕ ಬಿಕ್ಕಟ್ಟಿನ ಭೀಕರ ಪರಿಣಾಮಗಳ ಕುರಿತು ಎಡಪಕ್ಷಗಳನ್ನು ಬಿಟ್ಟು ಬೇರೆ ಪಕ್ಷಗಳು ಗಂಭೀರವಾಗಿ ಮಾತನಾಡುತ್ತಿಲ್ಲ. ಮಾಧ್ಯಮಗಳಲ್ಲಿಯೂ ಈ ವಿಚಾರವಾಗಿ ಅಗತ್ಯವಾದಷ್ಟು ವರದಿಗಳಿಲ್ಲ.

ಆರ್ಥಿಕ ಬಿಕ್ಕಟ್ಟು, ಉದ್ಯೋಗ ಕಡಿತ, ಕೃಷಿ ಉತ್ಪನ್ನಗಳ ಬೆಲೆ ಕುಸಿತ, ಕಾರ್ಖಾನೆಗಳಲ್ಲಿ ಉತ್ಪಾದನೆ ಸ್ಥಗಿತ, ಕಾರ್ಮಿಕರ, ನೌಕರರ ವಜಾ, ಕಾರ್ಮಿಕರ ಆತ್ಮಹತ್ಯೆ, ವ್ಯಾಪಾರ, ವಹಿವಾಟು, ರಫ್ತು ಚಟುವಟಿಕೆಗಳಲ್ಲಿ ಕುಸಿತ. ಪರಿಸ್ಥಿತಿ ಹೇಗಿದೆಯೆಂದರೆ ಬೃಹತ್ ಹಿಮರಾಶಿಯು ಕದಲಿ ಹಿಮನದಿಯಾಗಿ ಹರಿಯುವ ಆರಂಭಿಕ ಹಂತವಿದ್ದ... ಕಾಣುತ್ತಿದೆ. ಮೇಲೆ ಹೆಚ್ಚು ಕಡಿಮೆ ಇದ್ದಂತೆ... ಕಾಣುತ್ತಿದೆ. ಆದರೆ ತಳದಲ್ಲಿ ಹರಿವು, ಕರಗು... ಇದೆ. ಬೃಹತ್ ಹಿಮಬಂಡೆ, ಹಿಮ ಚ... ನಿಧಾನವಾಗಿ ಚಲಿಸುತ್ತಿವೆ. ಅದರ ಹರಿವು ... ಪಡೆದರೆ, ಯಾವ ಯಾವ ಭೂ ಭಾಗವನ್ನು ಕ... ಹಾಕುತ್ತದೋ? ಏನೇನು ಅನಾಹುತವಾಗುವು... ಏನೋ ಎಂಬ ಆತಂಕದ ಪರಿಸ್ಥಿತಿ ಇದೆ.

ಸರ್ಕಾರದ ಚುಕ್ಕಾಣಿ ಹಿಡಿದವರು ದೇಶದ ಬ... ರಾಷ್ಟ್ರೀಯ ಉತ್ಪನ್ನದಲ್ಲಿ ಹೆಚ್ಚಳವಾಗಿದೆ ಎಂ... ಬೀಗುತ್ತಿದ್ದಾರೆ. ಈ ಬೆಳವಣಿಗೆಯಲ್ಲಿ ಜ... ಅಭಿವೃದ್ಧಿಯ ಪಾಲೆಷ್ಟು ಬಂಡವಾಳಗಾರ... ಕೋಟ್ಯಾಧಿಪತಿಗಳ ಸಂಪತ್ತಿನ ಹೆಚ್ಚಳ ಪಾಲ... ಎಂದು ಅವರು ಬಿಡಿಸಿ ಹೇಳಲು ತಯಾರಿಲ್ಲ. ... ಭಾರತದಲ್ಲಿ ಕೋಟ್ಯಾಧಿಪತಿಗಳ ಸಂಖ್ಯೆಯ... ಹೆಚ್ಚುತ್ತಿದೆ. ಅವರ ಸಂಪತ್ತೂ ಹೆಚ್ಚುತ್ತಿದೆ. ಜಗ... 10 ಅತಿ ಶ್ರೀಮಂತರ ಪಟ್ಟಿಯಲ್ಲಿ ನಾಲ್ಕ... ಭಾರತೀಯರಿಗೆ ಜಾಗ ಸಿಕ್ಕಿದೆ ಎಂದು ಭಾರ... ಕಾರ್ಮಿಕರು, ಬಡವರು ಸಂಭ್ರಮಪಡುವುದ... ಏನಾದರೂ ಅರ್ಥವಿರುತ್ತದೆಯೇ? ದುಡಿ... ಜನರು, ಕಾರ್ಮಿಕರು ಮನೆ ಬಾಡಿಗೆ ಕಟ್ಟಿ, ಮಕ್ಕ... ಶಾಲೆಗೆ ಕಳಿಸಿ, ಹೊಟ್ಟೆ ತುಂಬಾ ಉ... ನೆಮ್ಮದಿಯಾಗಿ ರಾತ್ರಿ ಮಲಗುವುದು ಸಾಧ್ಯವಾ... ಅಭಿವೃದ್ಧಿ ಎಂಬುದಕ್ಕೆ ಅರ್ಥವಿರುತ್ತದೆ. ಹಾಗಿ... ಮೇಲೆ ಇದು, ಯಾರ ಅಭಿವೃದ್ಧಿ, ಎಂತಹ ಅಭಿ... ಎಂಬ ಪ್ರಶ್ನೆಗಳೇಳುತ್ತವೆ.

ಗಂಭೀರ ಪ್ರಮಾದ

ಬಜೆಟ್‌ನಲ್ಲಿ ಯೋಜನಾ ವೆಚ್ಚವನ್ನು 2.85 ... ಕೋಟಿಗೆ ನಿಗದಿಪಡಿಸಲಾಗಿದೆ. ಇದು ನ... ಜಿಡಿಪಿಯ ಶೇ.5 ರಷ್ಟೂ ಆಗುವುದಿಲ್ಲ. ಜಗ... ಇತರ ಹಲವು ದೇಶಗಳಿಗೆ ಹೋಲಿಸಿದರೆ ... ಅತಿ ನಿಕೃಷ್ಟ. ಚೀನಾ ದೇಶ ತನ್ನ ಜಿಡಿಪಿ ಶೇ.... ನಿಗದಿಪಡಿಸಿದೆ. ಅದೂ ಸತತ ಎರಡು ವರ್ಷ... ಅವಧಿಗೆ. ಕಳೆದ ವರ್ಷದಲ್ಲಿ ಯು... ಸರ್ಕಾರವು ಯೋಜನಾ ವೆ... ಕೇವಲ 40 ಸಾವಿರ ಕೋಟಿ ರೂ.ಗ... ಮಾತ್ರ ಹೆಚ್ಚುವರಿಯಾಗಿ ... ಮಾಡಿದೆ. ಇದು ಜಿಡಿಪಿಯ ಕೇ... ಶೇ.1 ರಷ್ಟು ಮಾತ್ರ. ವಾಸ್ತವ... ಯೋಜನಾ ವೆಚ್ಚ ಹೂಡಿಕೆ... 2009-10ರಲ್ಲಿ ಹಿಂದಿನ ವರ್ಷಕ್ಕಿ... 4500 ಕೋಟಿ ರೂ.ಗಳ... ಕಡಿಮೆಯಾಗಲಿದೆ. ಈ ರಿ... ಯೋಜನಾ ವೆಚ್ಚವನ್ನು ಕ... ಮಾಡುವುದು ಹಾಗೂ ಮೂಲಭ... ಕ್ಷೇತ್ರಗಳ ಹೂಡಿಕೆ ಹೆಚ್ಚಿಸ... ಖಾಸಗಿ-ಸರ್ಕಾರಿ-ಪಾಲುದಾರಿಕೆ(ಪಿಪಿಪಿ)ಯ ಮ... ಅವಲಂಬಿಸುವುದು ಈ ಆರ್ಥಿಕ ಬಿಕ್ಕ... ಸನ್ನಿವೇಶದಲ್ಲಂತೂ ಗಂಭೀರವಾದ ಪ್ರಮಾದವಾಗಿ... ಇದರ ಹೊರೆ 'ಬಳಕೆ ವೆಚ್ಚ'ದ ಹೆಸರಿ... ಜನಸಾಮಾನ್ಯರ ಹೆಗಲಿಗೇ ವರ್ಗಾವಣೆಯಾಗುತ್ತ... ಇಂತಹ ಹೊರೆ ಜನರ ಕೊಂಡುಕೊಳ್ಳುವ ಶಕ್ತಿಯ... ಮತ್ತಷ್ಟು ಕುಗ್ಗಿಸುತ್ತದೆ. ಭಾರತದ್ದು ಜಗತ್ತಿನ ಎರ... ಅತಿವೇಗದ ಬೆಳವಣಿಗೆಯುಳ್ಳ ಆರ್ಥಿ... ಎನ್ನಲಾಗುತ್ತಿದೆ. ಆದರೆ ಕಳೆದ 2008-09ರ ವರ್ಷ... ತೆರಿಗೆ ಸಂಗ್ರಹದಲ್ಲಿ 60,000 ಕೋಟಿಗಳ ಕೊ...

ದ್ದಿರುವುದು ಸ್ಪಷ್ಟವಾಗಿ ಆರ್ಥಿಕತೆಯ ನಿಧಾನಗತಿಯ ಬೆಳವಣಿಗೆಗೆ ಸಾಕ್ಷಿಯಾಗಿದೆ. ಹಣಕಾಸು ಸಚಿವರು ಈ ತೆರಿಗೆ ಸಂಗ್ರಹದ ಕೊರತೆಯು ಹಣಕಾಸು ಬಿಕ್ಕಟ್ಟಿನ ಪರಿಹಾರಕ್ಕಾಗಿನ ಪ್ರೇರಕ ಕ್ರಮಗಳಿಂದಾಗಿ ಆಗಿದೆ ...ಳುತ್ತಾರೆ. ಆದರೆ ಈ ಕೊರತೆಯು ಮುಂದಿನ ಸರ್ಕಾರದ ಸಾರ್ವಜನಿಕ ...ಚ್ಚದ ಮೇಲೆ ಗಂಭೀರವಾದ ಪರಿಣಾಮ ಬೀರಲಿದೆ. ಮಧ್ಯಂತರ ...ಜೆಟ್‌ನಲ್ಲಿ ಪ್ರಸಕ್ತ 2008-09ರ ವರ್ಷದ ಗ್ರಾಮೀಣ ಅಭಿವೃದ್ಧಿ, ...ದರಲ್ಲಿಯೂ, ನಿರ್ದಿಷ್ಟವಾಗಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ನಗರಾಭಿವೃದ್ಧಿ ಹಾಗೂ ಪಡಿತರ ಸಹಾಯಧನಕ್ಕೆ ಪರಿಷ್ಕೃತ ಅಂದಾಜಿನಂತೆ, ವೆಚ್ಚ ಕಡಿತ ಮಾಡಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ...ಷಿ, ಹಾಗೂ ಸಾಮಾಜಿಕ ಸೇವೆಗಳ ವಿಭಾಗಗಳಲ್ಲಿ ಕೂಡ 2008-09 ... ಬಜೆಟ್‌ನಲ್ಲಿ ನಿಗದಿಪಡಿಸಲಾದ ಯೋಜನಾ ವೆಚ್ಚವನ್ನು ...ಡುವಲ್ಲಿಯೂ ಸಕಾರ ವಿಫಲವಾಗಿದೆ. ಈ ಕುರಿತ ಪರಿಷ್ಕೃತ ಅಂದಾಜು ಅದಕ್ಕೆ ಸಾಕ್ಷಿ ಒದಗಿಸುತ್ತದೆ.

2008-09ರಲ್ಲಿ ಕೃಷಿಗೆ ಮೊದಲಿಗೆ ಪ್ರಕಟಿಸಲಾದ ಯೋಜನಾ ವೆಚ್ಚವ ...660 ಕೋಟಿ ಇತ್ತು. ಪರಿಷ್ಕೃತ ಅಂದಾಜಿನ ನಂತರ ಅದು 9568 ಕೋಟಿ ರೂ.ಗೆ ಇಳಿಯಿತು. ವಾಸ್ತವವಾಗಿ ಅದು ಇನ್ನೂ ಹೆಚ್ಚಳವಾಗಬೇಕಾದ ಆಗತ್ಯ ಮತ್ತು ನಿರೀಕ್ಷೆ ಎರಡೂ ಇತ್ತು. ಹಾಗಾಲಿಲ್ಲ.

ಅದೇ ರೀತಿ ಗ್ರಾಮೀಣಾಭಿವೃದ್ಧಿಗೆ 75,154 ಕೋಟಿ ಯೋಜನಾ ...ಕ್ಕೆ ನಿಗದಿ (ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸೇರಿ) ಇದ್ದದ್ದು, ...ಷ್ಕೃತ ಅಂದಾಜಿನ ನಂತರ 66,070 ಕೋಟಿಗಳಿಗೆ ಇಳಿಯಿತು. ಅಂದರೆ 9,084 ಕೋಟಿ ರೂ.ಗಳ ಹಣ ಕಡಿತವಾಯಿತು. ಕಳೆದ ...ಜೆಟ್‌ನಲ್ಲಿ ನಿಗದಿಯಾದ ಹಣವನ್ನು ಪೂರ್ತಿ ಬಳಸಲಿಲ್ಲ ಎಂಬುದು ಮಾತ್ರವಲ್ಲ, ಮುಂದಿನ ವರ್ಷಕ್ಕೆ ಗ್ರಾಮೀಣ ಉದ್ಯೋಗಕ್ಕೆ ಈ ...ಖರ್ಚಾಗಿರುವುದರ ಮೊತ್ತಕ್ಕಿಂತಲೂ 6650 ಕೋಟಿ ಕಡಿತವಾಗಿದೆ. ಗ್ರಾಮೀಣಾಭಿವೃದ್ಧಿಗೆ 5176.69 ಕೋಟಿ, ನಗರಾಭಿವೃದ್ಧಿಗೆ ಜೆಎನ್‌ಎನ್‌ಯುಆರ್‌ಎಂ ಯೋಜನೆ ಹೊರತುಪಡಿಸಿ 1734.95 ಕೋಟಿ ರೂ. ಕಡಿತವಾಗಿದೆ.

ಕೃಷಿಕರ ಸಂಕಷ್ಟಗಳು

ಆರ್ಥಿಕ ಬಿಕ್ಕಟಿನ ಪರಿಣಾಮವಾಗಿ ಹತ್ತಿ, ಕಾಫಿ, ರಬ್ಬರ್,

ಪುಟ 15ಕ್ಕೆ

ಆಹಾರ ಭದ್ರತೆ ಯಾಕಾಗಿ? ಯಾರಿಗಾಗಿ?

ದೇಶದ ಆಹಾರ ಭದ್ರತೆ ಹಾಗೂ ಅಪಾರ ಆಹಾರ ಸಂಗ್ರಹದ ಬಗೆಗೆ ಹಣಕಾಸು ಮಂತ್ರಿಗಳು ಮಾತನಾಡುತ್ತಿದ್ದಾರೆ. ಆದರೆ ಅದೇ ಸಮಯದಲ್ಲಿ ರಾಜ್ಯಗಳಿಗೆ ಬಡತನ ರೇಖೆಯ ಮೇಲಿನ ಜನರಿಗೆ ನೀಡಲಾಗುವ ಆಹಾರ ಧಾನ್ಯಗಳಲ್ಲಿ ಶೇ.73 ಭಾಗವನ್ನು ಕಡಿತ ಮಾಡಲಾಗಿದೆ. ಆಹಾರ ಉತ್ಪಾದನೆಯಲ್ಲಿ ಹೆಚ್ಚಳವಾಗಿದ್ದರೂ ಕೈಗೆಟುಕುವ ದರದಲ್ಲಿ ಪಡಿತರವಾಗಿ ಜನರಿಗೆ ತಲುಪಿದರೆ ತಾನೇ ಸಮಸ್ಯೆಗೆ ಪರಿಹಾರ ದೊರೆಯುವುದು? ಅದಾಗುತ್ತಿಲ್ಲ.


ಸರ್ಕಾರ ಅನಗತ್ಯವಾಗಿ ಆಹಾರಧಾನ್ಯವನ್ನು ಗೋದಾಮುಗಳಲ್ಲಿ ಕೂಡಿಟ್ಟುಕೊಂಡು ಅಪಾರ ಪ್ರಮಾಣದ ಹಣವನ್ನು ಗೋದಾಮುಗಳ ನಿರ್ವಹಣೆಗೆ ಖರ್ಚು ಮಾಡುತ್ತಿದೆ.

ಗಂಭೀರ ಆರ್ಥಿಕ ಬಿಕ್ಕಟ್ಟಿನ ಸನ್ನಿವೇಶವೊಂದರಲ್ಲಿ ಸರ್ಕಾರ ಕೃಷಿ, ಗ್ರಾಮೀಣಾಭಿವೃದ್ಧಿ, ಸಾಮಾಜಿಕ ಸೇವೆಗಳು, ಮೂಲಭೂತ ಸೌಕರ್ಯಗಳ ನಿರ್ಮಾಣ ಮುಂತಾದ ರಂಗಗಳಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸುವ ಮೂಲಕ ಹಾಗೂ ಬೆಲೆ ಕುಸಿತದಿಂದ ಕಂಗಾಲದ ರೈತರು, ಉದ್ಯೋಗವಿಲ್ಲದೆ ಕಂಗೆಟ್ಟ ಕೂಲಿಕಾರರು, ಕಾರ್ಖಾನೆಗಳಿಂದ, ಕೆಲಸಗಳಿಂದ ತೆಗೆಯಲ್ಪಟ್ಟ ಕಾರ್ಮಿಕರು, ಉತ್ಪಾದನೆ ಸ್ಥಗಿತತೆಯಿಂದ ತೊಂದರೆಗೊಳಗಾಗಿರುವ ಕಾರ್ಮಿಕರಿಗೆ ಪರಿಹಾರ ಒದಗಿಸುವಲ್ಲಿ ದಯನೀಯವಾಗಿ ವಿಫಲವಾಗಿದೆ.

ಬಜೆಟ್ ಭಾಷಣ ಸಂಕಷ್ಟಗಳ ಕುರಿತು ಕುರುಡುತನ ತೋರುತ್ತಾ ಸರ್ಕಾರ 'ಸಂತೃಪ್ತ' ವಾಗಿದೆ ಎಂಬುದನ್ನು ಸಾರಿ ಹೇಳುತ್ತಿದೆ. ದೇಶದ ಆರ್ಥಿಕ ಬೆಳವಣಿಗೆಯ ದರದ ಕುರಿತ ವಾಸ್ತವ ಚಿತ್ರ ದೊರಕಿದ ನಂತರ ಅದು ಸರ್ಕಾರ ಕೊಚ್ಚಿಕೊಳ್ಳುವಂತೆ ಶೇ.7.1 ಅಲ್ಲ, ಅದಕ್ಕಿಂತ ಕಮ್ಮಿ ಎಂಬುದು ಸ್ಪಷ್ಟವಾಗಲಿದೆ. ○

ರೈಲ್ವೆ ಬಜೆಟ್ 2009-10


ಇಷ್ಟು ಸಾಕಾ? ಜನರ ಪ್ರಶ್ನೆ



ಪ್ರಯಾಣದರವನ್ನು ಇಳಿಸಿದ ಲಾಲೂ ಪ್ರಸಾದ್ ಯಾದವರ 6ನೇ ರೈಲ್ವೆ ಬಜೆಟ್ ಸ್ವಾಗತಾರ್ಹವಾದರೂ ಕರ್ನಾಟಕದ ಜನತೆಯ ನಿರೀಕ್ಷೆಯನ್ನು ಹುಸಿಗೊಳಿಸಿದೆ. ಅಧಿಕಾರರೂಢ ಕಾಂಗ್ರೆಸ್ಸಿನ ಎಂ.ಪಿ.ಗಳಾಗಲೀ ಪ್ರಮುಖ ವಿರೋಧಪಕ್ಷವಾಗಿರುವ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿಯ ಎಂ.ಪಿ.ಗಳಾಗಲೀ ಏನು ಮಾಡಿದರೆಂದು ಜನತೆ ಪ್ರಶ್ನಿಸಬೇಕಾಗಿದೆ.

ರೈಲು ಭಾರತದ ಆರ್ಥಿಕತೆಯ ಜೀವನಾಡಿ. ಸುಮಾರು 63,000 ಕಿ.ಮೀ.ಗಳಷ್ಟು ರೈಲ್ವೆ ಲೈನುಗಳನ್ನು ಹೊಂದಿರುವ ಭಾರತೀಯ ರೈಲ್ವೆ ಇತ್ತೀಚಿನ ದಿನಗಳಲ್ಲಿ ಪ್ರಯಾಣಿಕರಿಗೆ ಹತ್ತಿರವಾಗುತ್ತಿದೆ. ಇದಕ್ಕೆ ಇನ್ನೊಂದು ಕಾರಣ ವಿಪರೀತವಾಗಿ ಹೆಚ್ಚುತ್ತಿರುವ ಬಸ್ ದರ. ಆ ಲೆಕ್ಕದಲ್ಲಿ ರೈಲು ಪ್ರಯಾಣ ಬಡ, ಮಧ್ಯಮವರ್ಗದವರಿಗೆ ಹೆಚ್ಚು ಆಪ್ತವಾದುದು.

ಆದ್ದರಿಂದ ಕಳೆದ ಐದು ವರ್ಷಗಳಲ್ಲಿ ರೈಲು ಪ್ರಯಾಣ ದರ ಹೆಚ್ಚಿಸದೆ ಇರುವುದು ನಿಜಕ್ಕೂ ಸ್ವಾಗತಾರ್ಹ. ಡೀಸೆಲ್ ಬೆಲೆ ಅತ್ಯಂತ ಹೆಚ್ಚಾದಗಲೂ ರೈಲು ಪ್ರಯಾಣದರ ಹೆಚ್ಚಾಗಿರಲಿಲ್ಲ. ಆ ನಿಟ್ಟಿನಲ್ಲಿ ನೋಡಿದರೆ ಡೀಸೆಲ್ ದರ ಕಡಿಮೆಯಾಗಿರುವ ಸಂದರ್ಭದಲ್ಲಿ ರೈಲು ಪ್ರಯಾಣದರ ಇನ್ನಷ್ಟು ಕಡಿಮೆ ಮಾಡಬೇಕಾಗಿತ್ತು.



ಭುವನೇಶ್ವರದ ರೈಲ್ವೆ ಅಪಘಾತ

ಚುನಾವಣೆ ಹಿನ್ನೆಲೆಯಲ್ಲಿ ಪೂರ್ಣ ಪ್ರಮಾಣದ ಬಜೆಟ್‌ನ್ನು ಮಂಡಿಸದಿದ್ದರೂ, 43 ಹೊಸ ರೈಲುಗಳನ್ನು ಘೋಷಿಸಲಾಗಿದೆ. 14 ರೈಲುಗಳ ಮಾರ್ಗ ವಿಸ್ತರಣೆ ಮಾಡಲಾಗಿದೆ. ಆದರೂ ಆಧುನೀಕರಣ ಮಾಡದೆ ಇರುವುದು ಮತ್ತು ಹೊಸ ಹಳಿಗಳನ್ನು ಹಾಕದೆ ಇರುವುದು ಸರಿಯಲ್ಲ, ಅಪಘಾತಗಳ ಸಂಖ್ಯೆ ಕಡಿಮೆಯಾಗಿದೆ ಎಂದು ರೈಲ್ವೆ ಮಂತ್ರಿಗಳು ಬಜೆಟ್ ದಿನ ಹೆಮ್ಮೆಪಟ್ಟುಕೊಳ್ಳುವಾಗಲೇ ಅದೇ ದಿನ ಭುವನೇಶ್ವರದಲ್ಲಿ ಅಪಘಾತದಲ್ಲಿ 15 ಜನ ಸತ್ತಿರುವುದು ವಿಪರ್ಯಾಸ. ಆದುದರಿಂದ ರೈಲ್ವೆ ಆಧುನೀಕರಣಕ್ಕೆ ಒತ್ತು ಕೊಡಬೇಕಾಗಿತ್ತು. ಪೂರ್ಣ ಪ್ರಮಾಣದ ಬಜೆಟ್ ಮಂಡನೆಯಾಗುವಾಗಲಾದರೂ ಇದು ಆಗಬೇಕಾಗಿದೆ.

ನಿರ್ಲಕ್ಷಿತ ಕರ್ನಾಟಕ:

ರೈಲ್ವೆ ಮಾರ್ಗಗಳ ವಿಚಾರದಲ್ಲಿ ಕರ್ನಾಟಕ ಇನ್ನೊಮ್ಮೆ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಕೇವಲ 3843 ಕಿ.ಮೀ.ಉದ್ದದ ರೈಲ್ವೆ ಮಾರ್ಗಗಳನ್ನು ಹೊಂದಿರುವ ಕರ್ನಾಟಕ, ದಕ್ಷಿಣ ಭಾರತದಲ್ಲಿ ಅತ್ಯಂತ ಕಡಿಮೆ ರೈಲ್ವೆ ಮಾರ್ಗವನ್ನು ಹೊಂದಿರುವ ರಾಜ್ಯ. (ಕೇರಳ ರಾಜ್ಯವು ಕರ್ನಾಟಕಕ್ಕಿಂತ ಅತಿ ಚಿಕ್ಕ ರಾಜ್ಯವಾಗಿರುವುದರಿಂದ ರೈಲ್ವೆ ಮಾರ್ಗವೂ ಕಡಿಮೆ ಇದೆ)

ಈ ಬಾರಿ ಬಜೆಟ್‌ನಲ್ಲಿ ಕೇವಲ 3 ಹೊಸ ರೈಲ್ವೆಗಳನ್ನು ನೀಡಲಾಗಿದೆ. 1. ಮುಂಬೈ- ಕಾರವಾರ, 2. ಡೆಲ್ಲಿ- ಬೆಂಗಳೂರು (ಕಾಚಿಗುಡ - ಹೈದರಾಬಾದ್ ಮೂಲಕ) ಮತ್ತು ಮೈಸೂರು-ಯಶವಂತಪುರ, ಇದರಲ್ಲಿ ಮೊದಲೆರಡು ರೈಲುಗಳು ವಾರಕ್ಕೆ 3 ದಿನ ಮಾತ್ರ. ಅದೂ ಅಲ್ಲದೆ ಬೆಂಗಳೂರು-ಡೆಲ್ಲಿ ರಾಜಧಾನಿ ಎಕ್ಸ್‌ಪ್ರೆಸ್‌ನಲ್ಲಿ ಸಾಮಾನ್ಯ ಬೋಗಿಗಳಾಗಲಿ , ಎರಡನೇ ದರ್ಜೆ ಸ್ಲೀಪರ್‌ಗಳಾಗಲಿ ಇರುವುದಿಲ್ಲ. ಇದರಿಂದ ಎಲ್ಲಾ ವರ್ಗದ ಜನರಿಗೆ ಲಾಭವಾಗುವುದಿಲ್ಲ.

ಇನ್ನೊಂದು ಚೆನ್ನೈ-ಬೆಂಗಳೂರು- ಎರ್ನಾಕುಲಂ ಗೆ 'ಬುಲೆಟ್ ರೈಲು' ಜೋಡಿಸುವುದಾಗಿ ಘೋಷಣೆ ಮಾಡಿದ್ದಾರೆ. ಬುಲೆಟ್ ರೈಲು ಎಂದರೆ ವೇಗವಾಗಿ ಚಲಿಸುವ ರೈಲು. ಇದಕ್ಕೆ ಪ್ರತ್ಯೇಕ ಹಳಿ ಬೇಕಾಗುತ್ತದೆ. ಎಲ್ಲಿಯೂ ಲೆವೆಲ್ ಕ್ರಾಸಿಂಗ್ ಇರಬಾರದು. ಅಂದರೆ ಪೂರ್ತಿಯಾಗಿ ಬೇರೆಯೇ ಮಾರ್ಗವನ್ನು ರಚಿಸಬೇಕಾಗುತ್ತದೆ. ಆಮೇಗತಿಯಲ್ಲಿ ಸಾಗುವ ನಮ್ಮ ರೈಲ್ವೆ ಕಾಮಗಾರಿಗಳಲ್ಲಿ ಬಹುಬೇಗನೇ ಇದನ್ನು ಜಾರಿ ಮಾಡಲು ಸಾಧ್ಯವಾಗುವುದಿಲ್ಲ.

ನೆನೆಗುದಿಗೆ ಬಿದ್ದ ಯೋಜನೆಗಳು

ಬೆಂಗಳೂರು-ಮೈಸೂರು ಜೋಡಿ ಮಾರ್ಗ ಹಲವು ವರ್ಷಗಳಿಂದ ನೆನಗುದಿಗೆ ಬಿದ್ದರುವ ಯೋಜನೆ. ಮೈಸೂರು-ಯಶವಂತಪುರ ಹೊಸ ರೈಲು ಜಾರಿಗೆ ಬಂದರೂ ಜೋಡಿ ಮಾರ್ಗವಾಗದೆ ಹೋದಲ್ಲಿ ವೇಗವಾಗಿ ಸಂಚರಿಸಲು ಸಾಧ್ಯವಾಗುವುದಿಲ್ಲ. ಅಲ್ಲಲ್ಲಿ ನಿಲ್ಲಬೇಕಾಗುತ್ತದೆ. ಹಾಗೆಯೇ ಬೆಂಗಳೂರು-ಚಿಕ್ಕಬಳ್ಳಾಪುರ ಬ್ರಾಡ್‌ಗೇಜ್, ಬೆಂಗಳೂರು-ಶಿವಮೊಗ್ಗ ಇಂಟರ್‌ಸಿಟಿ, ಬಿಜಾಪುರ, ಗುಲ್ಬರ್ಗಾ, ರಾಯಚೂರು ಹಾದು ಬೆಂಗಳೂರಿಗೆ ಬರುವ ಸಾಮಾನ್ಯ ಬೋಗಿ ಹೊಂದಿರುವ ಕೂಲಿಕಾರರ ಎಕ್ಸ್‌ಪ್ರೆಸ್ ನೆನೆಗುದಿಗೆ ಬಿದ್ದಿವೆ.

ಹಾಸನ ಮಾರ್ಗವಾಗಿ ಮಂಗಳೂರು-ಬೆಂಗಳೂರು ಚಲಿಸಬೇಕಾದ ಹಗಲು ಹೊತ್ತಿನ ರೈಲು ಘೋಷಣೆಯಾಗಿ, ವೇಳಾಪಟ್ಟಿಯಲ್ಲಿ ಬಂದು 4 ವರ್ಷ ಕಳೆದರೂ ಇನ್ನೂ ಜಾರಿಯಾಗಿಲ್ಲ. ಗದಗ-ಬಾಗಲಕೋಟೆ ಬ್ರಾಡ್‌ಗೇಜ್ ಕೆಲಸ ಪೂರ್ಣಗೊಂಡಿರುವುದರಿಂದ ಗದಗ ಮಾರ್ಗವಾಗಿ ಬೆಂಗಳೂರಿನಿಂದ ಬಿಜಾಪುರಕ್ಕೆ ರೈಲು ಹೊಸದಾಗಿ ಚಲಿಸಬೇಕಿದೆ.

ಬಜೆಟ್ ಪ್ರಕಟವಾದ ನಂತರ 'ರಾಜ್ಯಕ್ಕೆ ಅನ್ಯಾಯವಾಗಿದೆ' ಎಂದು ಚುನಾವಣಾ ಭಾಷಣ ಮಾಡುವ ಮುಖ್ಯಮಂತ್ರಿಗಳು ಬಜೆಟ್‌ಗಿಂತ ಮೊದಲು ಕೇಂದ್ರ ಸರ್ಕಾರಕ್ಕೆ ತಮ್ಮ ಪಕ್ಷದ ಮತ್ತು ರಾಜ್ಯದ ಎಂ.ಪಿ.ಗಳನ್ನು ಸೇರಿಸಿ ಅಗತ್ಯಗಳನ್ನು ಮನವರಿಕೆ ಮಾಡಲು ವಿಫಲರಾಗಿರುತ್ತಾರೆ. ಮಿಗಿಲಾಗಿ ಬಿಜೆಪಿ ನೇತೃತ್ವದ ಸರ್ಕಾರ ಕೇಂದ್ರದಲ್ಲಿ ಇರುವಾಗ ಆರು ವರ್ಷಗಳಲ್ಲಿ ಏನು ಸಾಧನೆ ಮಾಡಿದರು ಎಂಬುದನ್ನು ಗಮನಿಸಬೇಕಾಗಿದೆ.

● ಬಾಲಕೃಷ್ಣಶೆಟ್ಟಿ



ನೀಲಾ ಕೆ.



ಗಂಡಸರಿದ್ದಾಗ ಇವಳ ತಲೆ ಸೆರಗು ಇರಲೇಬೇಕು. ಕೆಲಸದ ಧಾವಂತದಲ್ಲಿ ಹೆಗಲಿಗೆ ಜಾರಿದರೆ ಸಾಕು. ಅಲ್ಲಿಗೆ ಹಿರಿಯರು ಮತ್ತು ಪುರುಷರು ಕೆಂಡಾಮಂಡಲ. "ಸೆರಗು ತಲಿ ಮ್ಯಾಗ್ಯಲ ಹಾಕಿ ಮಳಿ ಜಡಿರಿ. ಅಂದ್ರ ಬುದ್ದಿ ಬರ್ತದ. ಮರ್ಯಾದಿ ಅಂದ್ರ ಗೊತ್ತಾಗ್ತದ.." ಎಂದು ಮಾಳಿಗೆ ಹಾರಿ ಹೋಗುವಂತೆ ಬೈದಾಡಿದರಂತೆ.

'ವಸ್ತ್ರಸಂಹಿತೆ' ಸುತ್ತಮುತ್ತ

ಕನ್ನಡ ಗಜಲ್ ಗಾಯನಗೋಷ್ಠಿಯ ದಿನವದು. ಹಾಲ್ಡಿಂಗಳ ಅಂಗಳದಲ್ಲಿ ಉರ್ದು ಕನ್ನಡ ಗಜಲ್ ಪ್ರಿಯರ ಕಲರವ. ಅದೊಂದು ಪರಿಶುದ್ಧ ಪ್ರೇಮದ ಪರಿಸರವಾಗಿ ಮಾರ್ಪಟ್ಟಿತ್ತು. "ಗಜಲ್ ಮೆಹೆಫಿಲ್‌ನಲ್ಲಿ ಇಷ್ಕ್, ಮೊಹಬ್ಬತ್ ಶಮಾದೊಂದಿಗೆ ಶರಾಬ್‌ನೂ ಬೇಕರ್‍ರೀ" ಎಂದು ತುಂಬಾ ಉಲ್ಲಾಸದಲ್ಲಿ ಗೆಳೆಯರೊಬ್ಬರು, ಕೇಳಿದಕ್ಕೆ."ಶರಾಬ್ ಬದಲಿಗೆ ಗೋಧಿ ಹುಗ್ಗಿ ತುಪ್ಪ, ಮ್ಯಾಲೆಂದು ಮಿರ್ಚಿ ಭಜಿ. ಇಷ್ಟ ಸಾಕಲ್ಲ ನಶಾ ಆಗಲಾಗ..?" ಎಂದಾಗ ಎಲ್ಲರೂ ನಕ್ಕರು ಎದೆ ತುಂಬಿ. ಮಸ್ತ್ ಮೆಹಿಫಿಲ್ ಗುಂಗಿನಲ್ಲಿರುವ ನಮಗೊಂದು ಅಸಮಾಧಾನದ ಸುದ್ದಿ ಕೇಳಿ ಚಿಂತಿತರಾದೆವು. ಗುಲ್ಬರ್ಗಾ ಜಿಲ್ಲಾಧಿಕಾರಿಯು ಭಯೋತ್ಪಾದನಾ ವಿರೋಧಿ ಆಂದೋಲನದ ಕಾರ್ಯಕ್ರಮಕ್ಕೆ ಬರುವ ಮುಸ್ಲಿಂ ವಿದ್ಯಾರ್ಥಿನಿಯರು ಬುರ್ಖಾ ಧರಿಸಬಾರದು. ಯಾಕೆಂದರೆ ಬೂರ್ಖಾದೊಳಗೆ ಭಯೋತ್ಪಾದಕರು, ಉಗ್ರವಾದಿಗಳು ಇರಬಹುದು. ಯಾರೆಂದು ಗುರುತಿಸಲಿಕ್ಕಾಗಿ ಬೂರ್ಖಾ ಹಾಕದೆ ಬರಬೇಕೆಂದು ಫರಮಾನು ಹೊರಡಿಸಿರುವರಂತೆ. "ಖಾತ್ರಿ ಮಾಡ್ಕೊಂಡು ಹೇಳ್ರಿ. ಬೂರ್ಖಾ ಹಾಕ್ಕೋಬೇಕಾ-ಬಾರದ ಅಂತ ಹೇಳಲಿಕ್ಕೆ ಅವರಿಗೇನು ಹಕ್ಕು...? ಕೇಳಾಣು.." ಎಂದು ನೆರೆದವರು ತಮ್ಮ ಅಭಿಪ್ರಾಯ ವ್ಯಕ್ತಿಸಿದರು. ಅಲ್ಲೇ ಇರುವ ಡಿಗ್ರಿ ಕಾಲೇಜಿನ ವಿದ್ಯಾರ್ಥಿನಿ ಯೊಬ್ಬಳು "ನಮಗ ಸಾಕಾಗ್ಯಾದರೀ. ಮೊದಲೇ ಸೀರಿ ಉಟ್ಕೋಲಾಕ ಬರಾದಿಲ್ಲ. ಕಾಲೇಜಿನ ಆಡಳಿತ ಮಂಡಳಿಯೋರು ಕಡ್ಡಾಯವಾಗಿ ಸೀರಿ ಹಾಕ್ಕೊಬೇಕು ಅಂತ ಆದೇಶ ಮಾಡ್ಯಾರ... ಸೀರಿ ಉಟ್ಕೊಂಡು ಭರಾ ಭರಾ ನಡಿಲಿಕ್ಕೂ ಆಗಾದಿಲ್ಲ.. ಸೀರಿ ಕಂಡ ಹಿಡದವ್ರಿಗೆ ಹಿಡದು ಕೊಟ್ರ ಚಲೋತ್ನಾಗ ವಿಚಾರಿಸ್ತೀವಿ.." ಎಂದು ಆಕ್ರೋಶ ವ್ಯಕ್ತಪಡಿಸಿದಳು.

ತುಂಬ ವರ್ಷಗಳ ಹಿಂದೆ ಮುಸ್ಲಿಂ ಲೇಖಕಿಯೊಬ್ಬರು ಲಂಕೇಶ ಪತ್ರಿಕೆಯಲ್ಲಿ 'ಎ ಪರ್ದಾ ಹಟಾದೋ...' ಎಂದು ಲೇಖನ ಬರೆದುದಕ್ಕೆ ಮುಸ್ಲಿಂ ಮೂಲಭೂತವಾದಿಗಳು ತೀವ್ರ ವಿರೋಧ ವ್ಯಕ್ತಪಡಿಸಿದರು. ಪ್ರಗತಿಪರ 'ದಿಕ್ಕಿನತ್ತ ಕಾರ್ಯೋನುಮುಖರಾದ ಮುಸ್ಲಿಂ ಲೇಖಕಿಯರ ವಿರುದ್ಧ ಬಹಿರಂಗ ಧಾಳಿಗಳೂ ನಡೆದ ನೆನಪಿದೆ ನನಗೆ.

ಐದು ವಯಸ್ಸಿಗೆ ಕಿರುಗಣಿ

ನನ್ನ ಅವ್ವ ತನ್ನ ಅನುಭವವನ್ನು ಕೌದಿ ಹೊಲಿಯುವಾಗ ನನಗೆ ಹೇಳುತ್ತಿದ್ದಳು. ಕೌದಿಗೆ ಬೇಕಾದ ಚೆಚೌಕು ಬಟ್ಟೆ ತುಂಡುಗಳನ್ನು ಜೋಡಿಸುವ ನಾನು ಅವಳಂತರಂಗದ ಮಾತಿಗೆ ಕಿವಿಯಾಗುತ್ತಿದ್ದೆ. ತುಂಬ ಚಿಕ್ಕ ವಯಸ್ಸಿನಲ್ಲಿಯೇ ಅಂದರೆ ಐದು ವರ್ಷ ವಯಸ್ಸಿಗೆ .ತಾಯಿಯ ತವರಿನವರು ಕಿರುಗಣಿ(ಸಣ್ಣಸೀರೆ, ಮುಂಡು) ಉಡಿಸುವ ಕಾರ್ಯಕ್ರಮ ಮಾಡಿದ ಮೇಲೆ ಆನಂತರ ಮುಂದೆರಡು ವರ್ಷದಲ್ಲಿ ಅಂಗಿ ಹೋಗಿ ಸೀರೆ ಉಡುತ್ತಿದ್ದಳಂತೆ. ಉಡಲೇಬೇಕಿತ್ತು. ಹತ್ತು-ಹನ್ನೆರಡು ವರ್ಷಕ್ಕೆ ಋತುಮತಿಯಾದ ಮೇಲಂತೂ ಇತರ ಕಡ್ಡಾಯ-ಕಟ್ಟಳೆಗಳು ಅವಳು ಜಾರಿ ಮಾಡಲೇ ಬೇಕಿತ್ತಂತೆ. ಅಂದರೆ ಕೈತುಂಬ ಬಳೆಗಳು, ಕಾಸಿನಗಲ ಕುಂಕುಮ, ಕಾಲಲ್ಲಿ ಭಾರದ ರುಳಿ-ಪೈಜಾಣ ಹಾಗೂ ತಲೆ ತುಂಬ ಸೆರಗು ಇರಲೇಬೇಕು. ಹೊರಗಿನಿಂದ ಗಂಡಸರು ಮನೆಗೆ ಬರುವ ಹೊತ್ತಲ್ಲಿ ಅಥವಾ ಗಂಡಸರಿದ್ದಾಗ ಇವಳ ತಲೆ ಸೆರಗು ಇರಲೇಬೇಕು. ಕೆಲಸದ ಧಾವಂತದಲ್ಲಿ ಹೆಗಲಿಗೆ ಜಾರಿದರೆ ಸಾಕು. ಅಲ್ಲಿಗೆ ಹಿರಿಯರು ಮತ್ತು ಪುರುಷರು ಕೆಂಡಾಮಂಡಲ.. "ಸೆರಗು ತಲಿ ಮ್ಯಾಗ್ಯಲ ಹಾಕಿ ಮಳಿ ಜಡಿರಿ. ಅಂದ್ರ ಬುದ್ದಿ ಬರ್ತದ. ಮರ್ಯಾದಿ ಅಂದ್ರ ಗೊತ್ತಾಗ್ತದ.." ಎಂದು ಮಾಳಿಗೆ ಹಾರಿ ಹೋಗುವಂತೆ ಬೈದಾಡಿದರಂತೆ. ಆವಾಗಿಂದ ಅವ್ವ ಹೆಗಲಿಗೆ ಸೆರಗು ಬೀಳದಂತೆ ನೋಡಿಕೊಳ್ಳಲು ವಿಶೇಷ ಗಮನಕೊಟ್ಟು ಪರಿಣಿತಳಾದಳಂತೆ. ಈಗಲೂ ಅವ್ವನ ಚಿತ್ರ ಕಣ್ಮುಂದೆ ಬರುವುದು "ಇಳಕಲ್ ಸೀರೆ ಸೆರಗೊದ್ದ ಕಾಸಿನಗಲ ಕುಂಕುಮದ ಹಣೆಯ, ನೋವುಗಳನು ನುಂಗಿ ನುಂಗಿ ಮ್ಲಾನಗೊಂಡ ಮುಖ. ಆದರೆ ರಾಶಿ ಬಟ್ಟೆ ಒಗೆಯುವಾಗ, ಹೆಂಡಿ ಕಿವುಚಿ ಕುಳ್ಳು ಬಡಿಯುವಾಗ, ನೀರು ಸೇದುವಾಗೆಲ್ಲ ತಲೆಯ ಸೆರಗು ಸೊಂಟಕ್ಕೆ ಬಿಗಿಯಲೇಬೇಕಿತ್ತು. ನಾನು ಬೆಳೆಯುತ್ತಿದ್ದಂತೆ ಚೂಢಿದಾರ ಧರಿಸುವ ಬಯಕೆಯಿತ್ತು. ಊಹುಂ. ಒಪ್ಪಿಗೆ ಸಿಗಲೇ ಇಲ್ಲ. ಹತ್ತನೆ ತರಗತಿಯಲ್ಲಿ ಓದುವಾಗ ಕಾರ್ಯಕ್ರಮ ವೊಂದಕ್ಕೆ ಪ್ಯಾಂಟ್ ಧರಿಸಿ ಭಾಗವಹಿಸಿದೆ. ಬಹುದಿನಗಳ ಆಸೆಯಾಗಿತ್ತದು. ಮುಂದಿನ ವರ್ಷಗಳಲ್ಲಿ ಸೀರೆ ಅನಿವಾರ್ಯವಾದಾಗ ನಾನು ಇಳಕಲ್ ಸೀರೆಯನ್ನು ಅಪ್ತ ಆಯ್ಕೆಯಾಗಿಸಿಕೊಂಡೆ. ಅದು ನನ್ನ ಇಚ್ಛೆಯ ಆಯ್ಕೆಯಾಗಿತ್ತು. ಆದರೆ ಹೆಗಲಿಗೆ ಸುತ್ತುವರಿದುಕೊಂಡ ಸೀರೆಯ ಸೆರಗು ಟೈಪ್ ಮಾಡುವಾಗ ತುಂಬ ಅಡ್ಡಿ ಯಾಗುತ್ತಿತ್ತು. ಅವತ್ತಿಂದ ಸೆರಗಿಗೆ ಪಿನ್ನು ಚುಚ್ಚಿ ಒಂದು ಕಡೆ ಉದ್ದಕ್ಕೂ ಬಿಟ್ಟೆ. ಮೊದಲ ದಿನ ಅಕ್ಕನಿಂದ ಬೈಗುಳ. ತಿರುಗಿ ನಿಂತೆ. ಕೆಲ ದಿನಗಳ ನಂತರ ಸುಮ್ಮನಾದಳೂ. ಸಂಕ್ರಾಂತಿಯ ಕರಿದಿನ ಮನೆ ಎದುರಿನ ಮೈದಾನದಲ್ಲಿ ಸೈಕಲ್ ಓಡಿಸಿ. ಅಕ್ಕಪಕ್ಕದ ಮನೆಯ ಸೀರೆ ಉಟ್ಟ ಹೆಂಗಸರೂ ಸೈಕಲ್ ತುಳಿಯುವಂತೆ ಮಾಡಿದ ಮೇಲೆ "ಈ ಸೀರಿ ಸೈಕಲ್ ಓಡಿಸಲಿಕ್ಕ ಅಡ್ಡಿಯಾಗ್ತದಲ್ಲ... ನಮಗೂ ಚೂಡಿದಾರ ಇದ್ರ ಚಲೋ ಇತ್ತು.." ಅಂದರು. "ಬಟ್ಟೆ ಉಟ್ಕೊ ಮಾದು ಆರೋಗ್ಯ ಮತ್ತ ಕೆಲಸಕ್ಕೆ ಅನುಕೂಲ ಆಗಬೇಕು ಅಂತ. ಷೋಕಿ ಅಥವಾ ಯಾರದೋ ಒತ್ತಡಕ್ಕಾಗಿ ಅಲ್ಲ." ನನಗೀಗಲೂ ನೆನಪಿದೆ.

ಹೆಣ್ಮಕ್ಕಳೆಲ್ಲ ಖುಷಿಯಿಂದ ಪ್ರತಿಕ್ರಿಯಿಸಿದ್ದರು. ಮುಂದೆ ಕೆಲವೊಬ್ಬರು ಚೂಡಿದಾರ ಧರಿಸಿದರು. ಅದು ಅವರ ಆಯ್ಕೆಯಾಗಿತ್ತು.

'ಅಶ್ಲೀಲತೆ-ದೌರ್ಜನ್ಯ'

ಇತ್ತೀಚೆಗೆ ಒಂದು ಮಹಿಳಾ ಸಾಹಿತ್ಯ ಸಮ್ಮೇಳನದಲಿ ಭಾಗವಹಿಸಿದ್ದೆ. ವಿಶ್ವವಿದ್ಯಾಲಯದ ಪ್ರಾಧ್ಯಾಪಕಿಯೊಬ್ಬರು ಮಾತನಾಡುತ್ತಾ "ಹೆಣ್ಮಕ್ಕಳು ಮಾಧ್ಯಮಗಳ ಪ್ರಚೋದನೆಗೆ ಒಳಗಾಗಿ ಅಶ್ಲೀಲ ಬಟ್ಟೆ ಧರಿಸುತ್ತಿದ್ದಾರೆ ಅದಕ್ಕಾಗಿ ಅವರ ಮೇಲೆ ದೌರ್ಜನ್ಯ ನಡೆಯುತ್ತಿದೆ" ಎಂಬ ಹೇಳಿಕೆ ಕೊಟ್ಟರು. "ನಾಲ್ಕು ವರ್ಷದ ಮಗುವಿನ ಮೇಲೆ ಅತ್ಯಾಚಾರ ನಡೆಯುತ್ತಿದೆಯಲ್ಲ. ಆ ಮಗು ಯಾವ ಅಶ್ಲೀಲ ಬಟ್ಟೆ ಹಾಕಿತ್ತು?" ಎಂದು ಕೇಳಿದ್ದಕ್ಕೆ ಅವಳ ಹತ್ತಿರ ಉತ್ತರವಿರಲಿಲ್ಲ. ಅಧ್ಯಕ್ಷತೆ ವಹಿಸಿದವರು ಸ್ಪಷ್ಟಗೊಳಿಸುತ್ತಾ, "ಅತ್ಯಾಚಾರಕ್ಕೆ ಧರಿಸಿದ ಬಟ್ಟೆಗಳು ಕಾರಣವಲ್ಲ. ಅತ್ಯಾಚಾರಿಯ ತಲೆಯೊಳಗಿನ ವಿಚಾರಗಳು ಕಾರಣ. ವಿಚಾರಗಳು ಮಹಿಳೆಯರನ್ನು ಗೌರವಿಸುವಂತಿರಬೇಕು. ಮಹಿಳೆಯರು ಯಾವ ಬಟ್ಟೆ ಉಡಬೇಕು ಎಂದು ನಿರ್ದೇಶಿಸುವ ಹಕ್ಕು ಯಾರಿಗೂ ಇಲ್ಲ...?" ಎಂದು ಹೇಳಿದರು.




ಜಾಗತೀಕರಣದ ವಿರುದ್ಧ ಹೋರಾಡುವರೇ?

ಮಹಿಳೆಯರ ಮೇಲೆ, ಸಮುದಾಯದ ಮೇಲೆ ನಿಯಂತ್ರಣ ಸಾಧಿಸಲು ಹೀಗೆ ಉಡುಪು, ಆಚರಣೆ, ನಂಬಿಕೆಗಳನ್ನು ಹೇರುವುದು ಮೂಲಭೂತವಾದವಲ್ಲದೇ ಮತ್ತೇನು...? ಸನಾತನ ಮತ್ತು ಮೂಲಭೂತವಾದವು ಬಹುದೊಡ್ಡ ಅಪಾಯವೇ. ಬಿಜೆಪಿಯು ಅಧಿಕಾರಕ್ಕೆ ಬಂದಾಗಿಂದ ಈ ಅಪಾಯ ಇನ್ನೂ ಭಯಂಕರ ಸ್ವ[illegible] ಪಡೆಯುತ್ತಿದೆ. ಮಂಗಳೂರು ಚರ್ಚ್‌ಗಳಲ್ಲಿ ಯುವತಿಯರು ಸ್ಕರ್ಟ್ ಧರಿಸಿರುವುದಕ್ಕೆ ಹಿಂದುತ್ವದ ಸಂಘ ಗ್ಯಾಂಗು ಹಲ್ಲೆ ಮಾಡಿತು. ಇದೇ ಸಮಯದಲ್ಲಿ ಇಂಥದೇ ಬಟ್ಟೆ ಉಡಬೇಕು ಎಂಬ ಕಾನೂನು ಪುರುಷರ ಮೇಲೆ ಹೇರುವುದಿಲ್ಲ. ಇಲ್ಲೂ ಮಹಿಳೆ ಬಲಿ. ದೇವದಾಸಿ ಪದ್ದತಿ ಅರೆ ಬೆತ್ತಲೆ ಸೇವೆಗಳನ್ನು ಪೋಷಿಸಿಕೊಂಡು ಬರುತ್ತಿರುವ ಪುರೋಹಿತ ಶಾಹಿಯು ಜಾಗತೀಕರಣವನ್ನು ಬೆಂಬಲಿಸುವ ಮೂಲಕ ಮಹಿಳೆಯನ್ನು ಸರಕಾಗಿಸುತ್ತಿದೆ. ಹೀಗೆ ಏಕಕಾಲಕ್ಕೆ ತನ್ನ ಶೋಷಣಾ ಪ್ರಧಾನ ಮೌಲ್ಯಗಳನ್ನು ಜನತೆಯ ನಡುವೆ ಬಿತ್ತುತ್ತ ದ್ವಂದ್ವ ನೀತಿಯನ್ನು ಒಂದರ್ಥದಲ್ಲಿ ಬಹಿರಂಗ ಮೋಸವನ್ನು ಜಾರಿ ಮಾಡುತ್ತಿರುವುದನ್ನು ಪ್ರಜ್ಞಾವಂತರು ಅರಿಯಬೇಕಿದೆ. ಇತ್ತೀಚೆಗೆ ಪಬ್ ಮೇಲೆ ದಾಳಿ ಮಾಡಿದ ಶ್ರೀರಾಮಸೇನೆ ಜಾಗತೀಕರಣದ ವಿ[illegible] ಹೋರಾಡುವುದೇ? ಇಲ್ಲ. ಮಹಿಳೆಯರ [illegible]ಲೆ ಹಿಂದೂ ಸಂಸ್ಕೃತಿ ಹೇರುವ ಹುನ್ನಾರ. "ಡ್ರೆಸ್ ಕೋಡ್" ಎಂಬುದೊಂದು ಮಹಿಳೆಯರನ್ನು ನಿಯಂತ್ರಿಸುವ ಅಸ್ತ್ರವಾಗಿಸಿಕೊಂಡಿದ್ದಾರೆ. ಎಲ್ಲ ಧರ್ಮಾಂಧ ಮೂಲಭೂತವಾದಿಗಳೇ ಈ ಕೃತ್ಯಕ್ಕೆ ಮುಂದಾಗುತ್ತಿದ್ದಾರೆ ತಾಲಿಬಾನಿಗಳಂತೆ.

ದುಡಿಯುವ ವರ್ಗದ ತಾಕತ್ತು

ಇದನ್ನು ಎದುರಿಸುವುದು ಹೇಗೆ? ಪಕ್ಷವು ಸಾಂಸ್ಕೃತಿಕ, ಸಾಮಾಜಿಕವಾಗಿಯೂ ಮತ್ತು ಆರ್ಥಿಕವಾಗಿಯೂ ಹೋರಾಟ ಕಟ್ಟಲು ಮಾರ್ಗದರ್ಶನ ಮಾಡುತ್ತದೆ. ನಾನು ನಿತ್ಯಾನಂದ ಸ್ವಾಮಿಯವರು ಹುಮನಾಬಾದ್ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಭೇಟಿ ಕೊಟ್ಟಿದ್ದೆವು. ನೂರಾರು ಜನ ಉದ್ಯೋಗ ಖಾತ್ರಿಯಲ್ಲಿ ಕೆಲಸ ಮಾಡುತ್ತಿದ್ದರು. ಕೆನಲ್ ಕೆಲಸವದು. ನಮ್ಮ ವಾಹನ ಇಳಿದು ಕೆನಲ್‌ನತ್ತ ಹೋದೆವು. ನೂರಾರು ಜನ ಕೆಂಬಾವುಟ ಹಿ[illegible] ಘೋಷಣೆ ಹಾಕಿ ನಮ್ಮನ್ನು ಬರಮಾಡಿಕೊಂಡರು. ದೂರದಿಂದ ಎಲ್ಲರೂ ಪುರುಷರಂತೆ ಕಾಣುತ್ತಿ[illegible] ಇರಬಹುದೇ? ನಿತ್ಯಾನಂದಸ್ವಾಮಿಯವರಿಗೆ ಅಚ್ಚರಿ. ಆದರೆ ಅರ್ಧಕ್ಕೂ ಹೆಚ್ಚು ಜನ ಮಹಿಳೆಯರು. ಅವರೆಲ್ಲ ಪ್ಯಾಂಟು-ಶರ್ಟು ಧರಿಸಿದ್ದರು. ಗಾರೆ ಕೆಲಸ ಮಾಡಲು ಸೀರೆಗಿಂತ ಪ್ಯಾಂಟು ಅನುಕೂಲ. ಸರಿ ಎಲ್ಲರೂ ತಮ್ಮ ಮಕ್ಕಳ ಅಥವಾ ಗಂಡನ ಪ್ಯಾಂಟ್ ಶರ್ಟ್‌ಧರಿಸಿ ಗುದ್ದಲಿ ಸಲಕಿ ಹಿಡಿದು ತಗ್ಗು ತೋಡುತ್ತ ತಮ್ಮ ಪಾಡಿಗೆ ತಾವು ಮೂಲಭೂತವಾದಿಗಳ ಡ್ರೆಸ್ ಕೋಡ್ ನಿಯಂತ್ರಣಕ್ಕೆ ಸವಾಲು ಹಾಕಿರುವರು ಮತ್ತು ಏಕ ಸಂಸ್ಕೃತಿಯ ಸನಾತನ ಕಾಯ್ದೆಯನ್ನು ಮುರಿದಿರುವರು. ದುಡಿಯುವ ವರ್ಗಕ್ಕೆ ಸಹಜವಾಗಿಯೇ ಬಂದ ತಾಖತ್ತಿದು. ನಾವು ಸಭೆ ಮುಗಿಸಿ ಬರುವಾಗ ಶರ್ಟಿನ ತೋಳೇರಿಸುತ ಅಂಜನಾ ಹೇಳುತ್ತಿದ್ದಳು. "ಅಕ್ಕಾ ಮಹಿಳಾ ಸಂಘದ ಮೀಟಿಂಗಿಗೆ ನಂಗೂ ಕರೀರಿ" ಎಂದು ಆದೇಶ ಹೊರಡಿಸಿದಳು. ನಾಜೂಕು ವನಪು ವಯ್ಯಾರವಿಲ್ಲದ ಅಂಜನಾ ಧೀಮಂತಿಕೆಯಿಂದ ಕೆಂಬಾವುಟ ಬೀಸ[illegible] ಬೀಳ್ಕೋಟ್ಟಳು.

○



ಹಣಕಾಸು ಸುನಾಮಿಯ ಸುಳಿಯಲ್ಲಿ

ಜಾಗತಿಕ ಆರ್ಥಿಕ ಬಿಕ್ಕಟ್ಟು ದೇಶದ ಮೇಲೂ ರಾಜ್ಯದ ಮೇಲೂ ತನ್ನ ಕರಿನೆರಳು ಚಾಚಿದೆ. ಏನು ನಡೆದಿದೆ ಕೈಗಾರಿಕೆ, ವ್ಯಾಪಾರೋದ್ದಿಮೆಯಲ್ಲಿ?

ಕೆಟರಿಂಗ್ ಉದ್ದಿಮೆಗೆ ಕುತ್ತು

ಬೆಂಗಳೂರಿನಲ್ಲಿ ಕೇಟರಿಂಗ್ ಉದ್ದಿಮೆ ಅಂದರೆ ಊಟ-ತಿಂಡಿ- ತಿನಿಸುಗಳನ್ನು ತಯಾರಿಸಿ ಗ್ರಾಹಕರಿಗೆ ಬೇಕಾದೆಡೆ ಪೂರೈಸುವ ಉದ್ದಿಮೆ ಇತ್ತೀಚಿನ ವರ್ಷಗಳಲ್ಲಿ ಭರದಿಂದ ಬೆಳೆಯುತ್ತಿದ್ದ ಉದ್ದಿಮೆಯಾಗಿತ್ತು. ಕಳೆದ ಸಪ್ಟಂಬರ್ ವೇಳೆಗೆ ಸುಮಾರು 500 ಇಂತಹ ಸೇವೆಗಳಿದ್ದವು. ಈಗ ಅವುಗಳಲ್ಲಿ ಸುಮಾರು ಕಾಲುಭಾಗ ಮುಚ್ಚಿ ಅಲ್ಲಿಯ ಕೆಲಸಗಾರರು ಕೆಲಸ ಕಳಕೊಂಡಿದ್ದಾರೆ. ಇನ್ನೂ ಮುಚ್ಚದಿರುವ ಸಂಸ್ಥೆಗಳಲ್ಲಿಯೂ ಬೇಡಿಕೆಯ ಪ್ರಮಾಣ ಇಳಿದ್ಹಿದೆ. ಒಟ್ಟು ಉದ್ದಿಮೆಯಲ್ಲಿ ಬೇಡಿಕೆಯ ಪ್ರಮಾಣ 40 ಶೇ.ದಷ್ಟು ಇಳಿದಿದೆ ಎಂದು ಅಂದಾಜು ಮಾಡಲಾಗಿದೆ. ಅಮೆರಿಕಾದಲ್ಲಿನ ಆರ್ಥಿಕ ಬಿಕ್ಕಟ್ಟು ನಮ್ಮ ಐಟಿ, ಬಿಪಿಒ ವಲಯಗಳನ್ನು ತಟ್ಟಿದ ಪರಿಣಾಮವಾಗಿ ಈ ಪರಿಸ್ಥಿತಿ ಉಂಟಾಗಿದೆ.

ಐಟಿ ವಲಯದಲ್ಲಿ ಉದ್ಯೋಗ ಬೆಳವಣಿಗೆ ದರ ಇಳಿಕೆ

ಭಾರತದ ಐಟಿ ಉದ್ದಿಮೆಯಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಕಾಣ ಬಂದ ಉದ್ಯೋಗೋಲ್ಲಾಸ ಈಗಿಲ್ಲ ಎಂದು ಸ್ವತಃ ಇನ್ಫೋಸಿಸ್‌ನ ಸಹ-ಅಧ್ಯಕ್ಷ ನಂದನ ನೀಲೆಕಣಿ ಕೇಳಿದ್ದಾರೆ. ಕಳೆದ 3-4 ವರ್ಷಗಳಲ್ಲಿ ಐಟಿ ಉದ್ದಿಮೆ 30 ಶೇಕಡಾಕ್ಕೂ ಹೆಚ್ಚಿನ ದರದಲ್ಲಿ ಬೆಳೆಯುತ್ತಿತ್ತು. ಅದೀಗ 20 ಶೇ.ಕ್ಕೆ ಇಳಿಯಬಹುದು ಎಂದು ಅವರು ಹೇಳಿದ್ದಾರೆ. ಕಾರಣ ಅಮೆರಿಕಾದಲ್ಲಿನ ಆರ್ಥಿಕ ಹಿಂಜರಿತ. ಈ ಹಿಂಜರಿತ ಎಷ್ಟು ಕಾಲ ಮುಂದುವರಿಯಬಹುದು ಎಂದುಹೇಳುವುದು ಕಷ್ಟ ಎಂದೂ ಅವರು ಹೇಳಿದ್ದಾರೆ.

ರಾಜ್ಯ ಸರಕಾರದ ಆದಾಯದ ಮೇಲೂ ಪರಿಣಾಮ

ವಿಶ್ವ ಆರ್ಥಿಕ ಹಿಂಜರಿತ ಈಗ ರಾಜ್ಯದ ಬೊಕ್ಕಸಕ್ಕೂ ಲಗ್ಗೆ ಇಟ್ಟಿದೆ. ರಿಯಲ್ ಎಸ್ಟೇಟ್ ಉದ್ದಿಮೆ ಕುಸಿದಿರುವುದರಿಂದ ನೋಂದಣಿ, ಮುದ್ರಾಂಕ ಶುಲ್ಕ ಸಂಗ್ರಹದಲ್ಲಿ ಗಣನೀಯ ಇಳಿಕೆಯಾಗಿದೆ ಎಂದು ವರದಿಯಾಗಿದೆ. 2007-08 ಸಾಲಿನಲ್ಲಿ ವಸತಿ ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆಗಳಿದ್ದರೂ 4195 ಕೋಟಿ ರೂಪಾಯಿ ಸಂಗ್ರಹವಾಗಿತ್ತು. ಈ ಬಾರಿ ಜನವರಿ ವರೆಗೆ ಆಗಿರುವ ಸಂಗ್ರಹ 2757ಕೋಟಿ ರೂ. 2007-08 ರಲ್ಲಿ 10,97,337 ಆಸ್ತಿಗಳ ನೋದಣಿಯಾಗಿತ್ತು. ಈ ಸಾಲಿನಲ್ಲಿ ಆ ಸಂಖ್ಯೆ 8,70,578 ಕ್ಕೆ ಇಳಿದಿದೆ. ವಾಹನ ತೆರಿಗೆ ಸಂಗ್ರಹವೂ ಇಳಿಮುಖಗೊಂಡಿದೆಯಂತೆ. ಇದುವರೆಗೆ ಈ ಇಲಾಖೆಗೆ ಸಂಗ್ರಹ ಗುರಿ ಮುಟ್ಟುವುದು ಸುಲಭದ ಸಂಗತಿಯಾಗಿತ್ತು. ಆದರೆ ಈ ಬಾರಿ ಗುರಿಯಲ್ಲಿ 400-500ಕೋಟಿ ರೂಪಾಯಿಗಳ ಖೋತಾ ಆಗಬಹುದು ಎಂಬ ಭಯವಿದೆ. ಕಾರಣ ಅದೇ ಬಿಕ್ಕಟ್ಟು. ಹೊಸ ವಾಹನಗಳ ಖರೀದಿ ಪ್ರಮಾಣ ತಗ್ಗಿದೆ. ಸರಕು ಸಾಗಣೆಯೂ ಕಡಿಮೆಯಾಗಿದೆ.

ಕೊಲ್ಲಿ ದೇಶಗಳಿಂದ ಕಾರ್ಮಿಕರು ಮರಳುತ್ತಿದ್ದಾರೆ

ಬಿಕ್ಕಟ್ಟಿನ ಪರಿಣಾಮ ತೈಲಸಂಪನ್ನ ಕೊಲ್ಲಿದೇಶಗಳನ್ನೂ ತಟ್ಟಿದೆ. ಆದರೆ ಇದಕ್ಕೆ ಮೊದಲ ಬಲಿ ಅಲ್ಲಿ ದುಡಿಯುತ್ತಿರುವ ಭಾರತೀಯ ಕಾರ್ಮಿಕರು. ಸುಮಾರು 20,000 ಭಾರತೀಯ ಕಾರ್ಮಿಕರು ಈಗ ಬರಿಗೈಯಲ್ಲಿ ಸ್ವದೇಶಕ್ಕೆ ಹಿಂದಿರುಗುತ್ತಿದ್ದಾರೆ ಎಂದು ವರದಿಯಾಗಿದೆ. ಸ್ವಲ್ಪ ಮೇಲ್ಮಟ್ಟದಲ್ಲಿ ದುಡಿಯುತ್ತಿರುವವರಲ್ಲಿ ಹಲವರು ಸಂಬಳ ಕಡಿತ ಎದುರಿಸಬೇಕಾಗಿದೆ. ಈ ಜೂನ್ ವೇಳೆಗೆ ಸುಮಾರು ಎರಡು ಲಕ್ಷ ಕೇರಳೀಯರು ಕೊಲ್ಲಿಯಿಂದ ಮರಳಲಿದ್ದಾರೆ ಎಂದು ಅಂದಾಜು ಮಾಡಿರುವ ಕೇರಳ ಸರಕಾರ ಅವರಿಗೆ ಸೂಕ್ತ ಪರಿಹಾರ ಒದಗಿಸಲು ಕ್ರಮಗಳನ್ನು ರೂಪಿಸುತ್ತಿದೆ. ಕರ್ನಾಟಕವೂ ಸೇರಿದಂತೆ ಬೇರೆ ರಾಜ್ಯಗಳ ಕಾರ್ಮಿಕರೂ ಈಗ ದೊಡ್ಡ ಸಂಖ್ಯೆಯಲ್ಲಿ ಅಲ್ಲಿ ದುಡಿಯುತ್ತಿದ್ದು ಅವರ ಬಗ್ಗೆಯೂ ಸಂಬಂಧಪಟ್ಟ ರಾಜ್ಯ ಸರಕಾರಗಳು ತಲೆ ಕೆಡಿಸಿಕೊಳ್ಳಬೇಕಾದ ಪರಿಸ್ಥಿತಿಯಿದೆ.

ಮೂರು ತಿಂಗಳಲ್ಲಿ 5ಲಕ್ಷ ಉದ್ಯೋಗಗಳು ಮಾಯ

ಅಮೆರಿಕಾದಲ್ಲಿ ಆರಂಭವಾದ ಹಣಕಾಸು ಬಿಕ್ಕಟ್ಟು ಭಾರತವನ್ನು ತಟ್ಟುವುದಿಲ್ಲ ಎಂದು ಹೇಳಿಕೊಂಡೇ ಬಂದ ಭಾರತ ಸರಕಾರ ಕೊನೆಗೂ ಭಾರತದಲ್ಲಿ ಉದ್ಯೋಗಾವಕಾಶಗಳ ಮೇಲೆ ನಿಜವಾಗಿ ಇದು ಎಂತಹ ಪ್ರಭಾವ ಬೀರುತ್ತಿದೆ ಎಂಬ ಬಗ್ಗೆ ಒಂದು ಸರ್ವೆ ನಡೆಸಿದೆ. ಕೇಂದ್ರ ಸರಕಾಠದ ಕಾರ್ಮಿಕ ಕಾರ್ಯಾಲಯ ಎಂಟು ವಲಯಗಳಲ್ಲಿ(ಗಣಿಗಾರಿಕೆ, ಜವಳಿ ಮತ್ತು ಸಿದ್ಧ ಉಡುಪುಗಳು, ಲೋಹ ಮತ್ತು ಲೋಹದ ಉತ್ಪಾದನೆಗಳು, ಆಟೊಮೊಬೈಲ್, ಮುತ್ತುಗಳು/ಆಭರಣಗಳು, ಕಟ್ಟಡ ನಿರ್ಮಾಣ ಮತ್ತು ಐಟಿ/ ಬಿಪಿಒ) ಹತ್ತು ಮತ್ತು ಅದಕ್ಕಿಂತ ಹೆಚ್ಚು ಕಾರ್ಮಿಕರಿರುವ 2581 ಘಟಕಗಳಲ್ಲಿ ಈ ಸರ್ವೆ ನಡೆಸಿದೆ. ಅದರ ಪ್ರಕಾರ ಸಪ್ಟಂಬರ್ 2008ರಲ್ಲಿ ಕಾರ್ಮಿಕರ ಸಂಖ್ಯೆ 1.62 ಕೋಟಿ ಇದ್ದದ್ದು ಡಿಸೆಂಬರ್ ಅಂತ್ಯದ ವೇಳೆಗೆ 1.57 ಕೋಟಿಗೆ ಇಳಿದಿದೆ. ಅಂದರೆ ಸುಮಾರು 5 ಲಕ್ಷ ಉದ್ಯೋಗಗಳ ನಾಶವಾಗಿವೆ.

ಈ ಸರ್ವೆ ಹೆಚ್ಚು ಉದ್ದಿಮೆಗಳನ್ನು ಒಳಗೊಂಡಿದ್ದರೆ, ಇನ್ನೂ ಉತ್ತಮವಾಗಿ ನಡೆದಿದ್ದರೆ ಈ ಸಂಖ್ಯೆ ಇನ್ನೂ ಹೆಚ್ಚಿರುವ ಸಂಭವವಿತ್ತು ಎಂದು ಆರ್ಥಿಕ ತಜ್ಞರು ಹೇಳುತ್ತಾರೆ.

ಈ ಇಳಿಕೆ ಪ್ರತಿ ತಿಂಗಳೂ ನಡೆದಿದೆ. ಸರಾಸರಿಯಾಗಿ ತಿಂಗಳಿಗೆ 1.01 ಶೇಕಡಾದಂತೆ ಇಳಿದಿದೆ. ರಫ್ತು ಉದ್ದಿಮೆಗಳಲ್ಲಿ ಇದರ ಪ್ರಮಾಣ ಹೆಚ್ಚು, 1.13 ಶೇಕಡಾ. ಇತರ ಉದ್ದಿಮೆಗಳಲ್ಲಿ 0.81ಶೇ. ಅಂದರೆ ಜಾಗತಿಕ ಹಿಂಜರಿತದ ನೇರ ಪಾತ್ರ ಈ ಉದ್ಯೋಗನಾಶದಲ್ಲಿ ಸ್ಪಷ್ಟವಾಗುತ್ತದೆ.

ಕೈಗಾರಿಕಾ ಬೆಳವಣಿಗೆಯೂ ಇಳಿಮುಖ

ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಡಿಸೆಂಬರ್ 2008ರಲ್ಲಿ ಡಿಸೆಂಬರ್ 2007ಕ್ಕೆ ಹೋಲಿಸಿದರೆ 2ಶೇ. ಇಳಿದಿದೆ. ಡಿಸೆಂಬರ್ 2007ರಲ್ಲಿ ಅದರ ಹಿಂದಿನ ವರ್ಷಕ್ಕೆ ಹೋಲಿಸಿದಾಗ 8ಶೇ. ಏರಿತ್ತು. ಈ ಇಳಿಕೆಯೂ ಕೈಗಾರಿಕಾ ಉತ್ಪನ್ನಗಳ ಕ್ಷೇತ್ರದಲ್ಲಿ ಇನ್ನೂ ಹೆಚ್ಚು, 2.5 ಶೇಕಡಾ. ಹಿಂದಿನ ವರ್ಷ ಅದು 8.6ಶೇ. ಏರಿಕೆ ಕಂಡಿತ್ತು. ಬಾಳಿಕೆಯ ಗ್ರಾಹಕ ವಸ್ತುಗಳ ಉತ್ಪಾದನೆಯಲ್ಲಿ ತೀವ್ರ ಇಳಿಕೆಯಾಗಿದೆ, ಶೇ. 12.8.. ಅದರ ಹಿಂದಿನ ಡಿಸೆಂಬರ್(2007) 2.8ಶೇ. ಏರಿಕೆ ಕಂಡಿತ್ತು. ಎಪ್ರಿಲ್‌ನಿಂದ ಡಿಸೆಂಬರ್ 2007 ರಲ್ಲಿ ಒಟ್ಟು ಕೈಗಾರಿಕಾ ಬೆಳವಣಿಗೆ 9 ಶೇ. ಇತ್ತು . 2008ರ ಇದೇ ಅವಧಿಯಲ್ಲಿ ಇದು 3.2ಶೇ.

ಬಂಗಾರದ ನಾಗಾಲೋಟ

ಚಿನ್ನದ ಧಾರಣೆ ವಿಪರೀತವಾಗಿ ಏರಿದೆ, 10



ಗ್ರಾಂಗೆ 15000ರೂ.ನ ಗಡಿ ದಾಟಿದೆ. ಇದರಿಂದ ಚಿನ್ನಾಭರಣಗಳ ಖರೀದಿ ಇಳಿದಿದೆ. ಇದು ಚಿನ್ನದ ಉತ್ಪಾದನೆ ಕಮ್ಮಿಯಾಗಿರುವುದರಿಂದ ಅಲ್ಲ ಎನ್ನುತ್ತಾರೆ ಈ ವಲಯದ ಉದ್ಯಮಿಗಳು. ಇದಕ್ಕೂ ಕಾರಣ ಅಮೆರಿಕಾದ ಹಣಕಾಸು ಕುಸಿತ, ಆರ್ಥಿಕ ಹಿಂಜರಿತದಿಂದ ಶೇರುಮಾರುಕಟ್ಟೆಗಳಲ್ಲಿ ಹಾಹಾಕಾರ, ಜತೆಗೆ ರಿಯಲ್ ಎಸ್ಟೇಟ್ ಮತ್ತು ಆಟೊಮೊಬೈಲ್ ಉದ್ದಿಮೆಗಳ ದುಃಸ್ಥಿತಿ. ಈ ವಲಯಗಳಲ್ಲಿನ ಹೂಡಿಕೆಗಳೆಲ್ಲ ಈಗ ಬಂಗಾರದ ವಲಯಕ್ಕೆ ಬರುತ್ತಿವೆಯಂತೆ. ಅದರ ಬೆಲೆ 20000ರೂ. ತಲುಬಹುದು ಎಂಬುದು ಈ ಹೂಡಿಕೆದಾರರ ನಿರೀಕ್ಷೆಯಂತೆ.

ಅಮೆರಿಕಾದಲ್ಲಿ 26 ಲಕ್ಷ ಉದ್ಯೋಗನಾಶ

ಸದ್ಯದ ಬಿಕ್ಕಟ್ಟಿನ ತವರೂರು ಅಮೆರಿಕಾದಲ್ಲಿ ಜನವರಿ ತಿಂಗಳಲ್ಲಿ ಪ್ರತಿ ಗಂಟೆಗೆ 800 ಕಾರ್ಮಿಕರು ಉದ್ಯೋಗ ಕಳಕೊಂಡಿದ್ದಾರೆ ಎನ್ನುತ್ತಾರೆ ಪ್ರಸಿದ್ಧ ಪತ್ರ ಕರ್ತ ಹಾಗೂ ವಿಶ್ಲೇಷಕರಾದ ಪಿ. ಸಾಯಿನಾಥ್. ಸೆಪ್ಟಂಬರ್ 2008 ರಿಂದ ಪ್ರತಿದಿನ 17,000 ಕಾರ್ಮಿಕರು ಕೆಲಸ ಕಳಕೊಂಡಿದ್ದಾರೆ. ನವಂಬರ್ ತಿಂಗಳಿಂದ ಲೆಕ್ಕ ಹಾಕಿದರೆ ಈ ಸಂಖ್ಯೆ 19,000ವಾಗುತ್ತದೆ. 2008 ಸಪ್ಟಂಬರ್ ನಿಂದ ಡಿಸೆಂಬರ್‌ವರೆಗೆ 26 ಲಕ್ಷ ಕಾರ್ಮಿಕರು ಕೆಲಸ ಕಳಕೊಂಡಿದ್ದಾರೆ. ಕಳೆದ ಮೂರು ತಿಂಗಳಲ್ಲೆ 17ಲಕ್ಷ ಉದ್ಯೋಗಾವಕಾಶಗಳು ಮಾಯವಾಗಿವೆ.

ಅಮೆರಿಕನ್ ಬ್ಯೂರೊ ಆಫ್ ಲೇಬರ್ ಸ್ಟಾಟಿಸ್ಟಿಕ್ಸ್ ಅಂಕಿ-ಅಂಶಗಳ ಪ್ರಕಾರ ಇತ್ತೀಚಿನ ತಿಂಗಳುಗಳಲ್ಲಿ ಕೃಷಿಯೇತರ ಉದ್ಯೋಗದಲ್ಲಿ ತೀವ್ರ ಇಳಿಕೆಯಾಗಿದೆ. ಮಾಸಿಕ ಇಳಿಕೆ ಈ ಜನವರಿಯ್ಹಲ್ಲಿ 5,98,000 ತಲುಪಿತು, ನಿರುದ್ಯೋಗ ದರ 7.2 ಶೇ. ದಿಂದ 7.6ಶೇ. ಕ್ಕೆ ಏರಿತು. ಡಿಸೆಂಬರ್ 2007ರಿಂದ ಲೆಕ್ಕ ಹಾಕಿದಾಗ ಇಳಿಕೆಯ ಪ್ರಮಾಣ 3.6 ಶೇಕಡಾ. ಆದರೆ ಈ ಇಳಿಕೆಯಲ್ಲಿ ಅರ್ಧದಷ್ಟು ಕಳೆದ ಮೂರು ತಿಂಗಳಲ್ಲೆ ಆಗಿದೆ.

ಯುರೋಪಿನಲ್ಲಿ ಪ್ರತಿಭಟನೆಗಳ ಮಹಾಪೂರ?

ಯುರೋಪಿನಲ್ಲಿ ಮುಂಬರುವ ತಿಂಗಳುಗಳಲ್ಲಿ ಉದ್ಯೋಗನಾಶ ಏರುತ್ತಿರುವುದರ ವಿರುದ್ಧ, ಅನಿಶ್ಚಿತ ಭವಿಷ್ಯ ಕಾಡುತ್ತಿರುವುದರ ವಿರುದ್ಧ ಸರಕಾರ-ವಿರೋಧಿ ಬೀದಿ ಪ್ರತಿಭಟನೆಗಳು, ತೀವ್ರ ಚಳುವಳಿಗಳು ಭುಗಿಲೇಳುವ ಭಯ ಯುರೋಪಿನ ಆಳರಸರನ್ನು ಕಾಡುತ್ತಿದೆಯಂತೆ. ಈಗಾಗಲೇ ಸಾರ್ವಜನಿಕ ಒತ್ತಡದಿಂದ ಐಸ್‌ಲ್ಯಾಂಡಿನ ಬಲಪಂಥೀಯ ಸರಕಾರ ಉರುಳಿದೆ. ಬ್ರಿಟನ್, ಫ್ರಾನ್ಸ್ ಮತ್ತು ಗ್ರೀಸಿನಲ್ಲೂ ಸಾರ್ವಜನಿಕ ಒತ್ತಡಗಳು ಹೆಚ್ಚುತ್ತಿವೆ. ಬಂಡವಾಳಶಾಹಿಯೇ ಮೇಲು ಎಂಬ ಭ್ರಮೆಗೊಳಗಾದ ರಶ್ಯ ಮತ್ತು ಪೂರ್ವ ಹಾಗೂ ಮಧ್ಯ ಯುರೋಪಿನ ಮಾಜಿ ಸಮಾಜವಾದಿ ದೇಶಗಳ ಜನರಿಗೆ ಮುಕ್ತ ಮಾರುಕಟ್ಟೆ ಬಂಡವಾಳಶಾಹಿಯ ಕ್ರೌರ್ಯದ ರುಚಿ ಮೊದಲ ಬಾರಿಗೆ ತಿಳಿಯುತ್ತಿದೆ.

ಎಲ್ಲೆಡೆ ಸರಕಾರಗಳು ಬ್ಯಾಂಕುಗಳನ್ನು, ದೊಡ್ಡ ವ್ಯಾಪಾರಸ್ಥರುಗಳನ್ನು ಪಾರು ಮಾಡುವ ಬಗ್ಗೆಯೇ ಯೋಚಿಸುತ್ತಿದ್ದಾರೆಯೇ ಹೊರತು ಜನಸಾಮಾನ್ಯರನ್ನಲ್ಲ ಎಂಬ ಭಾವನೆ ಜನಗಳ ಆಕ್ರೋಶವನ್ನು ಹೆಚ್ಚಿಸುತ್ತಿದೆ ಎಂದು ಪತ್ರಿಕಾ ವಿಶ್ಲೇಷಕ ಹಸನ್ ಮನ್ಸೂರ್ ಹೇಳುತ್ತಾರೆ. ಈ ಮೊದಲು ಜಾಗತೀಕರಣ-ವಿರೋಧಿಗಳನ್ನು "ಹುಚ್ಚರ ಸಂತೆ"ಯಷ್ಟೇ ಎಂದು ಬದಿಗೆ ತಳ್ಳಲಾಗುತ್ತಿತ್ತು. ಆದರೆ ಈಗ ಮುಕ್ತ ಮಾರುಕಟ್ಟೆ ಮತ್ತು ಜಾಗತೀಕರಣದ ಪ್ರಯೋಜನಗಳ ಬಗ್ಗೆ ಪ್ರವಚನ ಕೇಳಲು ಯಾರೂ ಸಿದ್ಧರಿಲ್ಲ. ಇವು ಇನ್ನಷ್ಟು ಹಾವಳಿ ಮಾಡದಂತೆ ಹೇಗೆ ತಡೆಯುವುದು ಎಂಬುದೇ ಚರ್ಚೆಯ ವಿಷಯವಾಗುತ್ತಿದೆ ಎನ್ನುತ್ತಾರೆ ಅವರು.

ನೆರೆ ಹೊರೆ

ಬಡವರಿಂದ ಕಿತ್ತುಕೊಳ್ಳಲಾಗಿದ್ದ ಮೆತಾಸ್ ಕಂಪನಿ ಭೂಮಿಯಲ್ಲಿ ಕೆಂಬಾವುಟ

ಸತ್ಯಂ ಕಂಪನಿಯ ಭಯಾನಕ ಭ್ರಷ್ಟಾಚಾರ ಬಯಲಿಗೆ ಬಿದ್ದ ಮೇಲೆ ಅದರ ಇನ್ನೊಂದು ತಲೆಯಾದ ಮೆತಾಸ್ ಕಂಪನಿಯ ಬಾನಾಗಡಿಗಳು ಆಚೆ ಬಂದವು. ಸತ್ಯಂ ಕಂಪನಿಯ ಮೂಲಕ ಷೇರು ದಾರರಿಗೆ ವಂಚಿಸಿದ ಹಣವನ್ನು 'ಸತ್ಯಂ' ಮಾಲೀಕ ರಾಜು ಅವರ ಮಗನೇ ಮುಖ್ಯಸ್ಥನಾಗಿರುವ ಈ ಮೆತಾಸ್ ಕಂಪನಿಗೆ ವರ್ಗಾಯಿಸಲಾಗಿತ್ತು. ಆ ಬಗ್ಗೆ ಎಲ್ಲಾ ತನಿಖೆ ನಡೆಯುತ್ತಿದೆ. ಅದು ಬೇರೆ ಕತೆ.

ಇದು ಮೆತಾಸ್ ಕಂಪನಿಯ ಇನ್ನೊಂದು ಭ್ರಷ್ಟಕಾಂಡದ ಕತೆ. ಆಂಧ್ರಪ್ರದೇಶ ರಂಗಾರೆಡ್ಡಿ ಜಿಲ್ಲೆ; ಮಂಚಲ ಮಂಡಲದ ಲೋಯಪಲ್ಲಿ ಗ್ರಾಮ ಮತ್ತು ಸುತ್ತಮುತ್ತಲ ಗ್ರಾಮದಲ್ಲಿ ಈ ಮೆತಾಸ್ ಕಂಪನಿ ಸುಮಾರು 6800 ಎಕರೆ ಭೂಮಿ ಖರೀದಿಸಿತ್ತು; ಖರೀದಿಸಿತ್ತು ಎಂದರೆ ಹೇಗೆ ಗೊತ್ತೆ? ಸರ್ಕಾರದ ಅಂದಾಜಿನ ಪ್ರಕಾರವೇ ಎಕರೆಗೆ 3 ಲಕ್ಷ ಮೀರುವ ರೈತರ ಜಮೀನನ್ನು ರೈತರ ಕೈಗೆ 1000 ರೂ. 10,000 ರೂ.ನಂತೆ ಪುಡಿಗಾಸು ನೀಡಿ ಭೂಮಿಯನ್ನು ಕಬಳಿಸಿತ್ತು. ಕಂಪನಿ ಎಸೆದ ಈ ಮೂರು ಕಾಸಿಗೆ ಒಪ್ಪಿಯೇನು ರೈತರು ಭೂಮಿ ಕೊಟ್ಟಿರಲಿಲ್ಲ. ಅಕ್ಷರಶಃ ರೈತರನ್ನು ಹೆದರಿಸಿ, ಬೆದರಿಸಿ ಭೂಮಿ ಪಡೆಯಲಾಗಿತ್ತು. ಈ ಘನಂಧಾರಿ ಕೆಲಸದಲ್ಲಿ ಪ್ರಮುಖ ಪಾತ್ರವಹಿಸಿರುವನು ಅಕುಲ ರಾಜಯ್ಯ ಅಂತ. ಈ ಒಟ್ಟು ಹಗರಣದಲ್ಲಿ ಆಂಧ್ರಪ್ರದೇಶದ ಕಾಂಗ್ರೆಸ್ ಸರ್ಕಾರದ ಪಾತ್ರವೂ ಇತ್ತು. ಇಲ್ಲಾಂದರೆ ಇಷ್ಟೆಲ್ಲಾ ಆಗುವುದು ಸಾಧ್ಯವಿರಲಿಲ್ಲ. ರೈತರಾದರೋ ಬಹುತೇಕ ಪರಿಶಿಷ್ಟ ಜಾತಿ, ಪಂಗಡಕ್ಕೆ ಸೇರಿದವರು.

ಕಂಪನಿಯ ಹಗರಣ, ಅಕ್ರಮದ ಹೂರಣ ಬಯಲಾಗುತ್ತಿದ್ದಂತೆ ಅಲ್ಲಿಗೆ ಪ್ರವೇಶಿಸಿದ್ದು ಕೆಂಬಾವುಟ. ಸಿಪಿಐ(ಎಂ), ಸಿಪಿಐ ನೇತೃತ್ವದ ಭೂಮಿ ಆಂದೋಲನದ ಬಗೆಗೆ ಈಗ ದೇಶಕ್ಕೆಲ್ಲಾ ಗೊತ್ತಿರುವುದೇ.

ಇಲ್ಲೂ ಅದೇ ಆಗಿದ್ದು. ಈ ಪರಿಶಿಷ್ಟ ಜಾತಿ, ಪಂಗಡದ ರೈತರು ಕೆಂಬಾವುಟ ಹಿಡಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಬಿ.ವಿ.ರಾಘವುಲು, ಸಿಪಿಐ ರಾಜ್ಯ ಕಾರ್ಯದರ್ಶಿ ನಾರಾಯಣ ಮುಂತಾದವರು ಮುಂದೆ ನಿಂತರು. ಬಡವರಿಂದ ಕಿತ್ತುಕೊಳ್ಳಲಾದ ಭೂಮಿ ಬಡವರಿಗೆ ದಕ್ಕಬೇಕು. ಇದು ಬೇಡಿಕೆ. ಅಲ್ಲಿ ಕೆಂಬಾವುಟ ನೆಟ್ಟರು.



ಮೆತಾಸ್ ಕಂಪನಿ 6800 ಎಕರೆ ಭೂಮಿ ಒಡೆತನ ಹೊಂದಿರುವುದೇ ಒಂದು ದೊಡ್ಡ ಅಕ್ರಮ. ಹೋರಾಟ ಮುಂದುವರಿದಿದೆ.

ಇದು ಒರಿಸ್ಸಾದ ಸುದ್ದಿ

ಇತ್ತೀಚೆಗೆ ಒರಿಸ್ಸಾದಲ್ಲಿ ಕಟಕ್ ಮಹಾನಗರ ಪಾಲಿಕೆ ಚುನಾವಣೆ ನಡೆಯಿತು. ಅಲ್ಲಿನ ಒಟ್ಟು 54 ವಾರ್ಡ್‌ಗಳಿಗೆ ನಡೆದ ಸ್ಪರ್ಧೆಯಲ್ಲಿ ಅಧಿಕಾರ ರೂಢ ಬಿಜು ಜನತಾದಳ 37 ಸ್ಥಾನಗಳಿಸಿ ಬಹುಮತ ಪಡೆಯಿತು. ಸುದ್ದಿ ಇಷ್ಟೇ ಅಲ್ಲ, ಇನ್ನೂ ಇದೆ. ಈ ಚುನಾವಣೆಯಲ್ಲಿ ಬಿಜೆಪಿ ಕೂಡ ಸ್ಪರ್ಧಿಸಿತ್ತು. ಬಿಜು ಜನತಾದಳ ಪಕ್ಷದೊಂದಿಗೆ ಮೈತ್ರಿ ಇರಲಿಲ್ಲ, ಪ್ರತ್ಯೇಕವಾಗಿಯೇ ಸ್ಪರ್ಧಿಸಿತ್ತು. ಬಿಜೆಪಿ ಕೇವಲ 2 ಸ್ಥಾನ ಮಾತ್ರ ಗಳಿಸಿದೆ. 'ಪಕ್ಷ ಹೀನಾಯವಾಗಿ ಸೋತಿದೆ. ಅದರ ನೈತಿಕ ಹೊಣೆ ಹೊತ್ತು ತಾನು ರಾಜಿನಾಮೆ ಕೊಡುತ್ತಿದ್ದೇನೆ' ಅಂತ ಒರಿಸ್ಸಾದ ಉನ್ನತ ಶಿಕ್ಷಣ ಸಚಿವ ಬಿಜೆಪಿಯ ಸಮೀರ್‌ದೇ ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿದ್ದಾರೆ.

ರಾಜ್ಯದಲ್ಲಿ ಬಿಜು ಜನತಾದಳ, ಬಿಜೆಪಿ ಮೈತ್ರಿ ಸರ್ಕಾರ ಅಧಿಕಾರದಲ್ಲಿದೆ. ಆದ್ದರಿಂದ ಇದು ಗಮನಿಸಬೇಕಾದ ಸುದ್ದಿ.

ಪ್ರೆಸಿಡೆನ್ಸಿ ಕಾಲೇಜ್‌ನಲ್ಲಿ ಎಸ್‌ಎಫ್‌ಐ ಬಾವುಟ

ಪಶ್ಚಿಮ ಬಂಗಾಳದ ಒಂದು ಪ್ರತಿಷ್ಠಿತ ಕಾಲೇಜು ಪ್ರೆಸಿಡೆನ್ಸಿ ಕಾಲೇಜು. 11 ಫೆಬ್ರವರಿ 2009 ರಂದು ನಡೆದ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಎಸ್‌ಎಫ್‌ಐ ಸಂಘಟನೆ ವಿಜಯ ಸಾಧಿಸಿದೆ. ಕಳೆದ ಕೆಲವು ವರ್ಷಗಳಿಂದ ಇಲ್ಲಿ ಎಸ್‌ಎಫ್‌ಐ ಅತಿ ದೊಡ್ಡ ವಿದ್ಯಾರ್ಥಿ ಸಂಘಟನೆಯಾಗಿ ಮೂಡಿಬರುತ್ತಿದ್ದರೂ ಗೆಲುವು ಸಾಧ್ಯವಾಗಿರಲಿಲ್ಲ. ಏಕೆಂದರೆ ತಾವು ಎಡಪಂಥೀಯರು ಎಂದು ಹೇಳಿಕೊಳ್ಳುವ ನಕ್ಸಲ್‌ವಾದಿಗಳು ಹಾಗೂ ಬಲಪಂಥೀಯರು ಎಲ್ಲರೂ ಎಸ್‌ಎಫ್‌ಐನ ವಿರುದ್ಧ ಕೈಜೋಡಿಸಿದ್ದರು.

ಈ ಬಾರಿಯೂ ಹಾಗೆ ಆಗಿತ್ತು. ರಾಜಕೀಯ ರಹಿತ ವೇದಿಕೆ ಎಂದು ಹೇಳಿಕೊಂಡು ಎಡ, ಬಲ ತೀವ್ರಗಾಮಿಗಳೆಲ್ಲ ಸೇರಿದ್ದರೂ ಕೂಡ ಎಸ್‌ಎಫ್‌ಐ ಸ್ಪಷ್ಟ ಗೆಲುವು ಸಾಧಿಸಿದೆ. ಈ ಸಂಘಟನೆಗಳು ನಡೆಸಿದ ಅಪಪ್ರಚಾರವನ್ನು ಎಸ್.ಎಫ್.ಐ ಸಮರ್ಥವಾಗಿ ಎದುರಿಸಿದೆ.

ಚುನಾವಣೆ ಸೋತು ಹಿಂಸೆಗಿಳಿದರು

ಪಶ್ಚಿಮ ಬಂಗಾಳದಲ್ಲಿ ವಿರೋಧ ಪಕ್ಷಗಳ ಹತಾಶ ಮನಸ್ಥಿತಿ ಹೇಗಿದೆ ಎಂದರೆ ಅವರು ಗೆದ್ದರೂ ಹಿಂಸಾಚಾರ ನಡೆಸುತ್ತಾರೆ. ಸೋತರೂ ಹಿಂಸಾಚಾರವೇ ಅವರ ಪ್ರತಿಕ್ರಿಯೆ. ಕೋಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜು ಮಾತ್ರವಲ್ಲ. ಉತ್ತರ ಬಂಗಾಳ ಹಾಗೂ ಕೂಚ್‌ಬಿಹಾರ್‌ದಲ್ಲಿ ಹಲವಾರು ಕಾಲೇಜುಗಳಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್‌ನ ಹಲವು ವರ್ಷಗಳ ಹಿಡಿತ ತಪ್ಪಿ ಹೋಗಿ ಅಲ್ಲೆಲ್ಲಾ ಎಸ್.ಎಫ್.ಐ.ಗೆ ಗೆದ್ದಿದೆ.


ಹೀಗಾದಾಗ ಅವರು ತಮ್ಮ ತಪ್ಪು ಎಲ್ಲಿ, ಎಲ್ಲಿ ತಮ್ಮನ್ನು ಸುಧಾರಿಸಿಕೊಳ್ಳಬೇಕು ಎಂದು ಯೋಚಿಸಲಿಲ್ಲ. ಅವರು ಮಾಡಿದ್ದೇನು? ಕೂಚ್ ಬಿಹಾರ ಜಿಲ್ಲೆಯ ಸಿಪಿಐ(ಎಂ) ಕಾರ್ಯದರ್ಶಿ ಮೇಲೆ ಮಾರಣಾಂತಿಕ ದಾಳಿ!! ಇದು ತೃಣಮೂಲ ಸಂಸ್ಕೃತಿ.

ಕೂನ್‌ಗುಂಜ ಎಂಬ ಸ್ಥಳದಿಂದ ಕೂಚ್‌ಬಿಹಾರದ ಸಿಪಿಐ(ಎಂ) ಕಾರ್ಯದರ್ಶಿ, ಮುಖಂಡರು ಮತ್ತು ಸಂಗಡಿಗರು ಕಾರಿನಲ್ಲಿ ಹೊರಟಿದ್ದರು. ಹೆದ್ದಾರಿಯಲ್ಲಿ ಮುಂದೆ ಬಂದು ತೃಣಮೂಲ ಬಾವುಟ ಹೊತ್ತ ಟ್ರಕ್‌ನಲ್ಲಿ ಬಂದ ಜನರು ಕಾರಿಗೆ ತಡೆಯೊಡ್ಡಿ ಮುಖಂಡರನ್ನು ಹೊರಗೆಳೆದು ಕಬ್ಬಿಣದ ರಾಡು ಇತ್ಯಾದಿಗಳಿಂದ ಹೊಡೆದಿದ್ದಾರೆ. ಅವರನ್ನು ಕೊಂದೇಬಿಡುತ್ತಿದ್ದರು. ಸಿಪಿಐ(ಎಂ) ಕಾರ್ಯಕರ್ತರು, ಜನರು ಅದನ್ನು ತಪ್ಪಿಸಿದ್ದಾರೆ. ತಲೆಗೆ ತೀವ್ರ ಪೆಟ್ಟಾಗಿದೆ. ಫೆಬ್ರವರಿ 11 ರಂದು ರಾಜ್ಯವ್ಯಾಪಿ ಪ್ರತಿಭಟನೆ ನಡೆದಿದೆ.

ಐತಿಹಾಸಿಕ ರ್‍ಯಾಲಿಯಲ್ಲಿ ಘೋಷಣೆ : 'ಕೃಷಿ ಪ್ರಗತಿಯ ಮೇಲೆ ಕೈಗಾರಿಕಾಭಿವೃದ್ಧಿ'

ರಚನಾತ್ಮಕ ವಿರೋಧ ಪಕ್ಷವಾಗಲು ಸಿದ್ಧವಿಲ್ಲದ ವಿರೋಧ ಪಕ್ಷಗಳ ಕೊಲೆ, ಹಲ್ಲೆ, ದಾಳಿ, ದೊಂಬಿಯಂತಹ ಕೆಲಸಗಳಿಗೆ ಇಳಿದಿರುವಾಗಲೂ ಸಿಪಿಐ(ಎಂ) ಹಾಗೂ ಎಡರಂಗವು ಜನಬೆಂಬಲದೊಂದಿಗೆ ಇಂತಹ ದಾಳಿಕೋರ. ಶಕ್ತಿಗಳನ್ನು ಮೂಲೆಗುಂಪು ಮಾಡುವ ಹೋರಾಟವನ್ನು ತೀವ್ರಗೊಳಿಸಿದೆ. ಫೆಬ್ರವರಿ 7 ರ ತಡರಾತ್ರಿ ಕೋಲ್ಕೊತ್ತಾ ಪರೇಡ್ ಮೈದಾನದಲ್ಲಿ ನಡೆದ ಬೃಹತ್ ರ್‍ಯಾಲಿಯು ಪ್ರತಿಪಕ್ಷಗಳ ಹಿಂಸಾ ರಾಜಕೀಯಕ್ಕೆ ಉತ್ತರದಂತಿತ್ತು.

ರಾಜ್ಯದ ವಿವಿಧ ಭಾಗಗಳಿಗೆ ಬಂದ ಲಕ್ಷಾಂತರ ಜನ ಮೈದಾನದಲ್ಲಿ ನೆರೆದರು. ಮೈದಾನದಲ್ಲಿ ಜಾಗ ಸಾಲದೆ ಹೊರಗೆ ಕೂಡ ನಿಲ್ಲಬೇಕಾದ ಪರಿಸ್ಥಿತಿ. ಇದು ಪರೇಡ್ ಮೈದಾನಕಂಡ ಅತಿ ದೊಡ್ಡ ರ್‍ಯಾಲಿ ಎಂದು ಹೇಳಲಾಗಿದೆ.



ಕೃಷಿ, ಕೈಗಾರಿಕಾ ಅಭಿವೃದ್ಧಿಯಾವುದೇ ವಿಚಾರ ಇರಲಿ ಯಾವುದೇ ಯೋಜನೆಯನ್ನು ವಿರೋಧಿಸುವುದೇ ತಮ್ಮ ಪ್ರವೃತ್ತಿ ಮಾಡಿಕೊಂಡಿರುವ ಪಶ್ಚಿಮ ಬಂಗಾಳದ ವಿರೋಧ ಪಕ್ಷಗಳ ಧೋರಣೆಯನ್ನು ಜ್ಯೋತಿಬಸು ತಮ್ಮ ಸಂದೇಶದಲ್ಲಿ ಖಂಡಿಸಿದರು. ಸಿಂಗೂರಿನಲ್ಲಿ ಕೈಗಾರಿಕೆಯ ಸ್ಥಾಪನೆ, ನಯಾಚಾರ್‌ನಲ್ಲಿ ಪೆಟ್ರೋ ಕೆಮಿಕಲ್ಸ್ ಸಂಕೀರ್ಣ ಸ್ಥಾಪನೆ, ಕೋಮು ಗಲಭೆ, ಸಂಘರ್ಷ ಹುಟ್ಟು ಹಾಕುವ ಪ್ರಯತ್ನಗಳ ವಿರುದ್ಧ ದೃಢವಾದ ಕ್ರಮ ಮುಂತಾದ ಪ್ರಶ್ನೆಗಳ ಕುರಿತು ಬುದ್ಧದೇವ ಮಾತನಾಡಿದರು.

1977 ರಲ್ಲಿ ರಾಜ್ಯದ ಕೃಷಿ ಉತ್ಪನ್ನಗಳ ಪ್ರಮಾಣ 70-73 ಲಕ್ಷ ಇತ್ತು. ಈಗ ಅದು 164 ಲಕ್ಷ ಟನ್ ಆಗಿದೆ. ಈ ಕೃಷಿ ಬೆಳವಣಿಗೆಯನ್ನಾಧರಿಸಿದ ಕೈಗಾರಿಕಾ ಅಭಿವೃದ್ಧಿ ಹಾಗೂ ಇನ್ನಷ್ಟು ಕೃಷಿ ಅಭಿವೃದ್ಧಿ ಬೇಡವೇ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿಮನ್ ಬಸು ಕೇಳಿದರು. ಪಾಪ ಮಚ್ಚು, ಬಂದೂಕು, ರಾಡು ಹಿಡಿದು ಕತ್ತಲಲ್ಲಿ ಹುಡುಕಿಕೊಂಡು ಬರುವವರಿಗೆ ಇದೆಲ್ಲಾ ಅರ್ಥವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ವಿರೋಧ ಪಕ್ಷದ ಮುಖಂಡರಿಗೆ ಮಾತ್ರ ಇವೆಲ್ಲಾ ಅರ್ಥವಾಗುವುದೇ ಬೇಕಿಲ್ಲ.

ನಿರುತ್ತರನಾದ ಸಿಬಿಐ ವಕೀಲ - ಸುಹ್ರಿದ್ ದತ್ತಾಗೆ ಜಾಮೀನು

ಪಶ್ಚಿಮ ಬಂಗಾಳದ ಸಿಂಗೂರಿನ ಯುವತಿ ತಪಸಿ ಮಲ್ಲಿಕ್ ಕೊಲೆ ಪ್ರಕರಣದಲ್ಲಿ ಸಿಪಿಐ(ಎಂ) ಮುಖಂಡ ಸುಹ್ರಿದ್ ದತ್ತಾ ಅವರನ್ನು ಸಿಲುಕಿಸಲಾಗಿದೆ ಎಂದು ಇದೇ ಅಂಕಣದಲ್ಲಿ ಬರೆಯಲಾಗಿತ್ತು. ಈಗ ಅದಕ್ಕೆ ಇನ್ನಷ್ಟು ಸಾಕ್ಷಿಗಳು ದೊರೆಯುತ್ತಿವೆ.

ಪ್ರಕರಣದ ವಿಚಾರಣೆಯ ಕಾಲದಲ್ಲಿ, ಸಿಬಿಐ ತನ್ನ ತನಿಖೆಯ ವಿಧಿ ವಿಧಾನಗಳ ಸಂಬಂಧದಲ್ಲಿ ಎಸಗಿರುವ ತಪ್ಪುಗಳು ಹಾಗೂ ಅಕ್ರಮಗಳಿಗೆ ಸಂಬಂಧಿಸಿ ನ್ಯಾಯಾಧೀಶರು ಸಿಬಿಐನ ವಕೀಲರಿಗೆ ನಾಲ್ಕು ಪ್ರಶ್ನೆಗಳನ್ನು ಕೇಳಿದರು. ನಾಲ್ಕೂ ಪ್ರಶ್ನೆಗಳಿಗೂ ಸಿಬಿಐನ ವಕೀಲರಿಂದ ಮೌನವೇ ಉತ್ತರ.

ಅವರು ಒಂದೇ ಒಂದು ಪ್ರಶ್ನೆಗಾದರೂ ಉತ್ತರಿಸಲಾಗದೇ ದಂಗು ಬಡಿದು ನಿಂತಿದ್ದರು. ನ್ಯಾಯಾಲಯ ಸುಹ್ರಿದ್ ದತ್ತಾ ಹಾಗು ದೇಬು ಮಲ್ಲಿಕ್‌ಗೆ ಜಾಮೀನು ನೀಡಿದೆ. ಕಾನೂನು ಹೋರಾಟ ಮುಂದುವರೆಯಲಿದೆ.

ಮಾಧ್ಯಮ ಮಂಥನ

ಸುದ್ದಿಗೋಷ್ಟಿಯಲ್ಲಿ ಬೆತ್ತಲಾದ ಚೆಡ್ಡಿ ಪತ್ರಕರ್ತರು!

ವಿಶ್ರುತ್

ಸಂಘ ಪರಿವಾರವನ್ನು ಬೆತ್ತಲುಗೊಳಿಸಲು ಪ್ರಗತಿಪರ ಶಕ್ತಿಗಳು ಪ್ರಯತ್ನಿಸಲು ಹೊರಟರೆ ಮಾಧ್ಯಮ ಕ್ಷೇತ್ರದಲ್ಲಿರುವ ಕೆಲವು 'ಚಿಡ್ಡಿ'ಗಳು ಹೇಗೆ ತನ್ನಿಂ ತಾನೇ ಅನಾವರಣಗೊಳ್ಳುತ್ತಾರೆ ಎಂಬುದನ್ನು ನಿರೂಪಿಸುವ ರೋಚಕ ಕತೆಯಿತು, ಓದಿ!

ಬಿಜೆಪಿ ನೇತೃತ್ವದ ರಾಜ್ಯ ಸರಕಾರ ಭಯೋತ್ಪಾದನೆ ವಿರೋಧಿ ಅಭಿಯಾನದ ಹೆಸರಿನಲ್ಲಿ ವಿದ್ಯಾರ್ಥಿ ಸಮುದಾಯದ ನಡುವೆ ಕೋಮುವಾದದ ವಿಷಬೀಜ ಬಿತ್ತುತ್ತಿರುವುದನ್ನು ಖಂಡಿಸಲು ಕೋಲಾರ ಜಿಲ್ಲೆಯ ಪ್ರಗತಿಪರ ಹಾಗೂ ಜಾತ್ಯಾತೀತ ವಿದ್ಯಾರ್ಥಿ ಯುವಜನ, ಮಹಿಳಾ ಸಂಘಟನೆಗಳು ಫೆಬ್ರವರಿ 9 ರಂದು ಸುದ್ದಿಗೋಷ್ಠಿ ಏರ್ಪಡಿಸಿದ್ದವು. ಆದರೆ ಈ ಸುದ್ದಿಗೋಷ್ಠಿ ಅದನ್ನು ವ್ಯವಸ್ಥೆಗೊಳಿಸಿದವರ ವಿವರಣೆಗೋಷ್ಠಿಗೆ ಬದಲಾಗಿ 'ಸಂಘ' ಪತ್ರಕರ್ತರ ಅಪಪ್ರಚಾರ ಗೋಷ್ಠಿಯಾಗಿ ಮಾರ್ಪಡಾಯಿತು ಎನ್ನುವು ವಿಷಾದದ ಸಂಗತಿ.

ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಕ್ರಂ ಪಾಷ, ಎಸ್.ಎಫ್.ಐ ಜಿಲ್ಲಾಧ್ಯಕ್ಷ ವಿ.ಅಂಬರೀಶ್ ಮತ್ತು ಜೆ.ಎಂ.ಎಸ್ ನಾಯಕಿ ವಿ.ಗೀತಾ ತಮ್ಮ ವಿಚಾರಗಳನ್ನು ಪ್ರಸ್ತುತಪಡಿಸಿದ ಮೇಲೆ ಸುದ್ದಿಗಾರರು ಪ್ರಶ್ನೆಗಳ 'ಸುರಿಮಳೆ' ಸುರಿಸತೊಡಗಿದರು! ತಾವು ಸಂಘ ಪರಿವಾರದ ಪರವಾಗಿ ಪ್ರಗತಿಪರರ ಮೇಲೆ 'ಕೆಂಡದ ಮಳೆ'ಯನ್ನೇ ಸುರಿಸುತ್ತಿದ್ದೇವೆ ಎಂಬ ಹುಮ್ಮಸ್ಸಿನಲ್ಲಿದ್ದರು ಕೆಲವು ವರದಿಗಾರರು.


ಸುತ್ತೋಲೆ ಪ್ರತಿ ಇದೆಯೇ?

'ಅಭಿಯಾನದಲ್ಲಿ ಎ.ಬಿ.ವಿ.ಪಿ ಸಂಘಟನೆಯನ್ನು ಮಾತ್ರ ಬಳಸಿಕೊಳ್ಳಬೇಕೆಂಬ ಬಗ್ಗೆ ಸರಕಾರಿ ಸುತ್ತೋಲೆ ಇದೆಯೇ? ನಿಮ್ಮ ಹತ್ತಿರ ಅದರ ಪ್ರತಿ ಇದೆಯೇ' ಎನ್ನುವುದು ಪ್ರಮುಖ ಪ್ರಶ್ನೆಯಾಗಿತ್ತು. ಜನಪ್ರತಿನಿಧಿಗಳು, ಅಂದರೆ ಬೇರೆ ಬೇರೆ ಪಕ್ಷಗಳ ಶಾಸಕರು ಕಾರ್ಯಕ್ರಮವಾದ ಅಭಿಯಾನದಲ್ಲಿ ಭಾಗವಹಿಸಬಾರದು ಎಂದು ಹೇಳುವುದು ಸರಿಯೇ? ಸರಕಾರವನ್ನು ವಿರೋಧಿಸುವ ಕಾರಣಕ್ಕಾಗಿಯೇ ವಿರೋಧಿಸುತ್ತಿದ್ದೀರಾ ಎಂಬಿತ್ಯಾದಿ ಪ್ರಶ್ನೆಗಳೂ ಇದ್ದವು.

ಪತ್ರಕರ್ತರ ಪ್ರಶ್ನೆ ಕೇಳುವ ಹಕ್ಕನ್ನು ಖಂಡಿತಕ್ಕೂ ಪ್ರಶ್ನಿಸಲಾಗದು. ಆದರೆ ಅದನ್ನು ಕೇಳಿದ ರೀತಿ ಮತ್ತು ಅದರ ಹಿಂದಿನ ಉದ್ದೇಶ ಖಂಡಿತಕ್ಕೂ ಪ್ರಶ್ನಾರ್ಹವಷ್ಟೇ ಅಲ್ಲ ಖಂಡನಾರ್ಹವೂ ಆಗಿದೆ.

ದುರದೃಷ್ಟವಶಾತ್ ರಾಷ್ಟ್ರೀಯ ಆಂದೋಲನದ ಮೂಸೆಯಲ್ಲಿ ಮೂಡಿಬಂದ, ಆದರೆ ಇತ್ತೀಚೆಗೆ, ಹಿರಿಯ ಗಾಂಧಿವಾದಿ ಎಂದು ಹೇಳಿಸಿಕೊಳ್ಳುವ ಧುರೀಣರೊಬ್ಬರ ನೇತೃತ್ವದಲ್ಲಿ ಅಪ್ಪಟ ಸಂಘ ಪರಿವಾರದ ತುತ್ತೂರಿಯಾಗಿ ಪ್ರಕಟಗೊಳ್ಳುತ್ತಿರುವ 'ಸಂಯುಕ್ತ ಕರ್ನಾಟಕ'ದ ವರದಿಗಾರರಂತೂ ಪತ್ರಿಕಾ ವೃತ್ತಿಧರ್ಮ ಎಲ್ಲಾ ಎಲ್ಲೆಗಳನ್ನು ಮೀರಿ ಪತ್ರಿಕಾಗೋಷ್ಠಿಯ ಸಂಘಟಕರ ಮೇಲೆ ಹರಿಹಾಯ್ದರು.

ಸರಕಾರದ ಸುತ್ತೋಲೆ ನಮ್ಮಲ್ಲಿದೆ, ಆದರೆ ಸದ್ಯ ಅದರ ಪ್ರತಿ ಇಲ್ಲ. ಆಮೇಲೆ ಅದನ್ನು ನೀಡಲಾಗುತ್ತದೆ ಎಂಬ ಮಾತಿನಿಂದ ತೃಪ್ತರಾಗದ ಅವರು ಕೋಮುವಾದದ- 'ನಾತ' ಹರಡಿದರು. ಅವರ



ಹಲವಾರು ವಿದ್ಯಾರ್ಥಿ ಸಂಘಟನೆಗಳಿದ್ದಾಗ್ಯೂ ಸಂಘ ಪರಿವಾರದ ಎಬಿವಿಪಿಯನ್ನು ಮಾತ್ರ ಜೊತೆಗೆ ಸೇರಿಸಿಕೊಂಡಿರುವ ಬೆಂ.ವಿ.ವಿ. ಸುತ್ತೋಲೆಯ ಪ್ರತಿ

ಬೊಬ್ಬಾಟ, ಕಿರುಚಾಟ ಒಬ್ಬ ಹಿರಿಯ ಪತ್ರಕರ್ತರ ಘನತೆಗೆ ತಕ್ಕುದಾಗಿರಲಿಲ್ಲ. ಸುತ್ತೋಲೆ ಇಲ್ಲದೆ ಅದ್ಹೇಗೆ ಸರಕಾರದ ಮೇಲೆ ಆರೋಪ ಮಾಡುತ್ತೀರಿ ಎಂದು ಪ್ರಾಲಾಪಿಸಿದ ಅವರು, ಸುತ್ತೋಲೆ ಪ್ರತಿ ಇಟ್ಟುಕೊಳ್ಳುವುದು ನಿಮ್ಮ ಧರ್ಮ ಎಂಬ ಬಿಟ್ಟಿ (ಪುಕ್ಕಟೆ) ಉಪದೇಶವನ್ನು ನೀಡಿದರು.

ಎಬಿವಿಪಿ ಸಂಘಟನೆಯನ್ನು ಸರಕಾರದ ಖರ್ಚಿನಲ್ಲಿ ಬಲಪಡಿಸಲು ರಾಜ್ಯ ಸರಕಾರ ಹೊರಟಿರುವುದು ಜಗಜಾಹೀರಾಗಿರುವ ಸಂಗತಿ. ಅಂತಿರುವಾಗ, ಸುತ್ತೋಲೆ ಪ್ರತಿ ಇರಲೇಬೇಕು ಎಂದು ರಚ್ಚೆ ಹಿಡಿದಿದ್ದರಲ್ಲಿ ಅರ್ಥವೇ ಇಲ್ಲ. ಅಲ್ಲದೆ ಸುತ್ತೋಲೆಯ ಪ್ರತಿ ಇಲ್ಲವೆಂದ ಮಾತ್ರಕ್ಕೆ ವಿಷಯದ ಗಹನತೆ ಕಡಿಮೆಯಾಗದು ಎಂಬ ಸಾಮಾನ್ಯ ಪರಿಜ್ಞಾನವೂ ಇಲ್ಲವಾಗಿಯೇ ಈ ವರದಿಗಾರರಿಗೆ?

ಏಕವಚನ ಪ್ರಯೋಗ

ವಾಸ್ತವವಾಗಿ ಇದು ವಿಷಯಾಂತರ ಮಾಡುವ ಚೆಡ್ಡಿ ಪತ್ರಕರ್ತರ ಹುನ್ನಾರವಲ್ಲದೆ ಬೇರೇನೂ ಅಲ್ಲ ಎಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ಕೇಸರಿ ಪಡೆಯನ್ನು ಸಮರ್ಥಿಸುವ ಭರದಲ್ಲಿ ಇವರು ಜೆಎಂಎಸ್ ನಾಯಕಿ ಗೀತಾರನ್ನು ಏಕವಚನದಲ್ಲೇ ಸಂಬೋಧಿಸುತ್ತಿದ್ದುದು ತೀರಾ ನಾಚಿಕೆಗೇಡಿನ ಸಂಗತಿ.

ಇನ್ನು ಹೇಳಿ ಕೇಳಿ ಕೇಸರಿ ಪಡೆಯ ಮುಖವಾಣಿಯಾಗಿರುವ 'ಹೊಸ ದಿಗಂತ'ದ ವರದಿಗಾರರು ಹಲವು ಅಸಂಬಂದ್ಧ ವಿಚಾರಗಳನ್ನು ಪ್ರಸ್ತಾಪಿಸಿದರು.

ಅಷ್ಟೇ ಅಲ್ಲದೆ, ಹಿಂದುತ್ವವಾದಿಗಳ ಭಯೋತ್ಪಾದನೆಯನ್ನು ಪ್ರಗತಿಪರ ಸಂಘಟನೆಗಳ ಮುಖಂಡರು ಖಂಡಿಸಿದ್ದನ್ನು ಪ್ರಸ್ತಾಪಿಸಿದ ಶ್ರೀನಿವಾಸ, ಬಂಧನದಲ್ಲಿರುವ ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್, ಸೇನಾಧಿಕಾರಿಗಳಾದ ಪುರೋಹಿತ್, ಕುಲಕರ್ಣಿ ಮೊದಲಾದವರ ವಿರುದ್ಧ ಆರೋಪಗಳು ಇನ್ನೂ ಸಾಬೀತಾಗಿಲ್ಲ. 'ಆರೋಪ ಸಾಬೀತಾಗುವವರೆಗೆ ಒಬ್ಬ ಆರೋಪಿ ತಪ್ಪಿತಸ್ಥನಲ್ಲ' ಎಂಬ 'ಲಾ.ಪಾಯಿಂಟ್' ಹಾಕಿ ತಾನೊಬ್ಬ ಚೆಡ್ಡಿ ಪರಿವಾರದ ಸಮರ್ಥ ವಕೀಲ ಎಂದು ತೋರಿಸಿಕೊಟ್ಟರು!

ಏನು ಗೊತ್ತು?

ಎಡಪಂಥೀಯರು ಮುಸ್ಲಿಂ ಭಯೋತ್ಪಾದನೆಯನ್ನು ಬೆಂಬಲಿಸುತ್ತಾರೆ, ಹಿಂದೂ ಉಗ್ರವಾದವನ್ನು ಮಾತ್ರ ವಿರೋಧಿಸುತ್ತಾರೆ ಎಂಬ ದಾಟಿಯಲ್ಲಿ ಮಾತನಾಡಿದ ಶ್ರೀನಿವಾಸ, ಜಮ್ಮು ಮತ್ತು ಕಾಶ್ಮೀರದಲ್ಲಿ ಎಡಪಂಥೀಯರು ಏನೂ ಮಾಡುತ್ತಿಲ್ಲ ಎಂದರು.

ಪಾಪ, ಚೆಡ್ಡಿ ಪತ್ರಕರ್ತರಿಗೆ ಅದೇನು ಗೊತ್ತು; ಜಮ್ಮು ಮತ್ತು ಕಾಶ್ಮೀರದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಹಾಗೂ ಈಗಷ್ಟೇ ಮೂರನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗಿರುವ ಮಹಮ್ಮದ್ ಯೂಸುಫ್ ತರಿಗಾಮಿ ಮೂರ್ನಾಲ್ಕು ಬಾರಿ ಹತ್ಯೆ ಪ್ರಯತ್ನದಿಂದ ಪಾರಾಗಿದ್ದಾರೆ ಎನ್ನುವುದು.

ಈ ವಿದ್ಯಮಾನಗಳಿಗೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿರುವುದರಿಂದ ಪ್ರೇರಣೆ ಸಿಕ್ಕಂತಾಗಿದೆ.

ರಾಜ್ಯದ ಬಿಜೆಪಿ ಸರಕಾರ ಪತ್ರಿಕಾ ಸ್ವಾತಂತ್ರ್ಯನೇ ಹರಣ ಮಾಡಲು ಹೊರಟಿರುವ ವಿಚಾರವನ್ನು ನಾವು ಗಮನಿಸಬೇಕು. ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಎಂದು ಪರಿಗಣಿತವಾಗಿರುವ ಮಾಧ್ಯಮದ ಕತ್ತು ಹಿಸುಕುವ ಪ್ರಯತ್ನಗಳನ್ನು ವಿರೋಧಿಸುವವರಲ್ಲಿ ಎಡಪಂಥೀಯರೇ ಮುಂಚೂಣಿಯಲ್ಲಿ ಇರುತ್ತಾರೆ ಎನ್ನುವುದನ್ನು ಮರೆಯದಿರೋಣ. ಜಾತ್ಯಾತೀತತೆ ಪರವಾಗಿ ಸಮರ್ಥವಾಗಿ ದನಿ ಏರಿಸಬಲ್ಲ ಪತ್ರಕರ್ತರು ಗೋಷ್ಠಿಯಲ್ಲಿದ್ದರೂ ಅದು ವರದಿಗಾರರ ಕೆಲಸವಲ್ಲ ಎಂದು ತಮ್ಮ ಕರ್ತವ್ಯ ನಿಭಾಯಿಸಿದರು ಎನ್ನುವುದು ಇಲ್ಲಿ ಗಮನಾರ್ಹ ವಿಚಾರ. ○

ಪತ್ರಕರ್ತ ಬಿ.ವಿ.ಸೀತಾರಾಂ ಬಂಧನ : ಯಡಿಯೂರಪ್ಪನವರ ಸರ್ಕಾರಕ್ಕೆ ಹೈಕೋರ್ಟ್ ಕಪಾಳ ಮೋಕ್ಷ

ಮಂಗಳೂರಿನ ಕರಾವಳಿ ಅಲೆ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದ ಬಿ.ವಿ.ಸೀತಾರಾಂರವರನ್ನು ಜನವರಿ 19 ರಿಂದ ಫೆಬ್ರವರಿ 2ರವರೆಗೆ ನ್ಯಾಯಾಂಗ ಬಂಧನದಲ್ಲಿರಿಸಿದ್ದನ್ನು ಅಕ್ರಮ ಎಂದಿರುವ ಕರ್ನಾಟಕ ಉಚ್ಚ ನ್ಯಾಯಾಲಯವು, ಈ ವಿಷಯದಲ್ಲಿ ಹತ್ತುಸಾವಿರ ರೂಪಾಯಿಗಳ ದಂಡವನ್ನು ಗೃಹ ಇಲಾಖೆ ಮಂಗಳೂರು ಎಸ್.ಪಿ, ಡಿಜಿಪಿ ಯವರು ಚಿತ್ರ ಕಮ್ಯೂನಿಕೇಷನ್‌ನ ವ್ಯವಸ್ಥಾಪಕರೂ, ಸೀತಾರಾಂರವರ ಪತ್ನಿಯವರಾದ ರೋಹಿಣಿಯವರಿಗೆ ನೀಡುವಂತೆ ಆದೇಶಿಸಿ ಕಪಾಳಮೋಕ್ಷ ಮಾಡಿದೆ.

ಅದೇ ಹೊತ್ತಿನಲ್ಲಿ ರಾಜ್ಯಮಾನವ ಹಕ್ಕುಗಳ ಆಯೋಗವು ಸಹ ಸೀತಾರಾಂ ಬಂಧನ, ಪೊಲೀಸರು ನಡೆಸಿಕೊಂಡ ರೀತಿ ನೀಡಿದ ಹಿಂಸೆಯ ಬಗ್ಗೆಯೂ ತೀವ್ರ ಟೀಕೆ ಮಾಡಿ ಸರ್ಕಾರಕ್ಕೆ ಛೀಮಾರಿ ಹಾಕಿದೆ.

ಸಂಘ ಪರಿವಾರ ಹಾಗೂ ಪೊಲೀಸ್ ಇಲಾಖೆ ನೆಪಹೂಡಿ ಸೀತರಾಂರವರ ಮೇಲೆ ಪತ್ರಿಕೆಯ ವರದಿಗಳಿಗೆ ಸಂಬಂಧಿಸಿ, ಮಾನನಷ್ಟ ಮೊಕದ್ದಮೆಯನ್ನು ಹೂಡಿ ಜಾರಿಗೊಳಿಸಿತ್ತು. ಹಳೆಯ ಈ ಕೇಸನ್ನೇ ಹಿಡಿದು ಜನವರಿ 4 ರಂದು ಸೀತಾರಾಮರನ್ನು ಬಂಧಿಸಿ ಜನವರಿ 17ರವರೆಗೆ ನ್ಯಾಯಾಂಗ ಬಂಧನದಲ್ಲಿ ಇರಿಸುವಂತೆಯೂ ಉಡುಪಿ ಕೋರ್ಟ್ ಆದೇಶಿಸಿತ್ತು.

ಆದರೆ ಇದರ ನಂತರವೂ ಜನವರಿ 19 ರಿಂದ ಫೆಬ್ರವರಿ 2ರವರೆಗೆ ಬಂಧನದಲ್ಲಿರಿಸಿದ್ದು ಅಕ್ರಮ ಎಂದಿರುವ ಹೈಕೋರ್ಟ್, ಸೀತಾರಾಂ ಮೈಸೂರಿನ ಆಸ್ಪತ್ರೆಯಲ್ಲಿ ಶುಶ್ರೂಷೆಗೆ ದಾಖಲಾಗಿರುವುದು ಪೊಲೀಸರಿಗೆ ಗೊತ್ತಿದ್ದರೂ ಪೊಲೀಸರು ಮ್ಯಾಜಿಸ್ಟ್ರೇಟ್ ಕೋರ್ಟ್‌ನಿಂದ ಅವರ ಬಾಡಿ ವಾರೆಂಟ್ (ಖುದ್ದು ಹಾಜರಿ) ಆದೇಶ ಪಡೆದುಕೊಂಡಿರುವುದರ ಬಗ್ಗೆ ಪೀಠ ತೀವ್ರವಾಗಿ ಅಸಮಾಧಾನ ವ್ಯಕ್ತಪಡಿಸಿದೆ. ಪೊಲೀಸರದ್ದು ವಿವೇಚನಾರಹಿತ ಕ್ರಮ ಎಂದಿದೆ. ಅಂದರೆ ಸೀತಾರಾಂ ಮೈಸೂರು ಆಸ್ಪತ್ರೆಯಿಂದ ಆ ಕೇಸ್‌ನಲ್ಲಿ ಜಾಮೀನು ಪಡೆದರೆ, ತಕ್ಷಣವೇ ಇನ್ನೊಂದು ಕೇಸ್‌ನಲ್ಲಿ ಮರುಬಂಧನಕ್ಕೆ ಒಳಪಡಿಸುವ ಸೇಡಿನ ಯೋಜನೆ ಇರುವುದು ಇದರಿಂದ ತಿಳಿಯುತ್ತದೆ.

ಯಡಿಯೂರಪ್ಪನವರ ಸರ್ಕಾರಕ್ಕೆ ಹೈಕೋರ್ಟ್ ಛೀಮಾರಿ ಹಾಕಿರುವುದು ಎರಡನೇ ಬಾರಿ ಪೊಲೀಸರು ಹಿಂದೆ ದಾವಣಗೆರೆ ಚರ್ಚ್‌ಗಳ ಮೇಲೆ ಭಜರಂಗದಳ ಧಾಳಿ ನಡೆಸಿ, ನಂತರ ಜಿಲ್ಲಾಡಳಿತ ಬೀಗಹಾಕಿಸಿದ್ದು ಹಾಗು ಪ್ರಾರ್ಥನೆಗೆ ಸಂಬಂಧಿಸಿ ಶರತ್ತುಗಳನ್ನು ವಿಧಿಸಿದ ಬಗ್ಗೆ ನ್ಯಾಯಾಲಯ ಛೀಮಾರಿ ಹಾಕಿತ್ತು. ಇದರಿಂದ ಅವರು ಪಾಠ ಕಲಿಯಲಿಲ್ಲ. ಯಡಿಯೂರಪ್ಪನವರ ಈ ಸರ್ಕಾರಕ್ಕೆ ಸಂವೇದನೆ, ನಾಚಿಕೆ, ಮಾನ, ಮರ್ಯಾದೆ ಎಂಬುದೇನಾದರೂ ಇದೆಯೇ?

ಜಗದಗಲ


ಶರತ್‌ಚಂದ್ರ

ಜಾಗತಿಕ ಬಿಕ್ಕಟ್ಟು : ದಾವೋಸ್ v/s ಬೆಲೆಮ್

ಜಾಗತಿಕ ಬಿಕ್ಕಟ್ಟು ನಿರ್ಣಾಯಕ ಹಂತದಲ್ಲಿ ಇದ್ದು ಅದಕ್ಕೆ ಜಗತ್ತಿನ ಜನ ಪರಿಹಾರ ಹುಡುಕುತ್ತಿರುವ ಹಿನ್ನೆಲೆಯಲ್ಲಿ ಎರಡು ಜಾಗತಿಕ ಫೋರಂಗಳ ಸಭೆಗಳು ನಡೆದಿವೆ. ಸುಮಾರು ನಲ್ವತ್ತು ವರ್ಷಗಳಿಂದ ಪ್ರತೀ ವರ್ಷ ನಡೆಯುತ್ತಿರುವ ಜಾಗತಿಕ ಆರ್ಥಿಕ ಫೋರಂ - ಜಗತ್ತಿನ ಅತಿ ಶ್ರೀಮಂತರು ಮತ್ತು ಪ್ರಸಿದ್ಧರ ವೇದಿಕೆ ಒಂದು. ಸ್ವಿಟ್ಜರ್‌ಲ್ಯಾಂಡಿನ ಹಿಮಪರ್ವತಗಳಲ್ಲಿರುವ ದುಬಾರಿ ರೆಸಾರ್ಟ್ ಪಟ್ಟಣ ದಾವೋಸ್‌ನಲ್ಲಿ ಯಾವಾಗಲೂ ನಡೆಯುತ್ತದೆ. ಇಲ್ಲಿಗೆ ಬರುವವರು ಜಗತ್ತಿನ ದೈತ್ಯ ಕಾರ್ಪೋರೇಶನ್‌ಗಳ ಮುಖ್ಯಸ್ಥರು, ದೊಡ್ಡ ದೇಶಗಳ ಪ್ರಮುಖ ನಾಯಕರು, ಪ್ರಸಿದ್ಧರು ಮತ್ತು ಅವರ ಜತೆ ಓಡಾಡುವ ಬುದ್ಧಿಜೀವಿಗಳು. ಇನ್ನೊಂದು ಈ ಶ್ರೀಮಂತರ ಫೋರಂಗೆ ಸವಾಲು ಹಾಕಿ 'ಇನ್ನೊಂದು ಉತ್ತಮ ಜಗತ್ತು ಸಾಧ್ಯವಿದೆ' ಎಂಬ ಘೋಷಣೆಯೊಂದಿಗೆ ಈ ದಶಕದ ಆರಂಭದಿಂದ ಕೆಲಸ ಮಾಡುತ್ತಿರುವ ಜಗತ್ತಿನ ಸಾವಿರಾರು ಜನ ಸಂಘಟನೆಗಳು ಮತ್ತು ಚಳುವಳಿಗಳ ವೇದಿಕೆ - ಜಾಗತಿಕ ಸಾಮಾಜಿಕ ಫೋರಂ. ಇದು ಈ ಬಾರಿ ಬ್ರೆಜಿಲ್‌ನ ಬೆಲೆಮ್ ಎಂಬ ಪಟ್ಟಣದಲ್ಲಿ ನಡೆಯಿತು. ತೀವ್ರ ಜಾಗತಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಈ ಎರಡು ಫೋರಂಗಳಲ್ಲಿ 'ಮೂಡು' ತೀರಾ ವಿಭಿನ್ನವಾಗಿತ್ತು. ದಾವೋಸ್‌ನಲ್ಲಿ 2600 ಶ್ರೀಮಂತರಲ್ಲಿ ನಿರಾಶೆ ಕಸಿವಿಸಿ ಇದ್ದರೆ, ಬೆಲೆಮ್‌ನಲ್ಲಿ ನೆರೆದಿದ್ದ ಒಂದು ಕಾಲು ಲಕ್ಷ ಜನರಲ್ಲಿ ಹೊಸ ಉತ್ತಮ ಜಗತ್ತು ಕಟ್ಟಲು ಇದು ಅವಕಾಶ ಎಂಬ ಆಶಾ ಭಾವನೆ ಆವರಿಸಿತ್ತು.

ಒಬಾಮಾ ಹೋಗಲಿಲ್ಲ

ಯಾವಾಗಲೂ ಮಾಧ್ಯಮಗಳಲ್ಲಿ ಹೆಚ್ಚು ಸುದ್ದಿ ಮಾಡುತ್ತಿದ್ದ ದಾವೋಸ್‌ನಲ್ಲಿ ಹಾಜರಾತಿ ಸಹ ಕಡಿಮೆ ಇತ್ತು. ಅಧ್ಯಕ್ಷ ಒಬಾಮಾ ಹೋಗಲಿಲ್ಲ. ಮಾತ್ರವಲ್ಲ ಪ್ರತಿನಿಧಿ ಮಂಡಳಿ ಸಹ ಕಳಿಸಲಿಲ್ಲ. ಹಲವು ಪ್ರಸಿದ್ಧರನ್ನು ಆಮಂತ್ರಿಸಿರಲಿಲ್ಲ ಕೂಡಾ. ಶ್ರೀಮಂತ ದೇಶಗಳ ಮುಖ್ಯಸ್ಥರು ಯಾವಾಗಲೂ ದಾವೋಸ್ ತಪ್ಪಿಸುತ್ತಿರಲಿಲ್ಲ. 'ಬಿಕ್ಕಟ್ಟು ನಂತರದ ಜಗತ್ತಿನ' ಬಗ್ಗೆ ಚರ್ಚೆ ಈ ವರ್ಷದ ಮುಖ್ಯ ವಿಚಾರವಾಗಿತ್ತು. ಈಗಿನ ತೀವ್ರ ಬಿಕ್ಕಟ್ಟನ್ನು ಎದುರಿಸುವುದು ಹೇಗೆ? ಪರಿಹರಿಸುವುದು ಹೇಗೆ? ಎಂಬ ಪ್ರಶ್ನೆ ಎದುರಿಸಲೂ ದಾವೋಸ್ ನಾಯಕರು ತಯಾರಿರಲಿಲ್ಲ. ಈ ಪ್ರಶ್ನೆ ಬಗ್ಗೆ ಹೊಸ ಯೋಚನೆ ಚಿಂತನೆಗಳು ಬರುವ ಸೂಚನೆ ಕಾಣಲಿಲ್ಲ. ಆದ್ದರಿಂದ ಬರುವ ಉತ್ಸಾಹ ಹಲವರಿಗೆ ಇರಲಿಲ್ಲ. ಬಂದವರಿಗೂ ಹುಮ್ಮಸ್ಸು ಇರಲಿಲ್ಲ. ನಾವೇನು ಈ ಬಿಕ್ಕಟ್ಟು ಸೃಷ್ಟಿಸಲಿಲ್ಲ. ಬಿಕ್ಕಟ್ಟು ಸೃಷ್ಟಿಸಿದವರು ಹೋಗಲಿ ಎಂದು ಒಬಾಮಾ ಮತ್ತು ಕಂಪನಿ ಅಂದುಕೊಂಡಿರಬೇಕು. ಬಿಕ್ಕಟ್ಟು ಸೃಷ್ಟಿಸಿದವರೂ ಎಲ್ಲಿಯ ಗ್ರಹಚಾರ ಅಂತ ತಲೆ ತಪ್ಪಿಸಿಕೊಂಡಿರಬೇಕು. ಯಾರಿಗೆ ಬಿಕ್ಕಟ್ಟು ಯಾವ ಪ್ರಮಾಣದ್ದು? ಅದನ್ನು ಕೊನೆಗೊಳಿಸುವುದು ಹೇಗೆ? ಎಂಬ ಕಲ್ಪನೆ ಸಹ ಇದ್ದ ಹಾಗೆ ಕಾಣಲಿಲ್ಲ. ದಾವೋಸ್ ಸಭೆ ಆರಂಭವಾದಾಗಲೇ ಯುರೋಪಿನಾದ್ಯಂತ ಬಿಕ್ಕಟ್ಟು ಮತ್ತು ಆಳುವವರು ಅದನ್ನು ಜನ-ವಿರೋಧಿ



ರೀತಿಯಲ್ಲಿ ಪರಿಹರಿಸುತ್ತಿರುವ ಬಗೆ ವಿರೋಧ ಮಾಡಿ ಭಾರೀ ಪ್ರದರ್ಶನಗಳು ಮುಷ್ಕರಗಳು ನಡೆದವು.

ಉತ್ಸಾಹದ ಬುಗ್ಗೆ

ಇದಕ್ಕೆ ವ್ಯತಿರಿಕ್ತವಾಗಿ ಬೆಲೆಮ್‌ನಲ್ಲಿ ಉತ್ಸಾಹದ ಬುಗ್ಗೆ ಹರಿದಿತ್ತು. ಕಳೆದ ಎರಡು ವರ್ಷಗಳಲ್ಲಿ ದಾವೊಸ್‌ನಲ್ಲಿ ವಿಶೇಷ ಆಹ್ವಾನಿತರಾಗಿದ್ದ ಬ್ರೆಜಿಲ್ ಅಧ್ಯಕ್ಷ ಲುಲಾ ಬೆಲೆಮ್‌ಗೆ ಬಂದಿದ್ದರು. ಇಲ್ಲಿ ನೆರೆದಿದ್ದ ಆರು ಸಾವಿರಕ್ಕೂ ಹೆಚ್ಚು ಚಳುವಳಿಗಳು ಜಾಗತಿಕವಾಗಿ ಹಮ್ಮಿಕ್ಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ನಿರ್ಣಯ ತೆಗೆದುಕೊಂಡರು.

ವಿವಿಧ ನಿರ್ಣಯ

ಏಪ್ರಿಲ್ 2 ರಂದು ಲಂಡನ್‌ನಲ್ಲಿ ನಡೆಯಲಿರುವ ಗುಂಪು-20 ಶೃಂಗಸಭೆಯ ಸಂದರ್ಭದಲ್ಲಿ (ಮಾ.28-ಏ.4) ಜಾಗತಿಕ ಆರ್ಥಿಕ-ರಾಜಕೀಯ ಬಲಾಬಲಗಳಲ್ಲಿ ಪ್ರಮುಖ ಬದಲಾವಣೆಗಳಿಗೆ ಒತ್ತಾಯ ಹೇರಲು ಜಗತ್ತಿನಾದ್ಯಂತ ರ್‍ಯಾಲಿ ಪ್ರದರ್ಶನ ಮತ್ತು ಸಾಮೂಹಿಕ ಚಟುವಟಿಕೆಗಳನ್ನು ಹಮ್ಮಿಕ್ಕೊಳ್ಳಲಾಗುವುದು. ಐ.ಎಂ.ಎಫ್.-ವಿಶ್ವಬ್ಯಾಂಕ್-ಡಬ್ಲ್ಯೂ.ಟಿ.ಒ. ತ್ರಿಮೂರ್ತಿಗಳನ್ನು ರದ್ದು ಮಾಡುವ ಅಥವಾ ಅವುಗಳಲ್ಲಿ ತೀವ್ರ ಬದಲಾವಣೆ ಮಾಡುವುದು ಪ್ರಮುಖ ಬೇಡಿಕೆಗಳಲ್ಲಿ ಒಂದು. ಮಾರ್ಚ್ 30 ರಂದು ಪ್ಯಾಲೆಸ್ಟೈನ್ ದಿನ ಆಚರಿಸಲು ನಿರ್ಧರಿಸಲಾಗಿದೆ. ಇಸ್ರೇಲ್ ಗಾಜಾ ಪಟ್ಟಿ ಮೇಲೆ ಬರ್ಬರ ದಾಳಿ ನಿಲ್ಲಿಸಿ ನಿಜವಾದ ಮತುಕತೆಗೆ ಬರುವಂತೆ ಒತ್ತಡ ಹೇರಲು ವ್ಯಾಪಾರ ಬಹಿಷ್ಕಾರ, ಆರ್ಥಿಕ ದಿಗ್ಬಂಧನ ಇತ್ಯಾದಿ ಕ್ರಮಗಳಿಗೆ ಪ್ಯಾಲೆಸ್ಟೈನ್ ದಿನದಂದು ಒತ್ತಾಯ ಮಾಡಲಾಗುವುದು.

ಬೆಲೆಮ್‌ನಲ್ಲಿ ಲ್ಯಾಟಿನ್ ಅಮೆರಿಕದ ಪ್ರಾದೇಶಿಕ ಸಮಗ್ರೀಕರಣದ ಬಗ್ಗೆ ಆ ಖಂಡದ ನಾಲ್ಕು ಪ್ರಗತಿಪರ (ವೆನೆಜುವೆಲಾ, ಬೊಲಿವಿಯ, ಇಕ್ವಡಾರ್., ಪರಗುವೇ) ಅಧ್ಯಕ್ಷರೊಂದಿಗೆ ಸಂವಾದ ಈ ವರ್ಷದ ವಿಶೇಷವಾಗಿತ್ತು. ಇದಲ್ಲದೆ ಇರಾಕ್ ಅಫ್ಘನಿಸ್ತಾನದಿಂದ ವಿದೇಶೀ ಸೈನ್ಯ ವಾಪಸಾತಿ, ಬ್ಯಾಂಕುಗಳ ರಾಷ್ಟ್ರೀಕರಣ, ಬಿಕ್ಕಟ್ಟಿನಿಂದ ದುಷ್ಪರಿಣಾಮಗಳಿಗೆ ಒಳಗಾಗಿರುವ ಉದ್ಯಮಗಳಲ್ಲಿ ಉದ್ಯೋಗಿಗಳ ವಜಾ ಅಥವಾ ವೇತನ ಕಡಿತಕ್ಕೆ ವಿರೋಧ ಇತ್ಯಾದಿ ಹಲವು ಕಾರ್ಯಾಚರಣೆಗಳ ಬಗ್ಗೆ ಒಮ್ಮತ ಮೂಡಿಸಲಾಯಿತು.

○

ಕಿರ್ಗಿಸ್ತಾನದ ಅಮೆರಿಕನ್ ನೆಲೆ ಬಂದ್

ಕಿರ್ಗಿಸ್ತಾನದಲ್ಲಿ ಅಫ್ಘಾನಿಸ್ತಾನದ ಮೇಲೆ ಯುದ್ಧದ ಸಮಯದಲ್ಲಿ ಆರಂಭವಾಗಿದ್ದ ಅಮೆರಿಕದ ಸೇನಾ ನೆಲೆ ಮುಚ್ಚಲು ಅಲ್ಲಿನ ಅಧ್ಯಕ್ಷರು ಸುಗ್ರೀವಾಜ್ಞೆ ಹೊರಡಿಸಿದ್ದಾರೆ. ಇದರ ಜತೆ ಮಧ್ಯ ಏಶ್ಯಾದಲ್ಲಿ ಇದ್ದ ಏಕಮಾತ್ರ ನೆಲೆ ಅಮೆರಿಕನ್ ಸೇನೆಗೆ ಇಲ್ಲವಾಗುತ್ತದೆ. ಅಫ್ಘಾನಿಸ್ತಾನದ ಮೇಲೆ ಯುದ್ಧ ತೀವ್ರಗೊಳಿಸಬೇಕೆಂದಿರುವ ಅಧ್ಯಕ್ಷ ಒಬಮಾರ ಯೋಜನೆಗಳನ್ನು ಇದು ತಲೆಕೆಳಗು ಮಾಡಬಹುದು. ರಶ್ಯಾದ ಸುತ್ತಮುತ್ತ ಅಮೆರಿಕ ಅಥವಾ ನಾಟೋ ಮಿಲಿಟರಿ ನೆಲೆ ಇರಕೂಡದು ಎಂದು ಒತ್ತಾಯಿಸುತ್ತಿದ್ದ ರಶ್ಯಾಕ್ಕೆ ಇದು ದೊಡ್ಡ ರಾಜತಾಂತ್ರಿಕ ಜಯ. ಅಮೆರಿಕದ ಸೇನಾ ನೆಲೆ ವಿರುದ್ಧ ತೀವ್ರ ಜನರ ಆಕ್ರೋಶ ವ್ಯಕ್ತವಾಗಿದ್ದು ಇದು ಅಧ್ಯಕ್ಷರ ನಿರ್ಧಾರಕ್ಕೆ ಮುಖ್ಯ ಕಾರಣ. ಇತ್ತೀಚೆಗೆ ರಶ್ಯ ಭಾರೀ ಸಾಲ ಮತ್ತು ಧನಸಹಾಯ ನೀಡಲು ನಿರ್ಧರಿಸಿದ್ದೂ ಈ ನಿರ್ಧಾರಕ್ಕೆ ಪೂರಕ ಕಾರಣವಾಗಿರಬಹುದು ಎನ್ನಲಾಗಿದೆ.

○

ಚವೇಝ್ ನಿವೃತ್ತರಾಗುವುದಿಲ್ಲ !

ವೆನೆಜ್‌ವೇಲಾ ಅಧ್ಯಕ್ಷತೆಗೆ ಸಂವಿಧಾನದಲ್ಲಿ ಇದ್ದ ಎರಡು ಅವಧಿಗಳ ಮಿತಿಯನ್ನು ತೆಗೆದು ಹಾಕಲು ಜನತೆ ಜನಮತ ಸಂಗ್ರಹದಲ್ಲಿ ಸ್ಪಷ್ಟ ಬಹುಮತದಿಂದ ನಿರ್ಧರಿಸಿದ್ದಾರೆ. ಇದು ಚವೇಜ್ ನಾಯಕತ್ವದ ಎಡ ಚಳುವಳಿಗೆ ಇನ್ನೊಂದು ಗರಿ. ಚವೇಜ್‌ರನ್ನು ಹೇಗಾದರೂ ಮಾಡಿ ಅಧ್ಯಕ್ಷಗಿರಿಯಿಂದ ಇಳಿಸಬೇಕು ಎಂಬ ಬಲಪಂಥೀಯ ವಿರೊಧ ಪಕ್ಷಗಳಿಗೆ ಮನಃ ನಿರಾಸೆಯಾಗಿದೆ. ಮುಖಭಂಗ ಆಗಿದೆ. ಕಳೆದ ವರ್ಷ ಈ ಅಂಶ ಸೇರಿದಂತೆ ಸಂವಿಧಾನದ ಆಮೂಲಾಗ್ರ ಬದಲಾವಣೆಗೆ ನಡೆದ ಜನಮತ ಸಂಗ್ರಹದಲ್ಲಿ ಸ್ವಲ್ಪದರಲ್ಲಿ ಜವೇಜ್ ನಾಯಕತ್ವದ ಎಡ ಚಳುವಳಿಗೆ ಸೋಲಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ಬದಲಾವಣೆಯನ್ನು ಸರ್ವಾಧಿಕಾರಕ್ಕೆ ಹಾದಿ ಎಂದು ಬಲಪಂಥೀಯ ವಿರೋಧ ಪಕ್ಷಗಳು ಮತ್ತು ಅವರ ಸಾಮ್ರಾಜ್ಯಶಾಹಿ ಬೆಂಬಲಿಗರು ಟೀಕಿಸಿದ್ದಾರೆ. ಚವೇಜ್ ಚುನಾವಣೆಗೆ ನಿಲ್ಲದೆ ಬಹುಮತ ಪಡೆಯದೆ ಆಧ್ಯಕ್ಷರಾಗಬಹುದು ಎಂದೇನು ಸಂವಿಧಾನದ ತಿದ್ದಪಡಿ ಆಗಿಲ್ಲ. ಭಾರತ ಸೇರಿದಂತೆ ಹಲವು ಪ್ರಜಾಪ್ರಭುತ್ವಗಳಲ್ಲಿ ಅಧ್ಯಕ್ಷ, ಪ್ರಧಾನಿ ಸೇರಿದಂತೆ ಪ್ರಮುಖ ಹುದ್ದೆಗಳಿಗೆ ಮನಃ ಚುನಾವಣೆಗೆ ನಿಲ್ಲಲು



ಯಾವುದೇ ಮಿತಿಯಿಲ್ಲ ಎಂದು ಅವರಿಗೆ ನೆನಪು ಮಾಡಿಕೊಡಬೇಕು. ಬದಲಾಗಿ ಚವೇಜ್ ಅಧ್ಯಕ್ಷರಾಗಿ ಮುಂದುವರೆದು ವೆನೆಜುವೆಲಾದ ಪ್ರಗತಿಪರ ಬದಲಾವಣೆಗೆ ನಾಯಕತ್ವ ಕೊಡಬೇಕು ಎಂದು ಬಯಸುತ್ತಾರೆ. ಅದರಲ್ಲೇನು ತಪ್ಪು? 'ಹೋಗುವುದಿಲ್ಲ ..ಚವೇಜ್ ಹೋಗುವುದಿಲ್ಲ' ಎಂದು ಲಕ್ಷಾಂತರ ಜನ ಜನಮತ ಸಂಗ್ರಹದ ಫಲಿತಾಂಶ ಬರುತ್ತಿದ್ದಂತೆ ಬೀದಿಗಳಲ್ಲಿ ಕುಣಿದಾಡಿದರು ಎಂದು ವರದಿಯಾಗಿದೆ.

ಕ್ಯೂಬಾದ ನಾಯಕ ಫಿಡೆಲ್ ಕ್ಯಾಸ್ಟ್ರೋ ಚವೇಜ್‌ರನ್ನು ಈ ಪ್ರಚಂಡ ವಿಜಯಕ್ಕೆ ಅಭಿನಂದಿಸಿದ್ದಾರೆ. ಚವೇಜ್ ಕ್ಯಾಸ್ಟ್ರೋರನ್ನು ತಮ್ಮ ರಾಜಕೀಯ 'ತಂದೆ' ಅಂತ ಮಾನ್ಯ ಮಾಡುತ್ತಾರೆ. ಈ ನಡುವೆ ಚವೇಜ್ ಅಧ್ಯಕ್ಷತೆಯ ಹತ್ತು ವರ್ಷಗಳ ಉತ್ಸವ ನಡೆಯಿತು. ಈ ಸಂದರ್ಭದಲ್ಲಿ 'ಅಲ್ಬಾ' ಎಂಬ ಲ್ಯಾಟಿನ ಅಮೆರಿಕದ ದೇಶಗಳ ಪ್ರಾದೇಶಿಕ ಆರ್ಥಿಕ ಕೂಟದ ವಿಶೇಷ ಸಭೆ ನಡೆಯಿತು.

ವಿಶ್ವಾಸದ್ರೋಹಕ್ಕೆ ಕಳಸವಿಟ್ಟ ಬಜೆಟ್

ರಿಂದ

ದ ಬೆಳೆಗಳ ಬೆಲೆಗಳು ಕುಸಿತವಾಗಿವೆ. ರೈತರು ರರಾಗುತ್ತಿದ್ದಾರೆ. ಕೂಲಿಕಾರರು ದಿಕ್ಕು ವರಾಗಿದ್ದಾರೆ. ಸರ್ಕಾರದ ಸಾಲ ಮನ್ನಾದ ೀಜನವು ದೊಡ್ಡ ಸಂಖ್ಯೆಯು ರೈತರಿಗೆ ುಲೇ ಇಲ್ಲ. 89.33 ದಶಲಕ್ಷ ರೈತ ುಗಳಲ್ಲಿ 43.42 ದಶಲಕ್ಷ ಕುಟುಂಬಳಿಗೆ ಸಾಲ ರಲೇ ಇಲ್ಲ. ಅದೇ ರೀತಿ ರೈತ ಕುಟುಂಬಗಳಲ್ಲಿ 8ರಷ್ಟು ಸಣ್ಣ ಮತ್ತು ಅತಿ ಸಣ್ಣ (ಅಂಚಿನ) ಟುಂಬಗಳು, ಅದರಲ್ಲಿ ಶೇ.46.28 ರಷ್ಟು ಬಗಳಿಗೆ ಯಾವ ಬ್ಯಾಂಕಿನ ಸಾಲವೂ ರಲಿಲ್ಲ. ಇನ್ನೂ ಸಾಲ ಮನ್ನಾ ಪ್ರಯೋಜನ ೂ ದೊರೆಯುವುದೆಂತು?

ತರ ಕುರಿತ ರಾಷ್ಟ್ರೀಯ ಆಯೋಗದ ಸ್ಸಿನಂತೆ ಕೃಷಿ ಉತ್ಪನ್ನಗಳ ಬೆಲೆ ಸ್ಥಿರೀಕರಣ ಪನೆಯಾಗಲಿ, ಅಥವಾ ಬೆಳೆ ವಿಮಾ ಯ ಸಾರ್ವತ್ರೀಕರಣಕ್ಕಾಗಿ ಬಜೆಟ್‌ನಲ್ಲಿ ಇಲ್ಲ. ಕೃಷಿ ಸಾಲದ ಬಡ್ಡಿಯನ್ನು ಶೇ.7 ಶೇ.4ಕ್ಕೆ ಇಳಿಸಬೇಕೆಂಬ ಕೃಷಿ ಆಯೋಗದ ಸ್ಸಿಗೂ ಬಜೆಟ್‌ನಲ್ಲಿ ಯಾವುದೇ ಕಿಮ್ಮತ್ತು ುಲಿಲ್ಲ.

ಾರರನ್ನು ಕೇಳುವವರು ಯಾರು?

ಾರ ವಸ್ತುಗಳ ತೀವ್ರ ಬೆಲೆ ಏರಿಕೆ, ್ಯೀಗಾವಕಾಶಗಳಿಲ್ಲದೆ ಸಂಕಷ್ಟಕ್ಕೆ ಸಿಲುಕಿರುವ ಾರರ ದೃಷ್ಟಿಯಿಂದ ಗ್ರಾಮೀಣ ಉದ್ಯೋಗ ೋಜನೆ ಯಲ್ಲಿ ಕೂಲಿಕಾರರಿಗೆ ದಿನಕ್ಕೆ 200 ಕೂಲಿ ನಿಗದಿಪಡಿಸಬೇಕಾದ ಅಗತ್ಯವಿತ್ತು. ಾಗ ಮಾತ್ರವೇ ಕೂಲಿಕಾರರ ಗುಳೆ ತಪ್ಪಿಸಿ ಅವರ ಬದುಕಿನಲ್ಲಿ ತುಸು ನೆಮ್ಮದಿ ಮೂಡಿಸಬಹುದಿತ್ತು. ಬಜೆಟ್ ಅಂತಹ ಯಾವ 'ತಪ್ಪು'ಗಳ ಮಾಡಲು ಮುಂದಾಗಲಿಲ್ಲ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್, ಸರ್ವಶಿಕ್ಷಣ ಅಭಿಯಾನ, ಶಾಲೆಗಳ ಮಧ್ಯಾಹ್ನದ ಬಿಸಿಯೂಟದ ಯೋಜನೆ ಮುಂತಾದವುಗಳಿಗೆ ಕನಿಷ್ಠ ಶೇ.30 ಅನುದಾನ ಹೆಚ್ಚಳ ಮಾಡಬೇಕಾದ ಅಗತ್ಯವಿತ್ತು. ಇದಕ್ಕೆಲ್ಲಾ ಬಜೆಟ್ ಕಣ್ಣು ಕಿವಿ. ಮುಚ್ಚಿಕೊಂಡಿದೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ದೊಡ್ಡ ಪ್ರಮಾಣದ ಉದ್ಯೋಗ ಸೃಷ್ಟಿ ಕಾರ್ಯಕ್ರಮದ ಮೂಲಕ ಜನರ ಕೊಂಡು ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದು ಹಾಗೂ, ಈ ಕ್ರಮವನ್ನು ವ್ಯಾಪಕವಾಗಿ ವಿಸ್ತರಿಸುವುದೊಂದೇ ಬಿಕ್ಕಟ್ಟಿಗೆ ಪರಿಹಾರವಾಗಿದೆ. ಬಿಕ್ಕಟ್ಟಿಗೆ ಪರಿಹಾರವಾಗಿ ದೊಡ್ಡ ದೊಡ್ಡ ಕಾರ್ಪೋರೇಟ್ ಕಂಪನಿಗಳಿಗೆ ಎಷ್ಟೇ ದೊಡ್ಡ ಪ್ಯಾಕೇಜ್ ಕೊಡುಗೆಗಳನ್ನು ನೀಡಿದರೂ ಕೂಡ ಕುಸಿತದ ಪ್ರಪಾತದಿಂದ ಆರ್ಥಿಕತೆಯನ್ನು ಅದು ಮೇಲೆತ್ತಲಾರದು. ಇದರಿಂದ ಬೃಹತ್ ಬಂಡವಾಳಿಗರ ಕಂಪನಿಗಳ ಲೆಕ್ಕಪತ್ರಗಳಲ್ಲಿ ಖರ್ಚು-ವೆಚ್ಚ ಸರಿದೂಗಿಸುವುದರಲ್ಲಿ ಸಹಾಯವಾಗ ಬಹುದೇ ಹೊರತು ಅದು ಜನರ ಕೊಳ್ಳುವ ಶಕ್ತಿಯನ್ನೇನು ಹೆಚ್ಚಿಸಲಾರದು.

ಆಳುವ ಯುಪಿಎ ಸರ್ಕಾರದ ಬಂಡವಾಳಶಾಹಿ ಪರ ಒಲವು ಬದಲಾಗುವಂತಹದ್ದಲ್ಲ. ಪರ್ಯಾಯ ನೀತಿಗಳಿಗಾಗಿ ಹಾಗೂ ಮೂರನೇ ರಾಜಕೀಯ ಪರ್ಯಾಯಕ್ಕಾಗಿ ಜನತೆ ಹೋರಾಟವನ್ನು ತೀವ್ರಗೊಳಿಸಬೇಕಿದೆ. ○

ಸಚಿವ ರಾಮಚಂದ್ರಗೌಡರ 'ಚೆಡ್ಡಿ' ಅನಾವರಣವೂ

ಪುಟ 3 ರಿಂದ

'ಆಧುನಿಕ ಕಲೆಯ ಹೆಸರಿನಲ್ಲಿ ಕೆಲವು ಕಲಾವಿದರೆಂದು ಕರೆದುಕೊಳ್ಳುವವರು ದುರ್ಬಳಕೆ ಮಾಡಿ ಸಂಸ್ಕೃತಿ ವಿರುದ್ಧ ವಿಕೃತಿ ಹಬ್ಬಿಸುತ್ತಿದ್ದಾರೆಂದು, ಅವರೆಲ್ಲಾ ಖೋಟಾ ಜಾತ್ಯಾತೀತವಾದಿಗಳೆಂದು ಜರೆದಿದ್ದಾರೆ. ಇದಕ್ಕೆ ಅಲ್ಲಿದ್ದ ಖ್ಯಾತ ಕಲಾವಿದ ಎಂ.ಎಸ್. ಮೂರ್ತಿ ಪ್ರತಿಭಟನೆ ಸ್ವರವೆತ್ತಿದ್ದಾರೆ. ಆದರೆ ಪೊಲೀಸರನ್ನು ಬಳಸಿ ಹೊರಹಾಕಿಸಿ, ಬಾಯಿಗೆ ಬಂದಂತೆ ಕೂಗಾಡಿದ್ದಾರೆ ಮಾನ್ಯ ಸಚಿವರು. ಕೇಂದ್ರ ಸಚಿವೆ ಇದು ನಮ್ಮ ಕಾರ್ಯಕ್ರಮ. ಕಲಾವಿದರನ್ನು ಹೊರ ಕಳಿಸಬೇಡಿ ಎಂದರೂ 'ನಾನು ಇಲ್ಲಿನ ಸರ್ಕಾರ' ಎಂದು ಸೊಕ್ಕಿನ ಮಾತು ಆಡಿದ ಗೌಡರ ತಲೆ ನಿಜಕ್ಕೂ ಫ್ಯಾಸಿಸ್ಟ್ ವಿಪರೀತ ಪೀಡಿತ ಎಂದೇ ಹೇಳಬೇಕಾಗುತ್ತದೆ. ಸರ್ಕಾರದ ಸಚಿವ ಎಂಬುದನ್ನು ಗಾಳಿಗೆ ತೂರಿ. ಸಂವಿಧಾನದ ಆಶಯಗಳಿಗೂ ತಿಲಾಂಜಲಿ ನೀಡಿ, ಒಬ್ಬ ಬಜರಂಗದಳ, ಶ್ರೀರಾಮಸೇನೆಯ ಮುತಾಲಿಕರಂತೆ ಆಡಿದ್ದು ಖಂಡನೀಯ.

ಈ ಸಂಘ ಪರಿವಾರಿಗಳಿಗೆ ಸರ್ಕಾರ ಎಂಬುದು ಅವರ ಪ್ರಜಾಪ್ರಭುತ್ವ, ಧರ್ಮನಿರಪೇಕ್ಷತೆ, ಸಾಮಾಜಿಕ ನ್ಯಾಯ, ಸಮಾನತೆಯ ಮೇಲೆ ದಾಳಿ ನಡೆಸಲು ಬಳಸುವುದೇ ಆದ್ಯತೆ. ಈಗಾಗಲೇ ದೇಶದ ಹಲವಾರು ಕಡೆ ರಾಮಚಂದ್ರೇಗೌಡರಂತಹ ವಾದಗಳನ್ನೇ ಹೇಳಿ ಎಂ.ಎಫ್.ಹುಸೇನ್, 'ಸಹಮತ್' ನಂತಹ ಹಲವಾರು ಕಲಾವಿದರು, ಸಂಘ ಸಂಸ್ಥೆಗಳ ಮೇಲೆ ದಾಳಿ ನಡೆಸುತ್ತಲೇ ಬಂದಿದ್ದಾರೆ. ಈಗ ಇದು ಕರ್ನಾಟಕದಲ್ಲಿಯೂ ನಡೆದಿದೆ. ಸಾಹಿತಿ ಅನಂತಮೂರ್ತಿ, ಕಾರ್ನಾಡ್‌ರಂಥಹವರ ಮೇಲೆ ಅಪಪ್ರಚಾರದ ದಾಳಿ, ದ್ವೇಷ ಹೆಚ್ಚುತ್ತಲೇ ನಡೆದಿದೆ. ಜರ್ನಾಧನ ರೆಡ್ಡಿಯಂತಹ ಒಬ್ಬ ಸಚಿವ ಬುದ್ಧಿಜೀವಿಗಳನ್ನೇ ಮೂರ್ಖರೆಂದು ಕರೆದರೂ ಸಿ.ಎಂ. ಇತರರು ಚಕಾರ ಎತ್ತುವುದಿಲ್ಲ. ಪತ್ರಿಕಾ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯದ ದಮನಕ್ಕೆ ಇಳಿದಿರುವ ಬಿಜೆಪಿ ಸರ್ಕಾರ ಎಡಬಿಡದೇ ಅಂತಹ ದಾಳಿಗಳನ್ನು ಮುಂದುವರಿಸುತ್ತಲೇ ಇದೆ. ಕಲಾವಿದ, ಸಾಹಿತಿ, ಹೋರಾಟಗಾರರು, ನಾಗರಿಕರ ಅಭಿಪ್ರಾಯಗಳಿಗೆ ಮನ್ನಣೆ ನೀಡುವುದು ಒಂದು ಪ್ರಜಾಸತ್ತಾತ್ಮಕ ಅವಕಾಶ, ಹಕ್ಕು. ಸಂಸ್ಕೃತಿ ಹೆಸರಿನಲ್ಲಿ ಇಂತಹ ದಾಳಿ ನಡೆದಿರುವುದು ತಮ್ಮ ಸರ್ಕಾರದ ನೀತಿಗಳನ್ನು, ಅವರ ರಾಜಕೀಯ, ಸೈದ್ಧಾಂತಿಕ ನಿಲುವುಗಳನ್ನು ಖಂಡಿಸುವ, ದಮನಿಸುವ ಬಿಜೆಪಿ, ಸಂಘಪರಿವಾರದ ಕುತಂತ್ರವೇ ಇಲ್ಲಿ ಧ್ವನಿಸುತ್ತಿದೆ. ಮುಂದಿನ ಲೋಕಸಭಾ ಚುನಾವಣೆ ನಂತರವೂ ಈ ದಾಳಿ ಹೆಚ್ಚಲಿದೆ ಎಂಬುದನ್ನು ಇದು ತೋರಿಸುತ್ತದೆ. ಇದನ್ನು ಎಲ್ಲರೂ ಪ್ರತಿರೋಧಿಸಬೇಕಿದೆ.

ವಿಷಾದದ ಸಂಗತಿಯೆಂದರೆ ಕಲಾವಿದ ಎಂ.ಎಸ್.ಮೂರ್ತಿಯವರನ್ನು ದಬಾಯಿಸಿ ಸಚಿವರೊಬ್ಬರು ಪೊಲೀಸರಿಂದ ಹೊರದಬ್ಬುತ್ತಿರುವಾಗ ಅಲ್ಲಿದ್ದ ಹಲವಾರು ಕಲಾವಿದರಲ್ಲಿ ಇನ್ನೊಬ್ಬರಾದರೂ ಪ್ರತಿಭಟನೆಯ ಧ್ವನಿ ಎತ್ತಿದರೆ? ಎತ್ತಲಿಲ್ಲ. ಇದು ಕಲಾವಿದರಲ್ಲಿನ ಗೊಂದಲವೋ, ಅಸಹಾಯಕತೆಯೋ, ಶರಣಾಗತಿಯೋ? ಇಂದು ಅನಂತಮೂರ್ತಿ, ಎಂ.ಎಸ್.ಮೂರ್ತಿ. ನಾಳೆ.... ಶಿಷ್ಟರಾಗಿರುವ ಯಾರೂ....?

ದಾಷ್ಟ್ಯದ ಖಂಡನೆ - 'ಕಲಾತ್ಮಕ' ಪ್ರತಿಭಟನೆ

ರಾಮಚಂದ್ರೇಗೌಡರ ದಾಷ್ಟ್ಯದ ಮಾತು, ವರ್ತನೆಯನ್ನು 'ಸಾಹಿತಿ, ಕಲಾವಿದರ ಒಕ್ಕೂಟ'ವು 'ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ತೀವ್ರವಾಗಿ ಖಂಡಿಸಿದೆ. ಹಾಗೂ ರಾಮಚಂದ್ರೇಗೌಡರನ್ನು ಸಚಿವ ಸಂಪುಟದಿಂದ ಕಿತ್ತುಹಾಕಲು ಒತ್ತಾಯಿಸಿ ಫೆ. 22, 2009 ರಂದು ಬೆಂಗಳೂರಿನ ಪುರಭವನದ ಎದುರು ಬೃಹತ್ ಪ್ರತಿಭಟನೆ, ಧರಣಿ, ವೈವಿಧ್ಯಮಯ 'ಸಾಂಸ್ಕೃತಿಕ ಪ್ರತಿಭಟನೆ'ಯನ್ನು ಯೋಜಿಸಲಾಗಿದೆ. ಹಲವು ಖ್ಯಾತ ಕಲಾವಿದರು, ಸಾಹಿತಿ, ಪತ್ರಕರ್ತರು ಪತ್ರಿಕಾಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕದ ಎಡಬಿಡಂಗಿ ಬಜೆಟ್

ಿಂದ

ಉಳಿದಿರುವುದು ಕೇವಲ ಒಂದು ತಿಂಗಳು ಅವರು ಹೇಳುತ್ತಿದ್ದಾರೆ. ಹಿಂದಿನ ವರ್ಷದ ನ ಹಣವನ್ನು ಖರ್ಚು ಮಾಡಲಾಗುವು , ಚುನಾವಣೆ ಇನ್ನೇನು ಸಮೀಪಿಸುತ್ತಿರುವಾಗ ಅಗತ್ಯ ವಿಪರೀತ ಎಂಬುದರಲ್ಲಿ ಅನುಮಾನ ೀಗಾಗಿ ಹಣದ ಖರ್ಚು ತೋರಿಸಲೇಬೇಕು. ಹಿಂದಿನ ಬಜೆಟ್‌ನಲ್ಲಿ ಜನತೆಯ ಕೈಗೆ ವುದುಂಟು. ಹೀಗೆ, ಸುಳ್ಳು ಆದಾಯವನ್ನು ಸುವುದು ಸುಳ್ಳು ಖರ್ಚು ತೋರಿಸುವುದು ಯೂರಪ್ಪನವರಿಗೆ ಹೊಸದೇನಲ್ಲ.

ಗ ಮಂಡಿಸಿರುವ 2009-10 ರ ಬಜೆಟ್ ೂ ಅಂತಹುದೇ ತಂತ್ರಗಳಿಗೆ ಕೈ ಹಾಕಿದ್ದಾರೆ. 2009 ರಲ್ಲಿ ತೆರಿಗೆ ಸಂಗ್ರಹ 3111ಕೋಟಿ ಯಾಗಿದ್ದರೂ, 2009-2010 ರಲ್ಲಿ ತೆರಿಗೆ ು ಭೂ ನೋಂದಣಿ ಆದಾಯ, ಮೋಟಾರು ತೆರಿಗೆ, ವಾಣಿಜ್ಯ ತೆರಿಗೆ ಆದಾಯ ಭೂ ದಣಿ ಆದಾಯ ಹೆಚ್ಚಾಗುವುದಂತೆ, ಏಕೆಂದರೆ 10 ರಲ್ಲಿ ಆರ್ಥಿಕ ಚೇತರಿಕೆಯನ್ನು ಅವಲಂಬಿಸಿ ಣಿ ರಾಜಸ್ವವು ಸ್ವಲ್ಪಮಟ್ಟಿಗೆ ಹೆಚ್ಚಾಗುವ ಕೆಯಿದೆ. 'ಮುಂಬರುವ ತಿಂಗಳುಗಳಲ್ಲಿ ರು ವಾಹನಗಳ ಮಾರುಕಟ್ಟೆಯಲ್ಲಿ ಸುಧಾರಣೆ ಬರುವ ಸಾಧ್ಯತೆಯಿದೆ' ಒಟ್ಟಿನಲ್ಲಿ 2008-09 ರಲ್ಲಿ 28,964 ಕೋಟಿ ತೆರಿಗೆ ಆದಾಯವಾದರೆ 2009-10 ರಲ್ಲಿ 32,721.25 ಕೋಟಿ ಅಂದರೆ 4000 ಕೋಟಿ ರೂ., ಹೆಚ್ಚು ಆದಾಯ ನಿರೀಕ್ಷಿಸುತ್ತಾರೆ. ವಿಶ್ವಬ್ಯಾಂಕ್ ಸೇರಿ ಇಡೀ ಜಗತ್ತು ಭಾರತದ ಆರ್ಥಿಕ ತಜ್ಞರೂ ಮುಂದಿನ ವರ್ಷದಲ್ಲಿ ಆರ್ಥಿಕ ಬಿಕ್ಕಟ್ಟು ಮತ್ತಷ್ಟು ತೀವ್ರಗೊಳ್ಳುತ್ತದೆ. ಒಂದು ಕೋಟಿಗೂ ಹೆಚ್ಚು ಜನ ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ ಎಂದು ಮುನ್ಸೂಚನೆ ನೀಡುತ್ತಿದ್ದರೂ ಯಡಿಯೂರಪ್ಪನವರು ಆರ್ಥಿಕತೆ ಚೇತರಿಕೆಯಾಗುತ್ತದೆ ಎಂದು ಜನರನ್ನು ಭ್ರಮೆಯಲ್ಲಿಡಲು ಬಯಸುತ್ತಾರೆ.

ಅದೇ ಸಮಯದಲ್ಲಿ ಆರ್ಥಿಕ ಬಿಕ್ಕಟ್ಟಿನಿಂದಾಗಿ ಕೇಂದ್ರ ಸರ್ಕಾರ ಹೆಚ್ಚೂ ಹಣವನ್ನು ಸಾರ್ವಜನಿಕ ಅಭಿವೃದ್ಧಿಗೆ ವಿನಿಯೋಗಿಸುತ್ತಾರೆ. ಅದರಿಂದ ರಾಜ್ಯಕ್ಕೆ ಹೆಚ್ಚು ಹಣ ಸಿಗುತ್ತದೆ ಎಂದೂ ಅಂದಾಜಿಸುತ್ತಾರೆ. ಬಿಕ್ಕಟ್ಟು ಕಡಿಮೆಯಾಗುತ್ತದೆ ಎಂದರೂ ರಾಜ್ಯ ಆದಾಯ ಹೆಚ್ಚುತ್ತದೆ. ಜೊತೆಗೆ ಬಿಕ್ಕಟ್ಟಿನ ಹೆಚ್ಚಾಗುವುದರಿಂದಲೂ ರಾಜ್ಯದ ಆದಾಯ ಹೆಚ್ಚಾಗುತ್ತದೆ. ಹೇಗಿದೆ ಯಡಿಯೂರಪ್ಪನವರ ಅರ್ಥಶಾಸ್ತ್ರ ಮತ್ತು ಲೆಕ್ಕಚಾರ.

ಸುಳ್ಳು ಆದಾಯದ ತೋರಿಕೆ ಮತ್ತು ಮಠಮಾನ್ಯಗಳಿಗೆ ಹಣದ ಚೆಲ್ಲಾಟ

ಸಂಘ ಪರಿವಾರಕ್ಕೆ ಬಜೆಟ್ ವರ್ಗಾವಣೆ ಈ ಸುಳ್ಳು ಆದಾಯದ ತೋರಿಕೆ ಯಡಿಯೂರಪ್ಪನವರಿಗೆ ಅನಿವಾರ್ಯವಾಗಿದೆ. ಪ್ರತಿಯೊಂದು ಜಾತಿಯೂ ಒಂದು ವೋಟಬ್ಯಾಂಕ್ ಆಗಿ ಕಾಣುವ ಯಡಿಯೂರಪ್ಪನವರಿಗೆ ಆಯಾ ಜಾತಿ, ಧರ್ಮಗಳ ಮಠಗಳು, ದೇವಸ್ಥಾನಗಳು, ಜಾತಿ ಸಂಘಗಳು, ದರ್ಗಾಗಳು ಇತ್ಯಾದಿಗಳಿಗೆ 60 ಕೋಟಿಯಷ್ಟು ಹಣವನ್ನು ಎರಚಾಡಿದರೂ ರಾಜ್ಯದ ಅಭಿವೃದ್ಧಿಗಾಗಿ ಮಾಡುವ ವೆಚ್ಚವೇನೂ ಕಡಿಮೆಯಾಗುವುದಿಲ್ಲ ಎಂದು ತೋರಿಸಬೇಕಾಗಿದೆ. ಅವುಗಳ ಜೊತೆಯಲ್ಲಿ ಆರೆಸ್ಸೆಸ್‌ಗೆ ಸಂಘ ಪರಿವಾರದ ವಿವಿಧ ಸಂಘಟನೆಗಳಿಗೆ ಹಣ ವರ್ಗಾಯಿಸಲು ಹೊಸ ಮಾರ್ಗಗಳನ್ನು ಅವರು ಹುಡುಕಬೇಕಾಗಿದೆ. ಸಾವಯವ ಕೃಷಿ, ಗೋಶಾಲೆ, ಯೋಗ, ಆಯುರ್ವೇದ ಇತ್ಯಾದಿಗಳ ಹೆಸರಿನಲ್ಲಿ ಹಾಗೂ ಇನ್ನೂ ಬಹಿರಂಗವಾಗದ ಅನೇಕ ಬಾಬ್ತುಗಳ ಹೆಸರಿನಲ್ಲಿ ಹಣವನ್ನು ವರ್ಗಾಯಿಸಲು ರಹಸ್ಯ ತಂತ್ರಗಳನ್ನು ಬಜೆಟ್‌ಗೊಳಕ್ಕೆ ಹೆಣೆಯಲಾಗಿದೆ.

ಸಾಂಸ್ಕೃತಿಕ ಮಾಧ್ಯಮರಂಗ ಮೇಲೆ ಹಿಡಿತ ಸಾಧಿಸುವ ಯತ್ನ:

ಒಂದು ಕಡೆ ಮಾಧ್ಯಮ, ಸಾಂಸ್ಕೃತಿಕ ರಂಗಗಳ ಮೇಲೆ ನಿರಂತರ ಟೀಕಾಪ್ರಹಾರ, ಕರಾವಳಿ ಅಲೆಯಂತಹ ಸ್ವತಂತ್ರ ಪತ್ರಿಕೆಗಳ ಮೇಲೆ ದಾಳಿ, ಮಾರಾಟಕ್ಕೆ ಅಡಚಣೆ ಮಾಡುತ್ತಲೇ ಮತ್ತೊಂದು ಕಡೆ ಮಾಧ್ಯಮರಂಗ ಸಾಂಸ್ಕೃತಿಕ ರಂಗಗಳವರೆಗೂ ಕೊಡುಗೆಗಳನ್ನು ಎರಚಾಡುತ್ತಾ ಬುಟ್ಟಿಗೆ ಹಾಕಿಕೊಳ್ಳುವ ಕೆಲಸವೂ ಬಜೆಟ್‌ನಲ್ಲಿ ಯಥೇಚ್ಛವಾಗಿ ನಡೆದಿದೆ.

ಸಾನಿಯಾ 'ಮುಗ್ಗರಿಸಿದ್ದು' - 'ಎಡವಿದ್ದು' ಇತ್ಯಾದಿ


ಫೆಬ್ರವರಿ 1 ರಂದು ಆಸ್ಟ್ರೇಲಿಯಾದ ಮೆಲ್ಬರ್ನ್‌ನಲ್ಲಿ ನಡೆದ ಆಸ್ಟ್ರೋಲಿಯಾ ಓಪನ್ ಟೆನಿಸ್ ಮಿಶ್ರ ಡಬಲ್ಸ್‌ನಲ್ಲಿ ಅಂದರೆ ಮಹಿಳಾ ಮತ್ತು ಪುರುಷ ರ ಜಂಟಿ ಆಟದಲ್ಲಿ ಭಾರತದ ಸಾನಿಯಾ ಹಾಗೂ ಭೂಪತಿ ಪ್ರಶಸ್ತಿ ಗಳಿಸಿದ್ದಾರೆ. ಭಾರತದ ಕ್ರೀಡಾಪ್ರೇಮಿಗಳಿಗೆ ಇದು ನಿಜಕ್ಕೂ ಒಂದು ಸಂತಸದ ಸುದ್ದಿ.

ಈ ಸುದ್ದಿ ಬಂದಾಗ ಮಾಧ್ಯಮದಲ್ಲಿ ಸಂಭ್ರಮವೇನೋ ವ್ಯಕ್ತವಾಯಿತು. ಆದರೆ ಆನಂತರದ ಮಾಧ್ಯಮಗಳ ಧೋರಣೆ ಮಾತ್ರ ಆಕ್ಷೇಪಾರ್ಹವಾಗಿದೆ.

ಸಾನಿಯಾ ಫೆಬ್ರವರಿ 17 ರಂದು ಥಾಯ್ಲೆಂಡ್‌ನ ಪಟ್ಟಾಯದಲ್ಲಿ ನಡೆದ WTA ಟೆನಿಸ್ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಸೆಮಿಫೈನಲ್‌ನಲ್ಲಿ ಜಯ ಸಾಧಿಸಿದರು. ಅಲ್ಲಿಯವರೆಗೆ ಸರಿ. ಫೈನಲ್‌ನಲ್ಲಿ ಸಾನಿಯಾ ಸೋತದ್ದೇ ತಡ ಶುರುವಾಯಿತು 'ಫೈನಲ್‌ನಲ್ಲಿ ಮುಗ್ಗರಿಸಿದ ಸಾನಿಯಾ', 'ಫೈನಲ್‌ನಲ್ಲಿ ಎಡವಿದ ಸಾನಿಯಾ' ಇತ್ಯಾದಿ ಇತ್ಯಾದಿ. ಯಾವುದೇ ಕ್ರೀಡಾಪಟು ಆಡುವ ಎಲ್ಲಾ ಸ್ಪರ್ಧೆಗಳಲ್ಲೂ ಗೆದ್ದೇ ಗೆಲ್ಲುವುದು ಸಾಧ್ಯವಾ? 'ಸಾನಿಯಾ ಸೆಮಿಫೈನಲ್‌ಗೇ ಸಮಾಧಾನ' ಎಂದರೆ ಅವರನ್ನು ಅಭಿನಂದಿಸಿದಂತೆಯೂ, ಫಲಿತಾಂಶ ಹೇಳಿದಂತೆ ಎರಡೂ ಉದ್ದೇಶ ಈಡೇರುವುದಿಲ್ಲವೇ?

1ನೇ ರ್‍ಯಾಂಕ್ ಬಂದಿಲ್ಲ ಅಂತ ಮಗುವನ್ನು ಮೂದಲಿಸಿದಂತಿದೆ ಈ ಧೋರಣೆ. ಎಲ್ಲಾ ಮಕ್ಕಳು ಪ್ರಥಮ ರ್‍ಯಾಂಕ್ ಬರಲು ಸಾಧ್ಯವೇ?


ಆಟದಲ್ಲಿ ಭೂಪತಿ-ಸಾನಿಯಾ ಜೋಡಿ


ಉಕ್ರೇನ್‌ನ ಡೊಂಟೆಸ್ಕ್‌ನಲ್ಲಿ ಭಾನುವಾರ ನಡೆದ ಒಳಾಂಗಣ ಅಥ್ಲೇಟಿಕ್ ಚಾಂಪಿಯನ್ ಷಿಪ್‌ನ ಮಹಿಳೆಯರ ಹೋಲ್‌ವಾಲ್ಟ್ ಸ್ಪರ್ಧೆಯಲ್ಲಿ ನೂತನ ವಿಶ್ವದಾಖಲೆ ನಿರ್ಮಿಸಿದ ರಶ್ಯಾದ ಎಲೆನಾ ಇಸಿನ್ಬಾಯೇನಾ

ಕವಿತೆ

ಸುಡುಗಾಡು

ಸಾವು ಬೇಡುವ ಭೂಮಿ
ಸುಡಗಾಡು ಇದು
ಕೊಟ್ಟಿದ್ದನ್ನು ಪಡೆದು ಲೆಕ್ಕವಿಡುತ್ತಿದೆ
ಒಂದು ಎರಡು ಮೂರು....

ಬೆಳ್ಳಂಬೆಳಿಗ್ಗೆ
ಮೂರು ವರ್ಷದ ಕೆಂಚ
ಈರಿಯ ಮಗ
ಹೊಲೆಗೇರಿಯಲ್ಲಿ ಊಟವಿಲ್ಲದೆ
ಸತ್ತ
ಸಮಾಧಿ ಮೇಲೆ ಹೂಗಳು ಬಾಡಿಲ್ಲ

ಮಟ ಮಟ ಮಧ್ಯಾಹ್ನ
ಇಪ್ಪತ್ತರ ಹರೆಯದ ಕರಿಯ
ಮಾರನ ಮಗ
ಕುರುಬಗೇರಿಯಲಿ ಖಾಯಿಲೆ ಬಿದ್ದು
ಸತ್ತ
ಸಮಾಧಿ ಮೇಲೆ ಹೂಗಳು ಬಾಡಿಲ್ಲ

ಗುದ್ದಲಿ ಹೆಗಲೇರಿಸಿ
ಗುದ್ದು ತೋಡಲು ಹೋದ
ಆ ನಾಲ್ಕು ಜನ
ತಿರುಗಿ ಬಂದಿಲ್ಲ
ಅವರ ಹಸಿವಿಗೆ
ಬುತ್ತಿ ಹೊರಬೇಕು

ಹೊತ್ತು ಮುಳುಗುವುದರೊಳಗೆ
ಇನ್ನಾರ ಸಾವೋ
ಉರಿವ ಸೂರ್ಯನದೋ
ಚಿಮಣಿ ದೀಪದ್ದೋ
ಒಲೆಯ ಬೆಂಕಿಯದೋ
ಯಾವ ಗುಡಿಸಲಿನ ಮುಂದೆ
ಅಲಾಯಿ ಕುಣಿತವೋ

ದೊಡ್ಡ ಮನೆಯ ತೋರಣ
ನಗುತ್ತಲೇ ಇದೆ
ಮುಚ್ಚಿದ ಬಾಗಿಲ ಮುಂದೆ

■ ವಿ.ಹರಿನಾಥಬಾಬು,
ಸಿರುಗುಪ್ಪ



ಬೆಲೆಮಾನಲ್ಲಿ ನಡೆದ ವಿಶ್ವ ಸಾಮಾಜಿಕ ವೇದಿಕೆ (WSF)ನ ಒಂದು ಚಿತ್ರ



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY
OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published
at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH